- ನಾನು ಬ್ರಹ್ಮಶ್ರೀ ನಾರಾಯಣ ಗುರುಗಳು ಮತ್ತು ಸ್ವಾಮಿ ವಿವೇಕಾನಂದರಂತಹ ಮಹಾನ್ ಆಧ್ಯಾತ್ಮಿಕ ದಾರ್ಶನಿಕರ ಪುಣ್ಯಭೂಮಿ, ಭಾರತದಿಂದ ಬಂದಿದ್ದೇನೆ ಎಂದು ಹೇಳಲು ಹೆಮ್ಮೆಯಾಗುತ್ತದೆ.
- ವಿಶ್ವ ಕ್ರೈಸ್ತ ಧರ್ಮ ಗುರು, ಅತ್ಯಂತ ಗೌರವಾನ್ವಿತ ಮತ್ತು ವಂದನೀಯ ಪೋಪ್ ಫ್ರಾನ್ಸಿಸ್ ಅವರನ್ನು ಭೇಟಿ ಮಾಡಿ ಅವರ ಆಶೀರ್ವಾದವನ್ನು ಪಡೆದಿರುವುದು ನನಗೆ ಜನಸೇವೆ ಮಾಡಲು ಇನ್ನಷ್ಟು ಶಕ್ತಿ ನೀಡಿದೆ.
- ನೂರು ವರ್ಷಗಳ ನಂತರ ಈ ಮೈಲಿಗಲ್ಲನ್ನು ಆಚರಿಸುವುದು ಕೇವಲ ಒಂದು ಸ್ಮರಣಾರ್ಥ ಸಮ್ಮೇಳನವಾಗಿ ಮಾತ್ರವಲ್ಲ–ಇದು ಹೊಸ ಸಾಮರಸ್ಯ ಸಮಾಜದ ನಿರ್ಮಾಣಕ್ಕೆ ನೀಡುವಂತಹ ಒಂದು ಶಕ್ತಿಯುತ ಕರೆಯಾಗಿದೆ.
- ಯಾವುದೇ ಧರ್ಮ ಮತ್ತು ಸಮಾಜವು ಕೀಳರಿಮೆ ಹಾಗೂ ಪ್ರತ್ಯೇಕತೆಯನ್ನು ಅನುಭವಿಸುವ ವಾತಾವರಣವಿರಬಾರದು.
- ಧಾರ್ಮಿಕ ನಂಬಿಕೆ ದೌರ್ಬಲ್ಯವಲ್ಲ, ಅದು ಭೂಮಿಯ ಮೇಲಿನ ಸೌಹಾರ್ದತೆಯ ಪ್ರಬಲ ಶಕ್ತಿಯಾಗಿದೆ.
- ನಾವು ವೈವಿಧ್ಯತೆಗಳನ್ನು ಹೊಂದಿದ್ದರೂ, ಪ್ರತಿಯೊಬ್ಬರೊಳಗಿರುವ ದೈವಿಕ ಚೇತನವು ಒಂದೇ.
- ಸಮಾಜವನ್ನು ಮುನ್ನಡೆಸುವ ನನ್ನ ಸಹೋದರ ಸಹೋದರಿಯರೇ, ನಾವಿಂದು ದ್ವೇಷವನ್ನು ತಿರಸ್ಕರಿಸುವ ಪ್ರತಿಜ್ಞೆ ಮಾಡೋಣ.

**ವ್ಯಾಟಿಕನ್ ನಗರದಲ್ಲಿ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಫರೀದ್ ಅವರಿಂದ ಐತಿಹಾಸಿಕ ಭಾಷಣ.**

ರೋಮಿನ ವ್ಯಾಟಿಕನ್ ನಗರದಲ್ಲಿ, ಬ್ರಹ್ಮಶ್ರೀ ನಾರಾಯಣ ಗುರುಗಳ ಮೊದಲ ಅಂತರರಾಷ್ಟ್ರೀಯ ಸರ್ವ ಧರ್ಮ ಸಮ್ಮೇಳನದ ಶತಮಾನೋತ್ಸವ ಸ್ಮರಣಾರ್ಥ ನಡೆದ "ಮಾನವೀಯತೆಗಾಗಿ ಧರ್ಮಗಳ ಒಗ್ಗಟ್ಟು" ಎಂಬ ಶೀರ್ಷಿಕೆಯೊಂದಿಗೆ ಆಯೋಜಿಸಲಾದ ಮೂರು ದಿನಗಳ ವಿಶ್ವ ಸರ್ವ ಧರ್ಮ ಸಮ್ಮೇಳನದಲ್ಲಿ, ಕರ್ನಾಟಕ ರಾಜ್ಯ ವಿಧಾನಸಭೆಯ ಗೌರವಾನ್ವಿತ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಫರೀದ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ತಮ್ಮ ಐತಿಹಾಸಿಕ ಭಾಷಣ ಮಾಡಿ, ನೆರೆದಿದ್ದ ಸಭಿಕರನ್ನು ಚಕಿತಗೊಳಿಸಿದರು.

**ಸಾರಾಂಶ :**

ಗೌರವಾನ್ವಿತ ಗಣ್ಯರೇ, ಪೂಜ್ಯ ಆಧ್ಯಾತ್ಮಿಕ ನಾಯಕರೇ, ಸತ್ಯದ ಅನ್ವೇಷಕರೇ, ಶಾಂತಿಯ ಪ್ರತಿಪಾದಕರೇ ಮತ್ತು ನನ್ನ ಪ್ರೀತಿಯ ಸಹೋದರ ಸಹೋದರಿಯರೇ ಎಲ್ಲರಿಗೂ ನನ್ನ ನಮಸ್ಕಾರಗಳು.

ನಾನು ಇಲ್ಲಿ ಯಾವುದೇ ಒಂದು ಧರ್ಮದ ಪ್ರತಿನಿಧಿಯಾಗಿ ಬಂದಿಲ್ಲ, ಬದಲಾಗಿ ಮಾನವೀಯತೆಯ ವಿನಮ್ರ ಧ್ವನಿಯಾಗಿ, ಶಾಂತಿ, ಪ್ರೀತಿ ಮತ್ತು ಸೌಹಾರ್ದತೆಯಿಂದ ತುಂಬಿದ ಒಂದು ಸುಂದರ ಪ್ರಪಂಚದ ಕನಸು ಕಾಣುವ ಶತಕೋಟಿ ಜನರ ಸಾಮೂಹಿಕ ಆಶಯ, ಹೋರಾಟ ಮತ್ತು ಆಕಾಂಕ್ಷೆಗಳನ್ನು ಹೊತ್ತುಕೊಂಡು ಅವರೆಲ್ಲರ ಧ್ವನಿಯಾಗಿ ಇಲ್ಲಿ ನಿಮ್ಮೆದುರು ನಿಂತಿದ್ದೇನೆ.

1924ರಲ್ಲಿ, ಭಾರತದ ಕೇರಳ ರಾಜ್ಯದ ಆಲುವಾದಲ್ಲಿರುವ ದ್ವೈತ ಆಶ್ರಮದಲ್ಲಿ, ಬ್ರಹ್ಮಶ್ರೀ ನಾರಾಯಣ ಗುರುಗಳು ಆಯೋಜಿಸಿದ್ದ ಮೊದಲ ಅಂತರ್‌ರಾಷ್ಟ್ರೀಯ ಸರ್ವಧರ್ಮ ಸಮ್ಮೇಳನದ ಶತಮಾನೋತ್ಸವದ ಸ್ಮರಣಾರ್ಥ ನಡೆಸುತ್ತಿರುವ ಈ ಐತಿಹಾಸಿಕ ವಿಶ್ವ ಸಮ್ಮೇಳನದಲ್ಲಿ ಭಾಗವಹಿಸಲು ನನಗೆ ಅವಕಾಶ ದೊರಕಿರುವುದು ನನಗೆ ಗೌರವ ಮತ್ತು ಸಂತೋಷದ ವಿಷಯವಾಗಿದೆ.

ವಿವಿಧ ಧರ್ಮಗಳ ಪುರೋಹಿತರು, ಚಿಂತಕರು ಮತ್ತು ನಾಯಕರು ಒಂದೇ ವೇದಿಕೆಯಲ್ಲಿ ಸೇರಿ, ಶಾಂತಿ, ಸಹಬಾಳ್ವೆ ಮತ್ತು ಮಾನವೀಯತೆಯ ಮಹತ್ವದ ಸಂದೇಶವನ್ನು ನೀಡಿದ ಅಂದಿನ ಆ ಸರ್ವ ಧರ್ಮ ಸಮ್ಮೇಳನವು, ಆ ಕಾಲಘಟ್ಟದಲ್ಲಿ ಸಮಾಜದಲ್ಲಿ ಕ್ರಾಂತಿಕಾರಿ ಬೆಳವಣಿಗೆಗೆ ನಾಂದಿ ಹಾಡಿದ ಹಾಗೂ ತಾತ್ವಿಕ ಚಿಂತನೆಗಳ ಏಕತೆಯನ್ನು ಸೃಷ್ಟಿಸಲು ಹೆಜ್ಜೆ ಇಟ್ಟ ಮಹತ್ವದ ಘಟನೆಯಾಗಿತ್ತು. ಸಮಾಜದಲ್ಲಿ ವ್ಯಾಪಕವಾದ ತಾರತಮ್ಯ ಮತ್ತು ವಿಭಜನೆ ಅತಿ ಪ್ರಬಲವಾಗಿದ್ದ ಕಾಲಘಟ್ಟದಲ್ಲಿ, ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವಗಳು, ಆದರ್ಶಗಳು ಮತ್ತು ಸಾಮಾಜಿಕ ಸುಧಾರಣೆಗಳು ಜನರ ಬದುಕಿಗೆ ಸಾಂತ್ವನದ ಬೆಳಕನ್ನು ನೀಡುವ ದಾರಿ ದೀಪವಾಗಿ ಪರಿಣಮಿಸಿತ್ತು.

"ಒಂದು ಜಾತಿ, ಒಂದು ಧರ್ಮ ಮತ್ತು ಒಬ್ಬ ದೇವರು" ಎಂಬ ಅವರ ಬೋಧನೆಯು ಕೇರಳದಲ್ಲಿ ಸಾಮಾಜಿಕ ಸಮಾನತೆ, ಸಾಮರಸ್ಯ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಪ್ರತಿಪಾದಿಸುವ ಮಹತ್ವದ ಸಾಮಾಜಿಕ ಆಂದೋಲನವನ್ನು ಸೃಷ್ಟಿಸಿತ್ತು. ಜೊತೆಗೆ, ಶ್ರೀನಾರಾಯಣ ಗುರುಗಳು ಸಮಾಜದ ಸಬಲೀಕರಣ ಮತ್ತು ಉನ್ನತೀಕರಣದಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಜನರಲ್ಲಿ ಗಾಢವಾದ ಅರಿವು ಮೂಡಿಸಿದವರು.

ಬ್ರಹ್ಮಶ್ರೀ ನಾರಾಯಣ ಗುರುಗಳು ಮತ್ತು ಸ್ವಾಮಿ ವಿವೇಕಾನಂದರಂತಹ ಮಹಾನ್ ಆಧ್ಯಾತ್ಮಿಕ ದಾರ್ಶನಿಕರ ಪುಣ್ಯಭೂಮಿ ಭಾರತದಿಂದ ಬಂದಿದ್ದೇನೆ ಎಂದು ಹೇಳಲು ನಾನು ಹೆಮ್ಮೆಪಡುತ್ತೇನೆ. ಹಾಗೆಯೇ, ನನಗೆ ಮತ್ತು ನನ್ನಂತಹ ಅಸಂಖ್ಯಾತರಿಗೆ ಏಕತೆ, ಶಾಂತಿ ಮತ್ತು ಸೌಹಾರ್ದತೆಯಿಂದ ಕೂಡಿದ ಹೊಸ ಸಮಾಜ ನಿರ್ಮಾಣಕ್ಕೆ ಪ್ರೇರೇಪಣೆ ನೀಡಿದ ಈ ಮಹಾನ್ ವ್ಯಕ್ತಿಗಳನ್ನು ಈ ಸಂದರ್ಭದಲ್ಲಿ ಅತ್ಯಂತ ಗೌರವಪೂರ್ವಕವಾಗಿ ಸ್ಮರಿಸುತ್ತೇನೆ. ನೂರು ವರ್ಷಗಳ ನಂತರ ಈ ಮೈಲಿಗಲ್ಲನ್ನು ಆಚರಿಸುವುದು ಕೇವಲ ಒಂದು ಸ್ಮರಣಾರ್ಥ ಸಮ್ಮೇಳನವಾಗಿ ಮಾತ್ರವಲ್ಲ–ಇದು ಹೊಸ ಸಾಮರಸ್ಯ ಸಮಾಜದ ನಿರ್ಮಾಣಕ್ಕೆ ನೀಡುವಂತಹ ಒಂದು ಶಕ್ತಿಯುತ ಕರೆಯಾಗಿದೆ.

ಕಳೆದ ಶತಮಾನದಲ್ಲಿ ನಡೆದ ಗಮನಾರ್ಹವಾದ ಪ್ರಗತಿಗಳು, ವಿಶೇಷವಾಗಿ ತಂತ್ರಜ್ಞಾನದಲ್ಲಿ ನಡೆದ ಅನ್ವೇಷಣೆಗಳು ಮತ್ತು ಜಾಗತೀಕರಣದ ಪರಿಣಾಮವಾಗಿ, ನಾವು ಭೌತಿಕವಾಗಿ ಹತ್ತಿರವಾಗಿದ್ದೇವೆ. ಆದರೆ, ನಮ್ಮ ಹೃದಯಗಳು ಮತ್ತಷ್ಟು ದೂರ ಹೋಗಿವೆ. ಅಸಮಾನತೆ, ಅಜ್ಞಾನ, ಅಸಹಿಷ್ಣುತೆ ಮತ್ತು ಪೂರ್ವಾಗ್ರಹಗಳಿಂದ ಪ್ರೇರಿತವಾದ ಭಯ ಮತ್ತು ಅಪನಂಬಿಕೆಗಳು ನಮ್ಮ ಮನಸ್ಸುಗಳನ್ನು ಆವರಿಸಿಕೊಂಡಿವೆ. ಇದರ ಪರಿಣಾಮವಾಗಿ, ಮಾನವೀಯತೆಯ ಮೂಲಭೂತ ಮೌಲ್ಯಗಳು ಮಸುಕಾಗಿವೆ. ಸಮಾಜದಲ್ಲಿ ಎಲ್ಲಾ ವರ್ಗಗಳ ಜನರ ಕೂಗು, ಸಂಘರ್ಷಗಳು ಮತ್ತು ಈ ಜಗತ್ತಿನ ಮೌನ ರೋಧನೆಗಳು ನಮ್ಮೆಲ್ಲರ ತುರ್ತು ಗಮನಕ್ಕೆ ಕಾದಿವೆ. ಸಮ್ಮೇಳನದ ಈ ಮಹತ್ವಪೂರ್ಣ ಕ್ಷಣಗಳು ಶ್ರೀ ನಾರಾಯಣ ಗುರುಗಳ ಬೋಧನೆಗಳನ್ನು ಪುನರ್ಮನನ ಮಾಡುವ ಕ್ಷಣಗಳು ಮಾತ್ರವಲ್ಲ, ಅದು ಧಾರ್ಮಿಕ ಧ್ರುವೀಕರಣ, ಸಾಮಾಜಿಕ ಅನ್ಯಾಯ ಮತ್ತು ಅಂತರ್ಧರ್ಮೀಯ ಸಂವಾದದ ನಿರ್ಣಾಯಕ ಅಗತ್ಯವನ್ನು ಸ್ಪಷ್ಟವಾಗಿ ಎಲ್ಲರಿಗೆ ಸೂಚಿಸುವ ಸಮಯೋಚಿತ ಜ್ಞಾಪನೆಯಾಗಿವೆ.

ಆದ್ದರಿಂದ, "ಮಾನವೀಯತೆಗಾಗಿ ಧರ್ಮಗಳ ಏಕತೆ" ಎಂಬ ಈ ವಿಶ್ವ ಸಮ್ಮೇಳನವನ್ನು ಆಯೋಜಿಸಿದ ಶಿವಗಿರಿ ಮಠದ ಶ್ರೀ ನಾರಾಯಣ ಧರ್ಮ ಸಂಘದ ಟ್ರಸ್ಟ್‌ನ ಅಧ್ಯಕ್ಷರಾದ ಸ್ವಾಮಿ ಸಚ್ಚಿದಾನಂದರಿಗೆ, ಕಾರ್ಡಿನಲ್ ಮಿಗುಯೆಲ್ ಏಂಜೆಲ್ ಆಯುಸೊ ಗುಯಿಕ್ಸೊಟ್, M.C.C.J. ಅಂತರಧರ್ಮಿಯ ಸಂವಾದದ ಡಿಕ್ಯಾಸ್ಟರಿಯ ಪ್ರಿಫೆಕ್ಟ್, ಕಾರ್ಡಿನಲ್– ಡೆಸಿಗ್ನೇಟ್ ಮಾನ್ಸಿಂಜರ್ ಜಾರ್ಜ್ ಕೂವಕಾಡ್ ಮತ್ತು ಅವರ ತಂಡಕ್ಕೆ, ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇಂದು, ನಾವು ಈ ಐತಿಹಾಸಿಕ ಮತ್ತು ಆಧ್ಯಾತ್ಮಿಕತೆಯ ಸಾರವನ್ನು ಸಾರುವ ಪವಿತ್ರ ನಗರವಾದ ವ್ಯಾಟಿಕನ್‌ನಲ್ಲಿ ಒಟ್ಟು ಸೇರಿದ್ದೇವೆ. ಈ ಶುಭ ಸಂದರ್ಭದಲ್ಲಿ, ನನಗೆ ನನ್ನ ತಾಯ್ನಾಡಾದ ಭಾರತದ ಪೂಜ್ಯ ಋಷಿ ಮುನಿಗಳ "ವಸುದೈವ ಕುಟುಂಬಕಂ" ಜಗತ್ತು ಒಂದೇ ಕುಟುಂಬ ಎನ್ನುವ ಅಮರ ನುಡಿಗಳು ನೆನಪಿಗೆ ಬರುತ್ತದೆ. ಎಲ್ಲರೂ ನಮ್ಮವರು ಎನ್ನುವ ಈ ಪ್ರಾಚೀನ ಮಂತ್ರವು ಇಂದಿನ ಈ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿದ್ದು, ನಮ್ಮ ದೇಶದ ಸಂವಿಧಾನದ ಆದರ್ಶವನ್ನೂ ಪ್ರತಿಬಿಂಬಿಸುತ್ತದೆ. ತಾರತಮ್ಯ ಮತ್ತು ವಿಭಜನೆಯಿಂದ ನಲುಗುತ್ತಿರುವ ಸಮಾಜದಲ್ಲಿ ಪ್ರಬಲ ಧ್ವನಿಗಳು ದ್ವೇಷವನ್ನು ಪ್ರಚೋದಿಸುತ್ತಿರುವಾಗ, ನಾವು ಒಗ್ಗಟ್ಟಾಗಿ ಏಕತೆ ಮತ್ತು ಸಹಿಷ್ಣುತೆಯ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶಕರಾಗಬೇಕು.

ವಿಶ್ವ ಕ್ರೈಸ್ತ ಧರ್ಮ ಗುರು, ಅತ್ಯಂತ ಗೌರವಾನ್ವಿತ ಮತ್ತು ವಂದನೀಯ ಪೋಪ್ ಫ್ರಾನ್ಸಿಸ್ ಅವರನ್ನು ಖುದ್ದಾಗಿ ಭೇಟಿ ಮಾಡಿ ಅವರ ಆಶೀರ್ವಾದವನ್ನು ಪಡೆದಿರುವುದು, ನನಗೆ ಜನಸೇವೆ ಮಾಡಲು ಇನ್ನಷ್ಟು ಶಕ್ತಿ ನೀಡಿದೆ. ಪೋಪ್ ಫ್ರಾನ್ಸಿಸ್ ಅವರ ಸಹೃದಯತೆ, ಪ್ರೀತಿ ಮತ್ತು ಔದಾರ್ಯವು ನನ್ನ ಹೃದಯವನ್ನು ಸ್ಪರ್ಶಿಸಿದೆ. ಅಂತರ್ ಧರ್ಮವಿಯ ಸಂವಾದದ ಮೂಲಕ, ಅವರು ಶಾಂತಿ, ನ್ಯಾಯ ಮತ್ತು ಸಹಿಷ್ಣುತೆಯನ್ನು ಪ್ರೋತ್ಸಾಹಿಸುವ 21ನೇ ಶತಮಾನದ ಅತ್ಯಂತ ಪ್ರಭಾವಶಾಲಿ ಗುರುಗಳಾಗಿದ್ದಾರೆ ಎಂದು ಹೇಳಲು ಸಂತೋಷ ಪಡುತ್ತೇನೆ.

ಪ್ರತಿಯೊಂದು ಧರ್ಮಗ್ರಂಥ, ನಂಬಿಕೆ ಮತ್ತು ಆಧ್ಯಾತ್ಮಿಕ ಮಾರ್ಗದ ಮೂಲ ತತ್ವವು ಅಚಲವಾದ ಪ್ರೀತಿ ಮತ್ತು ಕರುಣೆಯಾಗಿದೆ. ಅದು ಪವಿತ್ರ ಬೈಬಲ್, ಕುರಾನ್, ವೇದಗಳು, ಧಮ್ಮಪದ ಅಥವಾ ಟೋರಾ ಆಗಿರಲಿ, ಎಲ್ಲ ಧರ್ಮಗ್ರಂಥಗಳ ಸಾರವೇ ಇದು: "ನಾವೆಲ್ಲರೂ ಒಂದೇ". ಇದು ಯಾವ ಕಾಲದಲ್ಲೂ ಬದಲಾವಣೆಯಾಗುವುದಿಲ್ಲ ಎನ್ನುವ ಮೂಲಭೂತ ಸತ್ಯವನ್ನು ನಾವು ಸದಾ ನೆನಪಿಟ್ಟುಕೊಳ್ಳಬೇಕು. ಭಾಷೆ, ಸಂಸ್ಕೃತಿ ಮತ್ತು ಆಚರಣೆಗಳಲ್ಲಿ ನಾವು ವೈವಿಧ್ಯತೆ ಹೊಂದಿದ್ದರೂ, ಪ್ರತಿಯೊಬ್ಬರೊಳಗೆ ಇರುವ ದೈವಿಕ ಚೇತನವು ಒಂದೇ. ಸಾಮರಸ್ಯ ಎಂದರೆ, ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಅಳಿಸಿಹಾಕಬೇಕೆಂದಲ್ಲ. ಅವೆಲ್ಲವನ್ನೂ ಸ್ವೀಕರಿಸಿ ನಾವು ಏಕತೆಯ ಕಡೆ ಮುನ್ನಡೆಯಬೇಕು. ದೈವತ್ವವು ಕೂಡಾ ವೈವಿಧ್ಯತೆಯಲ್ಲಿಯೇ ಪ್ರಕಟವಾಗುತ್ತದೆಯೇ ಹೊರತು, ಏಕತಾನತೆಯಲ್ಲಿ ಅಲ್ಲ.

ಯಾವುದೇ ಧರ್ಮವು ಕೀಳರಿಮೆಯಿಂದ ಬಳಲಬಾರದು, ಯಾವುದೇ ವರ್ಗವು ಪ್ರತ್ಯೇಕತೆಯನ್ನು ಅನುಭವಿಸಬಾರದು. ಧಾರ್ಮಿಕ ನಂಬಿಕೆಗಳು ಸ್ಪರ್ಧೆಯ ವಿಷಯವಲ್ಲ; ಅವು ಸಹಯೋಗ ಮತ್ತು ಸತ್ಯದ ಕಡೆಗೆ ನಂಬಿಕೆಯ ಪಯಣವಾಗಿದೆ. ಧಾರ್ಮಿಕ ನಂಬಿಕೆ ದೌರ್ಬಲ್ಯವಲ್ಲ, ಅದು ಭೂಮಿಯ ಮೇಲಿನ ಸೌಹಾರ್ದತೆಯ ಪ್ರಬಲ ಶಕ್ತಿಯಾಗಿದೆ. ಕಾಮನಬಿಲ್ಲಿನ ವೈಭವವನ್ನು ಸೃಷ್ಟಿಸಲು ಅನೇಕ ಬಣ್ಣಗಳು ಸಾಮರಸ್ಯದಿಂದ ಬೆರೆತಂತೆ, ನಾವು ವೈವಿಧ್ಯತೆಯ ಶಕ್ತಿಯನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಬೇಕು. ಅದು ಗಾಯ ಮಾಡುವ ಕತ್ತಿಯಂತೆ ಅಲ್ಲ, ಬದಲಾಗಿ ಗಾಯವನ್ನು ಗುಣಪಡಿಸುವ ಔಷಧಿಯಂತೆ ಆಗಬೇಕು.

ಏಕತೆ ಕೇವಲ ನಮ್ಮ ಆಲೋಚನೆಗಳಲ್ಲಿ ಇದ್ದರೆ ಸಾಲದು, ಅದನ್ನು ಕಾರ್ಯರೂಪಕ್ಕೆ ತರಲು ನಾವು ಪ್ರಯತ್ನಿಸಬೇಕು. ಜಗತ್ತಿಗೆ ಹೆಚ್ಚು ಸಿದ್ಧಾಂತಗಳ ಅವಶ್ಯಕತೆಯಿಲ್ಲ, ಬದಲಾಗಿ, ನಮ್ಮ ದೈನಂದಿನ ಕಾರ್ಯಗಳಲ್ಲಿ ಕರುಣೆ ಮತ್ತು ಸಹಾನುಭೂತಿಯ ಅನುಷ್ಠಾನದ ಅವಶ್ಯಕತೆ ಇದೆ. ನಿಜವಾದ ಧರ್ಮವು ಬಾಯಿಮಾತಿನ ಭೋದನೆಯಲ್ಲಿಲ್ಲ, ಕಷ್ಟದಲ್ಲಿರುವವರಿಗೆ ನೀಡುವ ಸಹಾಯ ಹಸ್ತದಲ್ಲಿ, ತುಳಿತಕ್ಕೆ ಒಳಗಾದವರನ್ನು ಮೇಲೆತ್ತಲು ಮಾಡುವ ಪ್ರಯತ್ನದಲ್ಲಿ, ಅನ್ಯಾಯಕ್ಕೊಳಗಾದವರ ಪರವಾಗಿ ನಾವು ಎತ್ತುವ ಧ್ವನಿಯಲ್ಲಿ ಅಡಕವಾಗಿದೆ.

ಸಮಾಜವನ್ನು ಮುನ್ನಡೆಸುವ ನನ್ನ ಸಹೋದರ ಸಹೋದರಿಯರೇ, ನಾವಿಂದು ದ್ವೇಷವನ್ನು ತಿರಸ್ಕರಿಸುವ ಪ್ರತಿಜ್ಞೆ ಮಾಡೋಣ. ನಾವು ಇಲ್ಲಿ ಸೇರಿರುವುದು ಮನಸ್ಸುಗಳ ನಡುವೆ ಗೋಡೆಗಳನ್ನು ನಿರ್ಮಿಸಲು ಅಲ್ಲ, ಪರಸ್ಪರ ಅರ್ಥಮಾಡಿಕೊಂಡು, ನಂಬಿಕೆಯ ಸೇತುವೆ ನಿರ್ಮಾಣ ಮಾಡಲು ಮತ್ತು ಸ್ವಸ್ಥ ಸಮಾಜವನ್ನು ಕಟ್ಟಲು.

ನಮ್ಮ ಧರ್ಮ ವೇದಿಕೆಗಳು ಭಯವನ್ನು ಹುಟ್ಟಿಸುವುದಕ್ಕಿಂತ, ಜನರಲ್ಲಿ ಭರವಸೆ ಮತ್ತು ಪ್ರೀತಿ ಮೂಡಿಸಲು ಪ್ರೇರಣೆಯಾಗಬೇಕು. ವಿದ್ಯಾರ್ಥಿಗಳಿಗೆ ಸರ್ವ–ಧರ್ಮ ಶಿಕ್ಷಣವನ್ನು ನೀಡುವುದು ಅತ್ಯವಶ್ಯಕವಾಗಿದೆ. ಅವರ ಪರಿಶುದ್ಧ ಮನಸ್ಸಿನಲ್ಲಿ ಅವರ ಧಾರ್ಮಿಕ ನಂಬಿಕೆಗಳ ಇತಿಹಾಸದ ಜೊತೆಗೆ, ಇತರ ಧರ್ಮಗಳ ತತ್ವಗಳ ಸೌಂದರ್ಯವನ್ನೂ ಪರಿಚಯಿಸೋಣ. ಬ್ರಹ್ಮಶ್ರೀ ನಾರಾಯಣ ಗುರುಗಳ ಕಾಲಾತೀತ ಸಂದೇಶವಾದ **"ಒಂದು ಜಾತಿ, ಒಂದು ಧರ್ಮ ಮತ್ತು ಒಬ್ಬ ದೇವರು"** ಎಂಬ ಪರಿಕಲ್ಪನೆಯನ್ನು ಅವರಿಗೆ ಮನನ ಮಾಡಿಸಿ, ಅವರು ಎಲ್ಲಾ ಧರ್ಮಗಳನ್ನು ಗೌರವಿಸುವಂತೆ ಮಾಡಿ, ಆ ಮೂಲಕ ಸಮಾಜಕ್ಕೆ ನಮ್ಮ ಕೊಡುಗೆಯನ್ನು ನೀಡೋಣ.

ವಿಶ್ವದ ಅತಿ ಪವಿತ್ರ ನಗರವೆಂದೇ ಖ್ಯಾತಿಯಾಗಿರುವ ವ್ಯಾಟಿಕನ್ ಸಿಟಿಯಲ್ಲಿ ನಡೆದ ಈ ವಿಶ್ವ ಸರ್ವಧರ್ಮ ಸಮ್ಮೇಳನವು ಮಾನವೀಯತೆಯನ್ನು ಜಗತ್ತಿಗೆ ಸಾರಿ, ಎಲ್ಲ ವೈವಿಧ್ಯತೆಗಳನ್ನು ಮೀರಿ, ಎಲ್ಲಾ ತತ್ವಗಳನ್ನು ಆಲಂಗಿಸಿ, ಒಂದು ಹೊಸ ಯುಗದ ಉದಯವಾಗುವಂತೆ ಮಾಡುವಂತಾಗಲಿ ಎಂದು ಹಾರಿಸುತ್ತೇನೆ.

"ವಿಶ್ವದಲ್ಲಿ ಶಾಂತಿ ಸದಾ ನೆಲೆಸಲಿ, ಮಾನವೀಯತೆ ಚಿರಾಯುವಾಗಲಿ!ಜೈ ಹಿಂದ್!"

### xxi. ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿ

ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನ ಯಶಸ್ವಿಗೆ ಹಾಗೂ ಕಲಾಪವನ್ನು ರಚನಾತ್ಮಕವಾಗಿ ನಡೆಸಲು ವಿಧಾನಪರಿಷತ್ ಸದಸ್ಯರಿಗೆ ಅನೇಕ ಸಲಹೆಗಳನ್ನು ನೀಡಲಾಗಿದೆ. ದಿನಾಂಕ: 10.12.2024 ಮತ್ತು 11.12.2024ರಂದು ಪ್ರಶ್ನೋತ್ತರ ವೇಳೆಯ ನಂತರ ಸಂಪೂರ್ಣ ಕಿತ್ತೂರು ಕಲ್ಯಾಣ ಪ್ರಾಂತ್ಯಗಳ ಅಭಿವೃದ್ಧಿ ಕುರಿತು ಚಿಂತನೆ ನಡೆಸಲು ಸದಸ್ಯರಿಗೆ ಸಲಹೆ ನೀಡಲಾಗಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ತಿಳಿಸಿದರು. ಅಧಿವೇಶನದ ಹಿನ್ನೆಲೆಯಲ್ಲಿ ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ದಿನಾಂಕ:07.12.2024ರಂದು ಜರುಗಿದ್ದ ಪತ್ರಿಕಾಗೋಷ್ಠಿಯಲ್ಲಿ

ಈ ವಿಷಯ ತಿಳಿಸಿದರು. ಬೆಳಗಾವಿ ಅಧಿವೇಶನ ಯಶಸ್ವಿಗೆ ಹಾಗೂ ಪರಿಷ್ಕೃತ ಕಲಾಪವನ್ನು ರಚನಾತ್ಮಕವಾಗಿ ನಡೆಸಲು ವಿಧಾನಪರಿಷತ್ ಸದಸ್ಯರಿಗೆ ಈಗಾಗಲೇ ಅನೇಕ ಸಲಹೆಗಳನ್ನು ನೀಡಲಾಗಿದೆ. ಅಧಿವೇಶನ ನಡೆಸಲು ಈ ಬಾರಿ 20 ಕೋಟಿ ಅಂದಾಜಿಸಲಾಗಿದೆ. ಶಾಸಕರಭವನ ನಿರ್ಮಿಸಲು ಕೆಲವು ಪ್ರಸ್ತಾವನೆಗಳು ಬಂದಿವೆ. ಇವುಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು. ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಬೆಳಗಾವಿ ವಿಭಜನೆ ಸಾಧಕ–ಬಾಧಕಗಳ ಬಗ್ಗೆ ಸರ್ಕಾರದ ಹಂತದಲ್ಲಿ ಚರ್ಚೆಯಾಗಬೇಕಿದೆ ಎಂದು ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ತಿಳಿಸಿದರು.





ಪತ್ರಿಕಾಗೋಷ್ಠಿಯಲ್ಲಿ ಬೆಳಗಾವಿ ಜಿಲ್ಲಾಧಿಕಾರಿ ಮೊಹಮದ್, ವಿಧಾನಪರಿಷತ್ ಕಾರ್ಯದರ್ಶಿ ಶ್ರೀಮತಿ ಕೆ.ಆರ್.ಮಹಾಲಕ್ಷ್ಮೀ, ಪೊಲೀಸ್ ಆಯುಕ್ತ ಡಾ.ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ಮಿಂಧೆ, ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಮತ್ತಿತರರು ಉಪಸ್ಥಿತರಿದ್ದರು.

### xxii. ಬೆಳಗಾವಿ ಸುವರ್ಣ ವಿಧಾನಸೌಧದ ಅಧಿವೇಶನ ಸಿದ್ದತಾ ಸಭೆ ಹಾಗೂ ಪರಿಶೀಲನೆ

ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ದಿನಾಂಕ: 09.12.2024 ರಿಂದ 20.12.2024 ರವರೆಗೆ ನಡೆದ ವಿಧಾನಸಭೆ ಅಧಿವೇಶನದ ಕುರಿತು ಸಿದ್ದತೆಯ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:08.12.2024ರಂದು ಸುವರ್ಣ ವಿಧಾನಸೌಧಕ್ಕೆ ಭೇಟಿ ನೀಡಿ ವಿಧಾನಸಭೆಯ ಕಾರ್ಯದರ್ಶಿ, ಬೆಳಗಾವಿ ಜಿಲ್ಲಾಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳೊಂದಿಗೆ ಸುವರ್ಣ ವಿಧಾನಸೌಧದ ಆವರಣ ಮತ್ತು ವಿಧಾನಸಭೆ ಸಭಾಂಗಣವನ್ನು ವೀಕ್ಷಿಸಿ ಹೊಸದಾಗಿ ಸ್ಥಾಪಿಸಿರುವ ಸಭಾಧ್ಯಕ್ಷರ ಪೀಠವನ್ನು ಪರಿಶೀಲಿಸಿದರು ಹಾಗೂ ಅಧಿವೇಶನ ಕುರಿತು ಕೈಗೊಳ್ಳಬೇಕಾದ ತುರ್ತು ಕಾರ್ಯಗಳ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಿ, ಅಧಿವೇಶನ ಕುರಿತು ಪತ್ರಿಕಾಗೋಷ್ಠಿಯನ್ನು ನಡೆಸಿದರು. ದಿನಾಂಕ: 09.12.2024 ರಂದು ಬೆಳಗ್ಗೆ 10.30 ಗಂಟೆಗೆ ಅನಾವರಣಗೊಳ್ಳಲಿರುವ ಅನುಭವ ಮಂಟಪ ತೈಲ ಚಿತ್ರದ ಕಾರ್ಯಕ್ರಮದ ಬಗ್ಗೆ ಅಗತ್ಯ ಸೂಚನೆಗಳನ್ನು ನೀಡಿದರು.











**xxiii. ಬೆಳಗಾವಿ ಸುವರ್ಣಸೌಧದಲ್ಲಿ "ಅನುಭವ ಮಂಟಪ"ದ ವೈಭವ : ಶ್ರೀ ಯು.ಟಿ. ಖಾದರ್ ಅವರಿಂದ ಇತಿಹಾಸದ ಮರುಸೃಷ್ಟಿ**

ಬೆಳಗಾವಿ ಸುವರ್ಣಸೌಧದಲ್ಲಿ ಡಿಸೆಂಬರ್ 9, 2024ರಂದು ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ. ಖಾದರ್ ಅವರ ನೇತೃತ್ವದಲ್ಲಿ, ಜನಮಾನಸದಲ್ಲಿ

ಸದಾ ಸ್ಮರಣೀಯವಾಗಿ ಉಳಿಯುವ ಮತ್ತೊಂದು ಐತಿಹಾಸಿಕ ಕ್ಷಣವು ದಾಖಲಾಗಿದೆ. ವಿಶ್ವಗುರು ಶ್ರೀ ಬಸವಣ್ಣನವರು ಸ್ಥಾಪಿಸಿದ, **"ವಿಶ್ವದ ಮೊದಲ ಸಂಸತ್ತು"** ಎಂಬ ಖ್ಯಾತಿಯ, **"ಅನುಭವ ಮಂಟಪದ"** ಬೃಹತ್ ತೈಲವರ್ಣ ಚಿತ್ರ ಅನಾವರಣವು ಶ್ರೀ ಯು.ಟಿ. ಖಾದರ್ ಅವರ ಅಧ್ಯಕ್ಷತೆಯಲ್ಲಿ, ಚಳಿಗಾಲ ಅಧಿವೇಶನದ ಮೊದಲ ದಿನದಂದು, ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರ ಅಮೃತ ಹಸ್ತದಿಂದ ಅನಾವರಣಗೊಳಿಸಿದರು.















ಇದು ಕೇವಲ ಒಂದು ತೈಲವರ್ಣ ಚಿತ್ರ ಅನಾವರಣ ಕಾರ್ಯಕ್ರಮವಲ್ಲ, ಬದಲಾಗಿ ನಮ್ಮ ಪ್ರಜಾಪ್ರಭುತ್ವದ ಮೂಲ ಆಶಯಗಳು, ಸಮಾನತೆ, ಮಾನವೀಯ ಸಂದೇಶಗಳನ್ನು ಜಗತ್ತಿಗೆ ಮತ್ತೊಮ್ಮೆ ಪರಿಚಯಿಸುವ ಹಾಗೂ ಶ್ರೀ ಮಹಾತ್ಮಾ ಗಾಂಧೀಜಿಯವರು ಅಧಿವೇಶನದಲ್ಲಿ ಪಾಲ್ಗೊಂಡ ಶತಮಾನೋತ್ಸವದ, ಸ್ಮರಣಾರ್ಥವಾಗಿ ನಡೆಯುವ ಒಂದು ಮಹತ್ವದ ಐತಿಹಾಸಿಕ ಕ್ಷಣವಾಗಿದೆ. ಕ್ಯಾನ್ವಾಸ್ ಮೇಲೆ ತೈಲ ಮಾಧ್ಯಮದ ಮೂಲಕ ರಚಿಸಲ್ಪಟ್ಟ 20 ಅಡಿ ಉದ್ದ ಮತ್ತು 10 ಅಡಿ ಅಗಲದ ಈ ವಿಶೇಷ ಚಿತ್ರಕ್ಕೆ ಜೀವಂತಿಗೆ ಮತ್ತು ನೈಜತೆ ತುಂಬಿದವರು. ಶ್ರೀ ಬಿ.ಎಲ್. ಶಂಕರ್ ನೇತೃತ್ವದಲ್ಲಿ, ಪ್ರಖ್ಯಾತ ಕಲಾವಿದರಾದ–ಬೆಂಗಳೂರು ಚಿತ್ರಕಲಾ ಪರಿಷತ್‌ನ ಶ್ರೀ ಸತೀಶ್‌ರಾವ್ ಶಿವಮೊಗ್ಗ ಶ್ರೀಕಾಂತ್ ಹೆಗಡೆ ಸಿದ್ದಾಪುರ, ಶೇಷಾದ್ರಿಪುರಂ ಕೆನ್ ಸ್ಕೂಲ್ ಕಲಾ ಶಾಲೆಯ ಶ್ರೀ ಅಶೋಕ್ ಯು. ಜಗಳೂರು, ರಾಜಾ ರವಿವರ್ಮ ಕಲಾಶಾಲೆಯ ರೂಪಾ ಎಂ.ಆರ್. ಶ್ರೀ ವೀರಣ್ಣ ಮಡಿವಾಳಪ್ಪ ಬಬ್ಲಿ, ಬೈಲಹೊಂಗಲ ಮತ್ತು ಶ್ರೀ ಮಹೇಶ ನಿಂಗಪ್ಪ, ದಫಲಾಪುರ, ಜಮಖಂಡಿ.



ಮೊದಲ ಸಭಾಧ್ಯಕ್ಷರಾದ ಶ್ರೀ ಅಲ್ಲಮಪ್ರಭು ಅವರ ಮುಂದಾಳುತ್ವದಲ್ಲಿ ಅಜರಾಮರ ಚಿಂತನೆಗಳನ್ನು ಮತ್ತು ಅನನ್ಯ ತತ್ವಜ್ಞಾನವನ್ನು ಪ್ರತಿಬಿಂಬಿಸಿದ ಈ ಪವಿತ್ರ ವೇದಿಕೆಯು, ಕೇವಲ ಶರಣ ಚಿಂತನೆಗಳ ಕೇಂದ್ರವಾಗಿರದೆ, ಸಮಸ್ತ ಮನುಕುಲದ ಏಳಿಗೆಗೆ ಶಾಶ್ವತ ಆದರ್ಶಗಳನ್ನು ನೀಡಿ, ಮಾನವೀಯತೆ ಮತ್ತು ಸಮಾನತೆಯ ಮಹಾನ್ ಸಂದೇಶವನ್ನು ಸಮಸ್ತ ವಿಶ್ವಕ್ಕೆ ತೋರಿಸಿಕೊಟ್ಟ ಶಕ್ತಿ ಕೇಂದ್ರವಾಗಿತ್ತು. ಇದು ಸರ್ವಜಾತಿ, ಧರ್ಮಗಳ ಶರಣರನ್ನು ಸ್ವೀಕರಿಸಿದ ಪವಿತ್ರ ತಾಣವಾಗಿದ್ದು,

ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಸಿದ್ದರಾಮೇಶ್ವರ, ಮಡಿವಾಳ ಮಾಚಿದೇವ, ದೋಹರ ಕಕ್ಕಯ್ಯ, ಮೇದಾರ ಕೇತಯ್ಯ, ಬಹುರೂಪಿ ಚೌಡಯ್ಯ, ಕೇತಲದೇವಿ, ದುಗ್ಗಳೆ, ಕಾಳವ್ವ ಮೊದಲಾದ ಶರಣರ ದಿವ್ಯ ಚಿಂತನೆಯನ್ನು ಮತ್ತು ಅನುಭವಗಳನ್ನು ಜಗತ್ತಿಗೆ ಪರಿಚಯಿಸಿದ ಪುಣ್ಯ ಸ್ಥಳವಾಗಿದೆ.

ವಿಧಾನಪರಿಷತ್ತಿನ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರ ಘನ ಉಪಸ್ಥಿತಿಯಲ್ಲಿ, ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್, ವಿಧಾನಸಭೆ ಉಪಸಭಾಧ್ಯಕ್ಷರಾದ ಸನ್ಮಾನ್ಯ ರುದ್ರಪ್ಪ ಮಾನಪ್ಪ ಲಮಾಣಿ, ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಸನ್ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್, ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಸತೀಶ್ ಜಾರಕಿ ಹೊಳಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರಾದ ಸನ್ಮಾನ್ಯ ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ ಆರ್. ಅಶೋಕ್ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ತದನಂತರ ತೈಲ ವರ್ಣಕಾರರುಗಳನ್ನು ಸನ್ಮಾನಿಸಿದರು.











**xxiv. ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ**

ದಿನಾಂಕ:09.12.2024ರಂದು ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ.





**xxv. ಕಲಾಪವನ್ನು ವೀಕ್ಷಿಸಲು ಆಗಮಿಸಿದ ವಿದ್ಯಾರ್ಥಿಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು**

ದಿನಾಂಕ:12.12.2024 ರಂದು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಅಧೀವೇಶನ ನಡೆದ ಸಂದರ್ಭದಲ್ಲಿ ವಿಧಾನಮಂಡಲದ ಕಲಾಪವನ್ನು ವೀಕ್ಷಿಸಲು ಆಗಮಿಸಿದ ವಿದ್ಯಾರ್ಥಿಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು.







### vi. ಕಲಾಪದ ವೀಕ್ಷಣೆಗೆ ಆಗಮಿಸಿರುವ ಬ್ರಿಟಿಷ್ ಡೆಪ್ಯೂಟಿ ಹೈಕಮಿಷನರ್ ನೇತೃತ್ವದ ಅಧಿಕಾರಿಗಳು

ದಿನಾಂಕ:16.12.2024ರಂದು ಕರ್ನಾಟಕದ ಬೆಂಗಳೂರಿನಲ್ಲಿರುವ ಬ್ರಿಟಿಷ್ ಡೆಪ್ಯೂಟಿ ಹೈಕಮಿಷನರ್ ಅವರ ನೇತೃತ್ವದಲ್ಲಿನ ಹೈಕಮಿಷನ್ ಅಧಿಕಾರಿಗಳು ಸುವರ್ಣ ವಿಧಾನಸೌಧದಲ್ಲಿ ವಿಧಾನ ಸಭೆಯ ಕಲಾಪವನ್ನು ವೀಕ್ಷಿಸಿದ ನಂತರ ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿ ಚರ್ಚಿಸುತ್ತಿರುವ ಸಂದರ್ಭ.













### xxvii. ಬೆಳಗಾವಿಯ ಸುವರ್ಣಸೌಧದ ಸಭಾಂಗಣದಲ್ಲಿ ಕಲಾಕೃತಿಗಳ ಅನಾವರಣ

ದಿನಾಂಕ:16.12.2024 ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್, ಆಧ್ಯಾತ್ಮಿಕ/ತತ್ವಜ್ಞಾನಿಗಳಾದ ಸ್ವಾಮಿ ವಿವೇಕಾನಂದ, ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಮರುವಿನ್ಯಾಸಗೊಂಡ ಹಾಗೂ ಭಾರತ ದೇಶದ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಮತ್ತು ದೇಶದ ಪ್ರಥಮ ರಾಷ್ಟ್ರಪತಿ ಡಾ॥ ಬಾಬು ರಾಜೇಂದ್ರ ಪ್ರಸಾದ್, ದೇಶದ ಪ್ರಥಮ ಪ್ರಧಾನಿ ಪಂಡಿತ್ ಜವಹಾರ್‌ಲಾಲ್ ನೆಹರು, ಸ್ವಾತಂತ್ರ್ಯ ಹೋರಾಟಗಾರರು, ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಸಚಿವರಾದ ಶ್ರೀ ಮೌಲಾನಾ ಅಬ್ದುಲ್ ಕಲಾಮ್ ಆಜಾದ್ ಮತ್ತು ದೇಶದ ಪ್ರಥಮ ಮಹಿಳಾ ಪ್ರಧಾನಿ ಶ್ರೀಮತಿ

ಇಂದಿರಾಗಾಂಧಿ ಅವರುಗಳ ಕಲಾಕೃತಿಗಳನ್ನು ಅನಾವರಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡ ಸಂದರ್ಭ. ಸದರಿ ಕಾರ್ಯಕ್ರಮವು ವಿಧಾನಸಭೆ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಫರೀದ್ ಅವರ ನೇತೃತ್ವದಲ್ಲಿ ನಡೆದು, ಮುಖ್ಯಮಂತ್ರಿಯವರಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರು ತೈಲ ಚಿತ್ರಗಳನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ. ಆರ್.ಅಶೋಕ್, ಉಪ ಮುಖ್ಯಮಂತ್ರಿಯವರಾದ ಸನ್ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್, ಉಪಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಸನ್ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್, ಬೆಳಗಾವಿ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವರಾದ ಸನ್ಮಾನ್ಯ ಶ್ರೀ ಸತೀಶ್ ಜಾರಕಿಹೊಳಿ, ಬೆಳಗಾವಿ ಜಿಲ್ಲೆಯ ಸಚಿವರಾದ ಸನ್ಮಾನ್ಯ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಸಂಪುಟದ ಇತರೆ ಸಚಿವರುಗಳು, ಸರ್ಕಾರದ ಮುಖ್ಯಸಚೇತಕರು, ವಿರೋಧ ಪಕ್ಷದ ಮುಖ್ಯಸಚೇತಕರು ಹಾಗೂ ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.











**xxviii. ವಿದ್ಯಾರ್ಥಿಗಳೊಂದಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸನ್ಮಾನ್ಯ ಸಭಾಧ್ಯಕ್ಷರು**

ದಿನಾಂಕ:16.12.2024ರಂದು ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಸಭೆ ಅಧಿವೇಶನದ ಕಲಾಪವನ್ನು ವೀಕ್ಷಿಸಲು ಆಗಮಿಸಿರುವ ವಿದ್ಯಾರ್ಥಿಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ಮುಖ್ಯಮಂತ್ರಿಗಳು.











### xxix. ಅತ್ಯುತ್ತಮ ಶಾಸಕ ಪ್ರಶಸ್ತಿ ಪ್ರದಾನ

ದಿನಾಂಕ:17.12.2024ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ, ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಟಿ.ಬಿ.ಜಯಚಂದ್ರರವರಿಗೆ 2023–24ನೇ ಸಾಲಿನ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಸನ್ಮಾನ್ಯ ಸಭಾಧ್ಯಕ್ಷರೊಂದಿಗೆ, ಸನ್ಮಾನ್ಯ ಮುಖ್ಯಮಂತ್ರಿಯವರು, ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಉಪ ಸಭಾಧ್ಯಕ್ಷರು ನೀಡಿ ಗೌರವಿಸಿದರು.





### xxx. ಸದನ ಮುಂದೂಡಿದ ಅವದಿಯಲ್ಲಿ ಸಭೆ

ದಿನಾಂಕ:19.12.2024ರಂದು ಸದನದ ಕಲಾಪದ ಸಂದರ್ಭದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾದ ಕಾರಣ ಸದನವನ್ನು ಕೆಲಕಾಲ ಮುಂದೂಡಿ ಸದನದ ನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರು, ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಉಪಸಭಾಧ್ಯಕ್ಷರು,

ಸಚಿವರು ಹಾಗೂ ಇತರೆ ಪಕ್ಷದ ನಾಯಕರೊಂದಿಗೆ ಚರ್ಚಿಸಿ ಎಲ್ಲರ ಸಹಕಾರದೊಂದಿಗೆ ಸದನ ನಡೆಸಲು ತೀರ್ಮಾನಿಸಿದ ಸನ್ಮಾನ್ಯ ಸಭಾಧ್ಯಕ್ಷರು.




## 2. ಶೀಘ್ರ ಸತ್ಯಮೇವ ಜಯತೆ

ರಾಜ್ಯದ ಶಕ್ತಿ ಕೇಂದ್ರಗಳಾದ ಬೆಂಗಳೂರಿನ ವಿಧಾನಸೌಧ ಹಾಗೂ ಸುವರ್ಣ ವಿಧಾನಸೌಧದಲ್ಲಿರುವ ರಾಷ್ಟ್ರಲಾಂಛನದಲ್ಲಿ ಲಾಂಛನದ ಧ್ಯೇಯ ವಾಕ್ಯ ಸತ್ಯಮೇವ ಜಯತೆ ನಮೂದಿಸಲು ಸರ್ಕಾರ ಮುಂದಾಗಿದೆ. ರಾಷ್ಟ್ರ ಲಾಂಛನದ ಘನತೆಗೆ ಚ್ಯುತಿ, ಶೀರ್ಷಿಕೆಯಡಿ ವಿಶೇಷ ವರದಿಗೆ ಸ್ಪಂದಿಸಿದ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ರಾಷ್ಟ್ರ ಲಾಂಛನದ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲದು. ಕೂಡಲೇ ಸುವರ್ಣ ವಿಧಾನಸೌಧ ಮತ್ತು ವಿಧಾನಸೌಧದ ಮೇಲಿರುವ ರಾಷ್ಟ್ರ ಲಾಂಛನದಲ್ಲಿ ನಿಯಮಾನುಸಾರ ದೇವನಾಗರಿ ಲಿಪಿಯಲ್ಲಿಯೇ **'ಸತ್ಯಮೇವ ಜಯತೆ'** ಅಳವಡಿಸಲಾಗುವುದು ಎಂದು ಹೇಳಿದರು.

ರಾಷ್ಟ್ರ ಲಾಂಛನದಡಿ ಧ್ಯೇಯ ವಾಕ್ಯ ಅಳವಡಿಕೆಗೆ ಜಾಗವಿಲ್ಲ ಎನ್ನುವುದನ್ನು ಒಪ್ಪಲು ಸಾಧ್ಯವಿಲ್ಲ ಜಾಗ ಇಲ್ಲದಿದ್ದರೆ, ಜಾಗ ಮಾಡಿಯಾದರೂ ರಾಷ್ಟ್ರಲಾಂಛನದ ಧ್ಯೇಯವಾಕ್ಯ ಅಳವಡಿಸಲಾಗುವುದು ಎಂದರು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 19.10.2024

## 3. ನನ್ನ ಅವಧಿಯಲ್ಲಿ 13 ಶಾಸಕರ ರಾಜೀನಾಮೆ

ಶ್ರೀ ಸಿ. ಪಿ. ಯೋಗೇಶ್ವರ್ ಪರಿಷತ್ ಸದಸ್ಯ ಸ್ಥಾನಕ್ಕೆ ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ್ದಾರೆ. ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಹೇಳಿದ್ದಾರೆ.

ವಿಧಾನಪರಿಷತ್‌ನ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಮಾತನಾಡಿ, ನನ್ನ ಅವಧಿಯಲ್ಲಿ ಯೋಗೇಶ್ವರ್ ಸೇರಿದಂತೆ ಇಲ್ಲಿಯವರೆಗೆ 13 ಮಂದಿ ಪರಿಷತ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಹಿಂದೆಲ್ಲ ಎರಡು ಅಥವಾ ಮೂರು ರಾಜೀನಾಮೆ ಅಂದರೆ ಹೆಚ್ಚು ಆದರೆ, ಈಗ ಇಷ್ಟು ಮಂದಿ ರಾಜೀನಾಮೆ ಕೊಟ್ಟಿದ್ದಾರೆ ಎಂದರು.

ಯೋಗೇಶ್ವರ್ ರಾಜೀನಾಮೆಗೂ ಮುನ್ನ ಬಹಳಷ್ಟು ಜನ ನನಗೆ ಫೋನ್ ಮಾಡಿ ಕೇಳಿದ್ದರು. ಆದರೆ, ನಾನು ಸಾಂವಿಧಾನಿಕ ಹುದ್ದೆಯಲ್ಲಿರುವ ಕಾರಣ ಅದೆಲ್ಲವನ್ನೂ ಹೇಳುವ ಹಾಗಿಲ್ಲ ಎಂದಿರುವುದಾಗಿ ತಿಳಿಸಿದರು.

ಆಗಿನ ಕಾಲದಲ್ಲಿ ಅವಧಿಗೆ ಎರಡ್ಮೂರು ರಾಜೀನಾಮೆಗಳು ಆಗುತ್ತಿದ್ದವು. ಆಗ ರಾಜಕೀಯ ಹಾಗಿತ್ತು. ಈಗ ರಾಜಕೀಯದ ಒತ್ತಡ, ಬೇರೆ ಪಕ್ಷಗಳಿಗೆ ಹೋಗುವುದಿದ್ದರೆ ರಾಜೀನಾಮೆ ನೀಡುತ್ತಾರೆ. ನಾವು ಕಾರಣ ಕೇಳುವುದಿಲ್ಲ ಸ್ವಇಚ್ಛೆಯಿಂದ ರಾಜೀನಾಮೆ ಕೊಡುತ್ತಿದ್ದಿರೋ ಇಲ್ಲವೋ ಎಂಬುದನ್ನು ತಿಳಿಯುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

**ಆಧಾರ:**ವಿಶ್ವವಾಣಿ, ದಿನಾಂಕ:22.10.2024

## 4. BJP leader Yogeshwar resigns as MLC

The bypolls to the Channapatna Assembly seat got complicated for the National Democratic Alliance on 21.10.2024 with cine actor turned BJP leader and ticket aspirant C.P.Yogeshwar resigning as BJP MLC after it turned out that he would not get the party ticket.

Though Mr. Yogeshwar, a former Minister, told presspersons after submitting his resignation that he was planning to contest as an Independent, speculation is rife that he is in touch with the Congress too. His decision to quit as MLC and his reputation being a party hopper has added to speculation.

Keeping everyone guessing, Mr. Yogeshwar, who has represented Channapattana in the Assemby multiple times, said he would take two days to decide on his future course of action. While the BJP has left the seat to its alliance partner JD(S), Mr. Yogeshwar refused to contest on JD(S) ticket, saying even now he was willing to contest but only on the BJP ticket.

Mr. Yogeshwar fiew down to Hubballi to meet Legislative Council Chairman Basavaraj S. Horatti at his home office to submit the resignation.

“I have not been assured of the party (BJP) ticket. Then, I was given the offer of fighting on a JD (S) ticket. But I rejected it as I want to contest on BJP ticket given my seniority in the party. The BJP district president told me that the party wanted to field Nikhil Kumaraswamy as the JD(S) candidate from Channapatna. I wished them luck and came to Hubballi,” he said.

The NDA leaders have left the Channapattana seat to JD(S) as its leader H.D.Kumaraswamy held the seat before entering the Lok Sabha.

However, considering the present political situation in which Deputy Chief Minister D.K. Shivakumar himself is personally monitoring the Congress bypoll preparations in the constituency, NDA leaders had decided to ask Mr. Yogeshwar to contest on JD(S) ticket.

His future political moves are being closely watched as any division of votes in channapattana may turn the bypoll into a challenge for the JD(S), which is considering the possibility of fielding Mr.Nikhil Kumaraswamy.

D.K.Suresh, former MP for Bengaluru Rural and brother of Mr. Shivakumar, too, disclose on 20.10.2024 that there was pressure on him to contest from Channapatna. Of the three Assembly seats that are going to the polls in Karnataka, the Channapatna seat has hogged attention as it has turned out to be a prestige battle between two Vokkaliga heavy weights Union Minister Mr. Kumaraswamy and Mr. Shivakumar.

Mr.Shivakumar, who was crestifallen after his brother lost the Lok Sabha polls from Bengaluru Rural and the party lost most of the seats in the Vokkaliga belt, is keen to redeem the pride by ensuring a Congress victory in Channapatna.

At the same time, Mr Kumaraswamy is determined to send a message that his hold in the region cannot be challenged.

**Courtesty:**The Hindu, Dated:22.10.2024

## 5. ಕಪ್ಪತ್ತಗುಡ್ಡ ಪರಿಸರದಲ್ಲಿ ಗಣಿಗಾರಿಕೆ ಪ್ರಸ್ತಾವನೆ ಸಂಪೂರ್ಣ ತಿರಸ್ಕರಿಸಿ

ಕಪ್ಪತ್ತಗುಡ್ಡದಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ಆರಂಭಿಸಲು ಬಂದ ಪ್ರಸ್ತಾವನೆಯನ್ನು ತಿರಸ್ಕರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಪತ್ರ ಬರೆದಿದ್ದಾರೆ.

ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಕರೆಸಿಕೊಳ್ಳುವ ಕಪ್ಪತ್ತಗುಡ್ಡ ತನ್ನ ಒಡಲಲ್ಲಿ ಸಾವಿರಾರು ಔಷಧ ಗುಣವುಳ್ಳ ಸಸ್ಯ ಸಂಪತ್ತು ಹೊಂದಿದೆ. ಇದನ್ನು ಸಂರಕ್ಷಿಸಿಕೊಂಡು ಹೋಗುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಹೇಳಿದ್ದಾರೆ.

ಕಪ್ಪತ್ತಗುಡ್ಡ ಸಂರಕ್ಷಣೆಗಾಗಿ ದಶಕಗಳಿಂದ ಹೋರಾಟ ನಡೆಯುತ್ತಿದೆ. ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆ ನಡೆಸದಂತೆ ಮಠಾಧೀಶರು, ಪರಿಸರ ಹೋರಾಟಗಾರರು ಒತ್ತಾಯಿಸುತ್ತಾ ಬಂದಿದ್ದಾರೆ. ಆದಾಗ್ಯೂ ಗಣಿಗಾರಿಕೆಗಾಗಿ ಉದ್ಯಮಿಗಳು ತಮ್ಮ ಪ್ರಯತ್ನ ಬಿಟ್ಟಿಲ್ಲ. ಗಣಿಗಾರಿಕೆ ಆರಂಭಿಸಲು 28 ಪ್ರಸ್ತಾವನೆಗಳು ಸರ್ಕಾರದ ಮುಂದೆ ಬಂದಿದ್ದವು. 15 ದಿನಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ತೀರ್ಮಾನ ಮುಂದೂಡಿರುವುದು ಸ್ವಲ್ಪ ಸಮಾಧಾನ ತಂದಿದೆ. ಆದರೆ ಈ ಪ್ರಸ್ತಾವನೆಯನ್ನು ಸಂಪೂರ್ಣ ತಿರಸ್ಕರಿಸಿ, ಈ ಭಾಗದಲ್ಲಿ ಯಾವುದೇ ಗಣಿಗಾರಿಕೆ ಹಾಗೂ ಇತರ ಉದ್ಯಮ ಆರಂಭಿಸಲು ಅನುಮತಿ ನೀಡುವುದಿಲ್ಲವೆಂದು ಆದೇಶ ಹೊರಡಿಸಬೇಕಾಗಿತ್ತು. ಕೇವಲ ಪ್ರಸ್ತಾವನೆ ದೂಡಿರುವುದರಿಂದ ಉತ್ತರ ಕರ್ನಾಟಕ ಜನರಿಗೆ ಹಾಗೂ ಪರಿಸರ ಸಂರಕ್ಷಣೆ ಪರ ಹೋರಾಟಗಾರರಿಗೆ ಸಂಶಯ ಮೂಡುವ ಜತೆಗೆ ಸರ್ಕಾರದ ಮೇಲೆ ನಂಬಿಕೆ ಇಲ್ಲದಂತಾಗಿದೆ ಎಂದಿದ್ದಾರೆ. ಕಪ್ಪತ್ತಗುಡ್ಡವನ್ನು ಸೂಕ್ಷ್ಮವಲಯ ವ್ಯಾಪ್ತಿಯೆಂದು ಸದಾ ಸರ್ಕಾರ ಹೇಳಿಕೊಂಡು ಬಂದಿದೆ. ಈ ಕುರಿತು ಆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸದಂತೆ ಸ್ಪಷ್ಟ ಆದೇಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

**ಆಧಾರ:**ಕನ್ನಡಪ್ರಭ, ದಿನಾಂಕ:27.10.2024

## 6. ಪರಿಷತ್ ಸದಸ್ಯರಾಗಿ ಕಿಶೋರ್ ಪ್ರಮಾಣ ವಚನ

ವಿಧಾನಪರಿಷತ್ತಿನ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾದ ಕಿಶೋರ್ ಕುಮಾರ್ ಪುತ್ತೂರು ಅವರು ದಿನಾಂಕ:30.10.2024ರಂದು ವಿಧಾನಪರಿಷತ್‌ನ ನೂತನ ಸದಸ್ಯರಾಗಿ ಭಗವಂತ ಹಾಗೂ ತಾಯಿ ಭಾರತಾಂಬೆಯ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ನೂತನ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಕಾರ್ಯದರ್ಶಿ ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್, ಶಾಸಕರಾದ ಹರೀಶ್ ಪೂಂಜ, ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ ಪ್ರಮುಖರು ಉಪಸ್ಥಿತರಿದ್ದು ಶುಭ ಹಾರೈಸಿದರು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:31.10.2024

## 7. ರೋರಿಚ್‌ರ 36 ಕಲಾಕೃತಿಗಳ ಪ್ರದರ್ಶನ

ರಷ್ಯಾ ಮತ್ತು ಭಾರತೀಯ ಸಾಂಸ್ಕೃತಿಕ ಸಂಪ್ರದಾಯಗಳನ್ನು ಬೆಸೆದ ಚಿತ್ರಕಲಾವಿದ ನಿಕೋಲಸ್ ರೋರಿಚ್ 150ನೇ ಜನ್ಮದಿನದ ಪ್ರಯುಕ್ತ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ **'ಸ್ಟೊಮಿನಯ ರೋರಿಚ್–150'** ಹೆಸರಿನಲ್ಲಿ ಅವರ ಅಪರೂಪದ 36 ಕಲಾಕೃತಿಗಳನ್ನು ಸಾರ್ವಜನಿಕರ ಪ್ರದರ್ಶನಕ್ಕಿಡಲಾಗಿದೆ.

ಸೇಂಟ್ ಪಿಟರ್ಸ್‌ಬರ್ಗ್‌ನಲ್ಲಿ 1874ರ ಅಕ್ಟೋಬರ್ 8ರಂದು ಜನಿಸಿದ್ದ ನಿಕೋಲಸ್ ಅವರು 1920ರಲ್ಲಿ ಭಾರತಕ್ಕೆ ಬಂದು ಹಿಮಾಚಲ ಪ್ರದೇಶದ ಕುಲು ಕಣಿವೆಯ ನಗ್ಗರ್, ಎಂಬ ಹಳ್ಳಿಯಲ್ಲಿ ವಾಸವಾಗಿದ್ದರು. ಏಳು ಸಾವಿರಕ್ಕೂ ಅಧಿಕ ವರ್ಣಚಿತ್ರಗಳನ್ನು ರಚಿಸಿದ್ದರು. ಅವುಗಳ ಪೈಕಿ ಪ್ರದರ್ಶನಕ್ಕಿಟ್ಟಿರುವ ಹಿಮದಿಂದ ಆವೃತವಾದ ಪರ್ವತಗಳು, ನದಿಗಳ ಕಲಾಕೃತಿಗಳು ಪ್ರಮುಖ ಆಕರ್ಷಣೆಯಾಗಿವೆ.

ಅಲ್ಲದೇ ಅನ್ಯ ದೇಶಗಳ ವಸ್ತು ಸಂಗ್ರಹಾಲಯಗಳಿಂದ ಸಂಗ್ರಹಿಸಿರುವ ನಿಕೋಲಸ್ ಅವರ ಪೇಂಟಿಂಗ್ ಪೋಸ್ಟ್ ಕಾರ್ಡ್‌ಗಳು, ಕ್ಯಾಲೆಂಡರ್ ಕಾರ್ಡ್‌ಗಳನ್ನು ಪ್ರದರ್ಶನಕ್ಕಿಡಲಾಗಿದೆ. ಅವರ ಪುತ್ರ ಸ್ವೆಟೋಸ್ಲಾವ್ ಅವರು ತನ್ನ ತಂದೆಯ ಕಲೆ ಕುರಿತು ಬರೆದಿರುವ ಡೈರಿ ಹಾಗೂ 1935ರಲ್ಲಿ ಆಂಗ್ಲ ಪತ್ರಿಕೆಯಲ್ಲಿ ನಿಕೋಲಸ್ ಕುರಿತು ಪ್ರಕಟಗೊಂಡಿರುವ ಲೇಖನ ಓದುವ ಅವಕಾಶವೂ ಇದೆ.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ **'ನಿಕೋಲಸ್ ರೋರಿಚ್ ಅವರ ಕಲಾಕೃತಿಗಳು ಅದ್ಭುತವಾಗಿವೆ. ಅವರ ಸಾಧನೆ ಯುವ ಜನರಿಗೆ ಪ್ರೇರಣೆಯಾಗಿದೆ'** ಎಂದು ಹೇಳಿದರು.

ಚೆನ್ನೈನಲ್ಲಿ ರಷ್ಯಾದ ಕಾನ್ಸುಲ್ ಜನರಲ್ ವಲೇರಿ ಖೋಡ್ಜೇವ್ ಮಾತನಾಡಿ, ನಿಕೋಲಸ್ ಜನ್ಮದಿನದ ಅಂಗವಾಗಿ ಅವರ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿರುವುದು ಸಂತಸ ಉಂಟು ಮಾಡಿದೆ. ಇದೇ ರೀತಿ ಕಾರ್ಯಕ್ರಮಗಳು ನಡೆಯಲಿ ಎಂದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ಮಾತನಾಡಿ, "ಹಿಮಾಲಯ, ಅಧ್ಯಾತ್ಮ ಪರಂಪರೆಯ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಅಧ್ಯಯನಕ್ಕೆ ಮೀಸಲಾಗಿರುವ **'ಉರುಸ್ವತಿ ಹಿಮಾಲಯನ್'** ಸಂಶೋಧನಾ ಸಂಸ್ಥೆಯನ್ನು ನಿಕೋಲಸ್ ಸ್ಥಾಪಿಸಿದ್ದರು. ಅವರ ಮಗ ಸ್ವೆಟೋಸ್ಲಾವ್ ರೋರಿಚ್ ಅವರು ಬೆಂಗಳೂರಿಗೆ ಬಂದು ವಾಸವಾಗಿದ್ದರು. ತಂದೆ ನಿಕೋಲಸ್ ಅವರು ರಚಿಸಿದ್ದ ಪ್ರಸಿದ್ಧ 36 ಚಿತ್ರಗಳ ಜೊತೆಗೆ ಸ್ವೆಟೋಸ್ಲಾವ್ ರಚಿಸಿದ್ದ 63 ಕಲಾಕೃತಿಗಳನ್ನು ಚಿತ್ರಕಲಾ ಪರಿಷತ್‌ಗೆ ನೀಡಿದ್ದರು" ಎಂದು ಮಾಹಿತಿ ನೀಡಿದರು. ಭರೂಕಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಎನ್. ಅಗರವಾಲ್, ಪರಿಷತ್ ಪ್ರಧಾನ ಕಾರ್ಯದರ್ಶಿ ಶಶಿಧರರಾವ್, ವಸ್ತು ಸಂಗ್ರಹಾಲಯದ ಮೇಲ್ವಿಚಾರಕಿ ವಿಜಯಶ್ರೀ ಹಾಜರಿದ್ದರು.

**ಆಧಾರ:**ಪ್ರಜಾವಾಣಿ, ದಿನಾಂಕ:09.11.2024

## 8. ಗ್ರಾಮೀಣರಿಗೆ ಸಾಲ ಮೇಳ ನಡೆಸಿ: ಖಾದರ್

ಗ್ರಾಮೀಣ ಜನರ ಬದುಕಿಗೆ ಮತ್ತಷ್ಟು ಶಕ್ತಿ ನೀಡುವ ಸಲುವಾಗಿ ಇನ್ನೊಂದು ಸಾಲ ಮೇಳ ಆಯೋಜನೆ ಮಾಡಿ ಎಂದು ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ನಗರದ ಕರಾವಳಿ ಮೈದಾನದಲ್ಲಿ ದಿನಾಂಕ:16.11.2024ರಂದು ಆಯೋಜಿಸಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ ಚಾಲನೆ ನೀಡಿ ಮತನಾಡಿ, ಕೇಂದ್ರ ಮಾಜಿ ಹಣಕಾಸು ಸಚಿವ ಜನಾರ್ದನ ಪೂಜಾರಿ ಅವರ ಸಾಲ ಮೇಳದಿಂದ ಜನಸಾಮಾನ್ಯರು ಬ್ಯಾಂಕ್ ಬಾಗಿಲು

ನೋಡುವಂತಾಯಿತು. ಗ್ರಾಮೀಣ ಜನರ ಬದುಕಿಗೆ ಇನ್ನಷ್ಟು ಶಕ್ತಿ ನೀಡುವ ಸಲುವಾಗಿ ಇನ್ನೊಮ್ಮೆ ಸಾಲ ಮೇಳ ಹಮ್ಮಿಕೊಳ್ಳಬೇಕು. ಹೈನುಗಾರರ ಪ್ರೋತ್ಸಾಹಧನದ ಮೊತ್ತವನ್ನು ರೂ.2 ಹೆಚ್ಚಿಸಬೇಕು. ಸಹಕಾರಿ ಸಂಘಗಳ ನೌಕರರಿಗೂ ಪ್ರೋತ್ಸಾಹಧನ ಏರಿಸಬೇಕೆಂದು ಸಹಕಾರ ಸಚಿವ ರಾಜಣ್ಣ ಅವರಿಗೆ ವಿನಂತಿಸಿದರು.

**ಆಧಾರ:**ಕನ್ನಡಪ್ರಭ, ದಿನಾಂಕ:17.11.2024

## 9. ಮಾಜಿ ಸಿಎಂಗಳಿಗೆ ಸಮಾನ ಗೌರವ ಸಲ್ಲಿಸಿ

ದಿವಂಗತ ಮಾಜಿ ಮುಖ್ಯಮಂತ್ರಿಗಳಿಗೆ ಸಮಾನ ಗೌರವ ಸಲ್ಲಿಕೆಯಾಗಬೇಕು ಈ ದಿಸೆಯಲ್ಲಿ ಮುಖ್ಯಮಂತ್ರಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಪತ್ರ ಬರೆದು ಮನವಿ ಮಾಡಿದ್ದಾರೆ. ಕನ್ನಡ ನಾಡು, ನುಡಿ, ಭಾಷೆ ಸೇರಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮನ್ನೂ ಸೇರಿ ಈಗಾಗಲೇ 30 ಮುಖ್ಯಮಂತ್ರಿಗಳು ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತ ಬಂದಿದ್ದಾರೆ. ಇವರಲ್ಲಿ ಅನೇಕರು ನಮ್ಮನ್ನು ಅಗಲಿದ್ದಾರೆ. ಕೆಲವು ದಿವಂಗತ ಸಿಎಂಗಳ ಪ್ರತಿಮೆಗಳನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲಾಗಿದ್ದು, ಅವರ ಜನ್ಮದಿನ ಹಾಗೂ ಪುಣ್ಯತಿಥಿಯಂದು ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸುವ ಸಂಪ್ರದಾಯವಿದೆ. ಆದರೆ, ಹಲವಾರು ಮಾಜಿ ಮುಖ್ಯಮಂತ್ರಿಗಳ ಪ್ರತಿಮೆ ಅಥವಾ ಪುತ್ಥಳಿ ವಿಧಾನಸೌಧದ ಆವರಣದಲ್ಲಿ ಇಲ್ಲ. ಅಂತಹವರಿಗೆ ಯಾವುದೇ ಗೌರವ ಸಲ್ಲಿಸುವಂತಹ ಪ್ರಕ್ರಿಯೆಗಳಿರುವುದಿಲ್ಲ. ಈ ಹಿನ್ನಲೆಯಲ್ಲಿ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಅವರ ಪೂರ್ಣ ಭಾವಚಿತ್ರವನ್ನು ಹಾಕಿ ಅವರ ಅವಧಿ ನಮೂದಿಸಿ, ಸರ್ಕಾರದಿಂದ ಸಮಾನ ಗೌರವ ಸಲ್ಲಿಸುವಂತಹ ಕಾರ್ಯಕ್ರಮ ರೂಪಿಸಬೇಕು. ದೆಹಲಿ ಮಾದರಿಯಲ್ಲಿಯೇ ಮ್ಯೂಸಿಯಂ ಸಹ ಸ್ಥಾಪಿಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

**ಆಧಾರ:**ವಿಜಯವಾಣಿ, ದಿನಾಂಕ:22.11.2024

## 10. ಅನುದಾನ ರಹಿತ ಶಿಕ್ಷಕರ ಕಷ್ಟ ಸ್ಪಂದನೆ

"ಬೆಳಗಾವಿ ಅಧಿವೇಶನ ವೇಳೆ ಅನುದಾನ ರಹಿತ ಶಾಲೆ ಶಿಕ್ಷಕರ ಸಂಕಷ್ಟ ಮತ್ತು ಹೋರಾಟದ ಬಗ್ಗೆ ಸಿಎಂ ಹಾಗೂ ಶಿಕ್ಷಣ ಸಚಿವರೊಂದಿಗೆ ಸಭೆ ನಡೆಸಿ ಮನವರಿಕೆ ಮಾಡಿಕೊಡಲಾಗುವುದು," ಎಂದು ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹೇಳಿದರು.

ರಾಜ್ಯ ಅನುದಾನರಹಿತ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳ ಮತ್ತು ನೌಕರರ ಒಕ್ಕೂಟದಿಂದ ದಿನಾಂಕ:22.11.2024ರಂದು ನಡೆದ ನಮ್ಮ ಕನ್ನಡ ಶಾಲೆ ಉಳಿಸಿ ಅಭಿಯಾನದ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

"ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವುದು ಸರ್ಕಾರಕ್ಕೆ ದೊಡ್ಡದಲ್ಲ, ಬೆಳಗಾವಿ ಅಧಿವೇಶನದಲ್ಲಿ ಅನುದಾನ ರಹಿತ ಶಿಕ್ಷಕರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವಂತೆ ಶಿಕ್ಷಕರು ತಮ್ಮ ತಮ್ಮ ಕ್ಷೇತ್ರದ ಶಾಸಕರಿಗೆ ಧ್ವನಿ ಎತ್ತುವಂತೆ ಮಾಡಬೇಕು. ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರೆಲ್ಲರನ್ನೂ ಸೇರಿಸಿ ಅಧಿವೇಶನದಲ್ಲಿ ಚರ್ಚೆಗೆ ಸೂಚಿಸಿದ್ದೇನೆ," ಎಂದರು.

ವಿಧಾನಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, "ಬೆಳಗಾವಿ ಅಧಿವೇಶನದಲ್ಲಿ ಪಕ್ಷಾತೀತವಾಗಿ ವಿಧಾನಪರಿಷತ್‌ನಲ್ಲಿ ಎಲ್ಲಾ ಸದಸ್ಯರನ್ನು ಒಗ್ಗೂಡಿಸಿ ಈ ಬಗ್ಗೆ ಧ್ವನಿ ಎತ್ತಲಾಗುವುದು. ಅಲ್ಲದೆ, ಚರ್ಚೆಗಾಗಿ ಸಭಾಪತಿಗೆ ನಿಯಮದ ಪ್ರಕಾರ ಪ್ರಸ್ತಾವನೆ ಕಳುಹಿಸಿ ಬೇಡಿಕೆ ಈಡೇರಿಸಲು ಪ್ರಯತ್ನ ಮಾಡುತ್ತೇವೆ. ಕನ್ನಡ ಶಾಲೆಗಳ ಫಲಿತಾಂಶ, ಸಂಸ್ಥೆ ಹಾಗೂ ಶಿಕ್ಷಕರ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು" ಎಂದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:23.11.2024

## 11. ಡಾ.ಎಂ.ಎನ್.ಆರ್‌ಗೆ ವಿಶ್ವದ ಹೆಮ್ಮೆಯ ಕನ್ನಡಿಗ ಪ್ರಶಸ್ತಿ ಪ್ರದಾನ

ಬೆಂಗಳೂರಿನ ಕನಾಟಕ ಮಾಧ್ಯಮ ಸಹಕಾರ ಹಾಗೂ ದಿ ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಪತ್ರಿಕೋದ್ಯಮ ಇತಿಹಾಸದಲ್ಲಿ ಮೊದಲ ಬಾರಿಗೆ ನೀಡಲಾದ ಪ್ರತಿಷ್ಠಿತ ವಿಶ್ವದ ಹೆಮ್ಮೆಯ ಕನ್ನಡಿಗ ಪ್ರಶಸ್ತಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರಿಗೆ ಬೆಂಗಳೂರಿನಲ್ಲಿ ಪ್ರದಾನ ಮಾಡಲಾಯಿತು.

ಸರ್ ಪುಟ್ಟಣ ಚೆಟ್ಟಿ ಪುರಭವನದಲ್ಲಿ ನಡೆದ ಕರ್ನಾಟಕ ಸಂಭ್ರಮ ಸಮಾರಂಭದಲ್ಲಿ ಸಹಕಾರ, ಸಮಾಜಸೇವೆ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಡಾ.ಎಂಎನ್ ರಾಜೇಂದ್ರ ಕುಮಾರ್ ಸಲ್ಲಿಸಿರುವ ಅನುಪಮ ಸೇವೆ ಗುರುತಿಸಿ ಈ ಪುರಸ್ಕಾರ ನೀಡಲಾಗಿದ್ದು, ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಪ್ರಶಸ್ತಿ ಪ್ರದಾನ ಮಾಡಿದರು.

ಡಾ.ಎಂ.ಎನ್. ರಾಜೇಂದ್ರಕುಮಾರ್ ಸಹಕಾರ ಕ್ಷೇತ್ರದಲ್ಲಿ ನಾಲ್ಕು ದಶಕದಿಂದ ನಿರಂತರ ಸಮಾಜಮುಖಿ ಸೇವೆಯಲ್ಲಿ ತೊಡಗಿದ್ದಾರೆ. ಸಾಮಾಜಿಕ, ಬ್ಯಾಂಕಿಂಗ್, ಧಾರ್ಮಿಕ ಸೇರಿ ಹತ್ತು ಹಲವು ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧಕರಾಗಿ, ನವೋದಯ ಸ್ವಸಹಾಯ ಸಂಘಗಳ ಹರಿಕಾರರಾಗಿ ಅಪೂರ್ವ ಪರಂಪರೆ ರೂಪಿಸಿರುವ ರಾಜೇಂದ್ರ ಕುಮಾರ್, ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನವೋದಯ ಸ್ವಸಹಾಯ ಸಂಘಗಳ ಮೂಲಕ ನೀಡಿ ಆರ್ಥಿಕ ಚೈತನ್ಯ ತುಂಬಿದ್ದಾರೆ.

**ಆಧಾರ:**ವಿಜಯವಾಣಿ, ದಿನಾಂಕ:28.11.2024

## 12. ಸ್ವಾತಂತ್ರ್ಯ ಭಾರತದ ಮೈಲಿಗಲ್ಲು ಸಂವಿಧಾನ: ಹೊರಟ್ಟಿ

ಜಗತ್ತಿನಲ್ಲೇ ಶ್ರೇಷ್ಠ ಸಂವಿಧಾನವಾಗಿರುವ ನಮ್ಮ ಸಂವಿಧಾನವನ್ನು ಎಲ್ಲರೂ ಗೌರವಿಸಬೇಕು ಎಂದು ವಿಧಾನಪರಿಷತ್ತಿನ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹೇಳಿದರು. ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ವಿಶ್ವಗುರು ಬುದ್ಧ ಪ್ರೊಡಕ್ಷನ್ ಸಂಸ್ಥೆಯವರು ಶಾಸಕರ ಭವನದಲ್ಲಿ ಆಯೋಜಿಸಿದ್ದ ಸಂವಿಧಾನಕ್ಕೆ 75ನೇ ವರ್ಷ–ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಭಾರತದಲ್ಲಿ ಹುಟ್ಟಿರದಿದ್ದರೆ, ನಮ್ಮ ಸಂವಿಧಾನದಲ್ಲಿರುವ ಪರಿಕಲ್ಪನೆಯೇ ಇರುತ್ತಿರಲಿಲ್ಲ ಅವರು ನೀಡಿರುವ ಸಂವಿಧಾನ ಸ್ವಾತಂತ್ರ್ಯ ಭಾರತದ ಮೈಲಿಗಲ್ಲು ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಿ ನೋಡುವ ದೃಷ್ಟಿಕೋನ ಬದಲಾಗಬೇಕು ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ವಿಶ್ವಗುರು ಬುದ್ಧ ಪ್ರೊಡಕ್ಷನ್ ಸಂಸ್ಥೆಯಿಂದ ನಿರ್ಮಿಸಿರುವ ಮನೆಮನಕ್ಕೆ ಸಂವಿಧಾನ ಡಾಕ್ಯೂ ಡ್ರಾಮಾ ಸಾಕ್ಷ್ಯಚಿತ್ರವನ್ನು ಹೊರಟ್ಟಿ ಅವರು ಬಿಡುಗಡೆಗೊಳಿಸಿದರು. ಅಲ್ಲದೆ ವಿಶ್ವಗುರು ಬುದ್ಧ ಪ್ರೊಡಕ್ಷನ್ ಪ್ರಸ್ತುತಿಯ ಸಂವಿಧಾನ ಗೀತೆ ಬಿಡುಗಡೆಗೊಳಿಸಲಾಯಿತು.

**ಆಧಾರ:**ಉದಯವಾಣಿ, ದಿನಾಂಕ:28.11.2024

## 13. ಪರಿಷತ್ ನಿರಾಶ್ರಿತರ ಆಶ್ರಯ ಕೇಂದ್ರ :ಹೊರಟ್ಟಿ ಬೇಸರ

ವಿಧಾನಪರಿಷತ್ ಸದಸ್ಯರಾಗಿ ಅವಧಿ ಪೂರೈಸಿ ನಿವೃತ್ತರಾಗಿರುವ ಶಾಸಕರಿಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ದಿನಾಂಕ:27.11.2024ರಂದು ಕರ್ನಾಟಕ ವಿಧಾನಪರಿಷತ್ ವತಿಯಿಂದ ಸನ್ಮಾನಿಸಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಸನ್ಮಾನ ನೆರವೇರಿಸಿ ಮಾತನಾಡಿದ ಸಭಾಪತಿ ಹೊರಟ್ಟಿ ಅವರು, ರಾಜ್ಯದಲ್ಲಿನ ರಾಜಕೀಯ ಪಕ್ಷಗಳು ರಾಜಕೀಯ ಪುಡಾರಿಗಳು ಯಾರು ಇರುತ್ತಾರೋ ಅವರನ್ನ ತಂದು ವಿಧಾನಪರಿಷತ್‌ಗೆ ಹಾಕುತ್ತಿದ್ದಾರೆ. ಇದರಿಂದಾಗಿ ಕಲಾಪಗಳು ಸರಿಯಾಗಿ ನಡೆಯದೇ ನಿರಾಶ್ರಿತರ ಆಶ್ರಯ ಕೇಂದ್ರಗಳಂತಾಗಿದೆ ಎಂದು ಅಸಮಾಧಾನ ಹೊರ ಹಾಕಿದ್ದಾರೆ. ರಾಜಕೀಯಕ್ಕೆ

ನನ್ನನ್ನ ಯಾರು ಕರೆತಂದಿಲ್ಲ. ನಾನೇ ಸ್ವಂತ ಶಕ್ತಿಯಿಂದ ಬಂದಿದೇನೆ. ಕಲಾಪದಲ್ಲಿ ಭಾಗಿಯಾದ ಎಲ್ಲಾ ಶಾಸಕರ ಬಗ್ಗೆ ನನಗೆ ಮಾಹಿತಿ ಗೊತ್ತಿದೆ. ಯಾರು ಏನು ಚರ್ಚೆ ಮಾಡಿದ್ದಾರೆ ನನಗೆ ಗೊತ್ತಿದೆ. ನಾನು ಪರಿಷತ್‌ಗೆ ಬಂದಾಗ ಬೆಳಗ್ಗೆ 9.30ಕ್ಕೆ ಕಲಾಪ ಶುರುವಾಗಿ, ರಾತ್ರಿ 8 ಗಂಟೆಗೆ ಮುಗಿಯುತ್ತಿತ್ತು. ಸದನ ನಡೆಯುತ್ತಿದ್ದ ಸಂದರ್ಭದಲ್ಲಿ ಒಂದು ಸೂಜಿ ಬಿದ್ದರೂ ಅದರ ಶಬ್ದ ಕೇಳಿಸುವಷ್ಟು ನಿಶ್ಯಬ್ದ ಇರುತ್ತಿತ್ತು ಎಂದು ಹಿಂದಿನ ನೆನಪು ಮೆಲುಕು ಹಾಕಿದರು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:28.11.2024

## 14. ಧಾರ್ಮಿಕ ನಂಬಿಕೆ ದೌರ್ಬಲ್ಯವಲ್ಲ

ಯಾವುದೇ ಧರ್ಮ ಮತ್ತು ಸಮಾಜವು ಕೀಳರಿಮೆ ಹಾಗೂ ಪ್ರತ್ಯೇಕತೆಯನ್ನು ಅನುಭವಿಸುವ ವಾತಾರಣ ಇರಬಾರದು. ಧಾರ್ಮಿಕ ನಂಬಿಕೆ ದೌರ್ಬಲ್ಯವಲ್ಲ: ಅದು ಭೂಮಿಯ ಮೇಲಿನ ಸೌಹಾರ್ದತೆಯ ಪ್ರಬಲ ಶಕ್ತಿ ಎಂದು ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್ ವಿಶ್ಲೇಷಿಸಿದರು.

ರೋಮ್‌ನ ವ್ಯಾಟಿಕನ್ ನಗರದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಮೊದಲ ಅಂತಾರಾಷ್ಟ್ರೀಯ ಸರ್ವಧರ್ಮ ಸಮ್ಮೇಳನದ ಶತಮಾನೋತ್ಸವ ಸ್ಮರಣಾರ್ಥ ಮಾನವೀಯತೆಗಾಗಿ ಧರ್ಮಗಳ ಒಗ್ಗಟ್ಟು ಎಂಬ ಶೀರ್ಷಿಕೆ ಅಡಿ ಅಯೋಜಿಸಲಾದ ಮೂರು ದಿನಗಳ ವಿಶ್ವ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಾವು ವೈವಿಧ್ಯತೆಗಳನ್ನು ಹೊಂದಿದ್ದರೂ, ಪ್ರತಿಯೊಬ್ಬರೊಳಗಿರುವ ದೈವಿಕ ಚೇತನ ಒಂದೇ ಎಂದ ಅವರು, ಒಂದು ಜಾತಿ, ಒಂದು ಧರ್ಮ ಮತ್ತು ಒಬ್ಬ ದೇವರು ಎಂಬ ಬ್ರಹ್ಮಶ್ರೀ  ನಾರಾಯಣಗುರುಗಳ ಬೋಧನೆಯು ಕೇರಳದಲ್ಲಿ ಸಾಮಾಜಿಕ ಸಮಾನತೆ, ಸಾಮರಸ್ಯ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಪ್ರತಿಪಾದಿಸುವ ಮಹತ್ವದ ಸಾಮಾಜಿಕ ಆಂದೋಲನವನ್ನು ಸೃಷ್ಟಿಸಿತ್ತು. ಜತೆಗೆ, ನಾರಾಯಣ ಗುರುಗಳು ಸಮಾಜ ಸಬಲೀಕರಣ ಮತ್ತು ಉನ್ನತೀಕರಣದಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಜನರಲ್ಲಿ ಗಾಢವಾದ ಅರಿವು ಮೂಡಿಸಿದವರು ಎಂದು ಸ್ಮರಿಸಿದರು.

ಪ್ರತಿಯೊಂದು ಧರ್ಮಗ್ರಂಥ, ನಂಬಿಕೆ ಮತ್ತು ಅಧ್ಯಾತ್ಮಿಕ ಮಾರ್ಗದ ಮೂಲ ತತ್ವವು ಅಚಲವಾದ ಪ್ರೀತಿ ಮತ್ತು ಕರುಣೆಯಾಗಿದೆ. ಅದು ಪವಿತ್ರ ಬೈಬಲ್, ಕುರಾನ್, ವೇದಗಳು, ಧರ್ಮಪದ ಅಥವಾ ಟೋರಾ ಆಗಿರಲಿ, ಎಲ್ಲ ಧರ್ಮ ಗ್ರಂಥಗಳ ಸಾರವೇ ನಾವೆಲ್ಲರೂ ಒಂದು ಎನ್ನುವುದಾಗಿದೆ. ಇದು ಯಾವ ಕಾಲದಲ್ಲೂ ಬದಲಾವಣೆಯಾಗುವುದಿಲ್ಲ ಎನ್ನುವ ಮೂಲ ಸತ್ಯವನ್ನು ನಾವು ಸದಾ ನೆನಪಿಟ್ಟುಕೊಳ್ಳಬೇಕು ಎಂದರು.

**ಆಧಾರ:**ಉದಯವಾಣಿ, ದಿನಾಂಕ:03.12.2024

## 15. ವಿಧಾನಸಭಾ ಸಭಾಧ್ಯಕ್ಷರಿಗೆ ರೂ.45 ಲಕ್ಷ ವೆಚ್ಚದಲ್ಲಿ ಹೊಸ ಪೀಠ

ಸುವರ್ಣ ವಿಧಾನಸೌಧ (ಬೆಳಗಾವಿ) ವಿಧಾನಸಭೆಯ ಸಭಾಂಗಣದಲ್ಲಿ ಸಭಾಧ್ಯಕ್ಷರು ಆಸೀನರಾಗಲು ರೂ.45 ಲಕ್ಷದ ವೆಚ್ಚದಲ್ಲಿ ಬೀಟೆ ಮರದ ಹೊಸ ಪೀಠವನ್ನು ಅಳವಡಿಸಲಾಗಿದೆ. ವಿಧಾನಮಂಡಲದ ಚಳಿಗಾಲದ ಅಧಿವೇಶನದ ಮೊದಲ ದಿನವಾದ ದಿನಾಂಕ:09.12.2024ರಂದು ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಅವರು ಹೊಸ ಪೀಠದಲ್ಲಿ ಕುಳಿತು ಕಲಾಪ ನಡೆಸಿದರು.

ಹೊಸ ಪೀಠ ಅಳವಡಿಸಿರುವ ಕುರಿತು ಸದನದಲ್ಲಿ ಪ್ರಕಟಿಸಿದ ಖಾದರ್, ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಸಭೆಯಲ್ಲಿನ ಪೀಠದ ಪ್ರತಿರೂಪದಂತಿರುವ ಹೊಸ ಪೀಠವನ್ನು ಇಲ್ಲಿ ಅಳವಡಿಸಲಾಗಿದೆ. ಪೀಠದಲ್ಲಿ ಕುಳಿತು ನಾನು ಅದನ್ನು ಉದ್ಘಾಟಿಸಿದ್ದೇನೆ ಎಂದರು.

ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ನಿರ್ಮಾಣದ ಸಂದರ್ಭದಲ್ಲಿ ತಮ್ಮ ಕನಸಿನಂತೆ ವಿಧಾನಸಭೆಯ ಅಧ್ಯಕ್ಷರ ಪೀಠವನ್ನು ರೂಪಿಸಿದ್ದರು. ಶಿವಮೊಗ್ಗ ಜಿಲ್ಲೆಯಿಂದ ಬೀಟೆ ಮರವನ್ನು ತರಿಸಿ, ಅದರಿಂದ ಪೀಠವನ್ನು ರಚಿಸಲಾಗಿತ್ತು. ಅದೇ ಮಾದರಿಯಲ್ಲಿ ಗಂಡಭೇರುಂಡ ಲಾಂಛನ, ಸಿಂಹ ಲಾಂಛನ, ಸೂರ್ಯಕಾಂತಿ ಹೂವಿನ ಚಿತ್ತಾರದ ಮೇಲ್ಭಾಗ, ಮಾವಿನಕಾಯಿಯ ಚಿತ್ರಗಳುಳ್ಳ ಹೊಸ ಪೀಠವನ್ನು ರಚಿಸಲಾಗಿದೆ.

ಸಭಾಧ್ಯಕ್ಷರ ಹುದ್ದೆಗೆ ಸಂವಿಧಾನದಲ್ಲಿ ದೊಡ್ಡ ಗೌರವವಿದೆ. ಅದೇ ರೀತಿ ಪೀಠಕ್ಕೂ ಗೌರವವಿದೆ. ಈ ಕಾರಣಕ್ಕಾಗಿ ಬೆಂಗಳೂರಿನ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಇರುವಂತಹ ಪೀಠ ನಿರ್ಮಿಸಲಾಗಿದೆ ಎಂದು ಖಾದರ್ ವಿಧಾನಸಭೆಗೆ ತಿಳಿಸಿದರು.

**ಆಧಾರ:**ಪ್ರಜಾವಾಣಿ, ದಿನಾಂಕ:10.12.2024

## 16. ಸದನದಲ್ಲಿ ಹೆಚ್ಚು ಕಾಲ ಕುಳಿತರೆ ಹೆಚ್ಚು ಬಾರಿ ಗೆಲವು: ಸ್ಪೀಕರ್ ಖಾದರ್

ಸದನದಲ್ಲಿ ಜಾಸ್ತಿ ಸಮಯ ಕುಳಿತವರು, ಹೆಚ್ಚು ಬಾರಿ ಶಾಸಕರಾಗಿ ಗೆಲ್ಲುತ್ತಾರೆಂತೆ. ಹೀಗಾಗಿ ಶಾಸಕರಾದವರು ಸದನದಲ್ಲಿ ಹೆಚ್ಚು ಸಮಯ ಕಳೆಯಬೇಕು ಎಂದು ವಿಧಾನ ಸಭಾಧ್ಯಕ್ಷ ಶ್ರೀ ಯು.ಟಿ.ಖಾದರ್ ಪಾಠ ಮಾಡಿದರು. ದಿನಾಂಕ:13.12.2024ರಂದು ಬೆಳಿಗ್ಗೆ ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿಯ ಸುನೀಲ್ ಕುಮಾರ್, ಮೊದಲ ಸಾಲಲ್ಲಿ ಸಚಿವರೇ ಇಲ್ಲ. ಸದನವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಂತಿಲ್ಲ ಎಂದರು. ಆಗ ಸ್ಪೀಕರ್, ಶಾಸಕರಿಗೆ ಸದನ ಹಾಜರಿಯ ಪಾಠ ಹೇಳಿದರು.

**ಆಧಾರ:**ಉದಯವಾಣಿ, ದಿನಾಂಕ:14.12.2024

## 17. ವಿಧಾನಸಭೆ ಕಲಾಪದಲ್ಲಿ ಕನ್ನಡದ ಕಂಪು

ಸುವರ್ಣ ವಿಧಾನಸಭೆ ಅಕ್ಷರಶಃ ಧ್ವಜದ ಬಣ್ಣವಾದ ಕೆಂಪು, ಹಳದಿ ಬಣ್ಣಗಳ ಶಾಲುಗಳಿಂದ ಕಂಗೊಳಿಸಿತು. ಸ್ಪೀಕರ್ ಸೇರಿ ಮಂತ್ರಿಗಳು, ಶಾಸಕರ ಕೊರಳುಗಳಲ್ಲಿ ಕನ್ನಡ ಶಾಲು ರಾರಾಜಿಸಿದ್ದು ಗಮನ ಸೆಳೆಯಿತು.

ಮಂಡ್ಯದಲ್ಲಿ ನಡೆಯಲಿರುವ 87 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಮಹೇಶ್‌ಜೋಶಿ ಅವರು, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪ್ರತಿಪಕ್ಷದ ನಾಯಕ ಆರ್. ಅಶೋಕ್ ಸೇರಿ ಆಡಳಿತ ಮತ್ತು ವಿರೋಧ ಪಕ್ಷಗಳ ಶಾಸಕರುಗಳಿಗೆ ಕನ್ನಡ ಧ್ವಜದ ಶಾಲುಗಳನ್ನು ವಿತರಿಸಿ ಹಾಕಿಕೊಳ್ಳುವಂತೆ ಮನವಿ ಮಾಡಿದರು.

ಪ್ರತಿಯೊಬ್ಬರೂ ಕನ್ನಡ ಸಮ್ಮೇಳನಕ್ಕೆ ಸಹಮತ ಸೂಚಿಸಿ ಸದನ ಕಲಾಪಗಳಲ್ಲಿ ಕನ್ನಡ ಧ್ವಜದ ಶಾಲುಗಳನ್ನು ಧರಿಸಿ ಪಾಲ್ಗೊಂಡು ಗಮನ ಸೆಳೆದರು. ಇದೇ ವೇಳೆ ಸಚಿವರು, ಶಾಸಕರುಗಳಿಗೆ ಸಮ್ಮೇಳನಕ್ಕೆ ಆಗಮಿಸುವಂತೆ ಸಚಿವ ಚಲುವರಾಯಸ್ವಾಮಿ ಅವರು ಆಹ್ವಾನ ನೀಡಿದರು.

**ಆಧಾರ:**ಕನ್ನಡಪ್ರಭ, ದಿನಾಂಕ:13.12.2024

## 18. ಧನ ವಿನಿಯೋಗ ಸೇರಿ 9 ವರದಿ ಪರಿಷತ್ತಿನಲ್ಲೂ ಮಂಡನೆ

2023-24ನೇ ಸಾಲಿನ ಧನ ವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು ಸೇರಿದಂತೆ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಒಟ್ಟು 9 ವರದಿಗಳನ್ನು ದಿನಾಂಕ:13.12.2024ರಂದು ವಿಧಾನಪರಿಷತ್ತಿನಲ್ಲಿ ಮಂಡಿಸಲಾಯಿತು. ಬಿಎಂಟಿಸಿ ಕಾರ್ಯನಿರ್ವಹಣೆ ಕಾರ್ಯಕ್ಷಮತೆ ಲೆಕ್ಕ ಪರಿಶೋಧನಾ ವರದಿ, ಮಾರ್ಚ್ 2022ಕ್ಕೆ ಕೊನೆಗೊಂಡ ಸಾರ್ವಜನಿಕ ವಿತರಣಾ ವ್ಯವಸ್ಥೆ ಸರಬರಾಜು ನಿರ್ವಹಣಾ ಲೆಕ್ಕ ಪರಿಶೋಧನಾ ವರದಿ, ಕರ್ನಾಟಕ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿ ವರದಿ,

ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ ಮಂಡಿಸಲಾಯಿತು.

**ಆಧಾರ:**ವಿಶ್ವವಾಣಿ, ದಿನಾಂಕ:14.12.2024

## 19. ಒಂದೇ ದಿನ 14 ಗಂಟೆಗಳ ಕಾಲ ನಡೆದ ವಿಧಾನಸಭೆ ಕಲಾಪ: ದಾಖಲೆ

ವಿಧಾನಸಭೆ ಕಲಾಪವನ್ನು ಒಂದು ದಿನದಲ್ಲಿ 14 ಗಂಟೆಗಳಿಗೂ ಹೆಚ್ಚು ಕಾಲ ಕಲಾಪ ನಡೆಸುವ ಮೂಲಕ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ದಾಖಲೆ ಸೃಷ್ಟಿಸಿದ್ದಾರೆ. ಬೆಳಗ್ಗೆ 10.30ಕ್ಕೆ ಆರಂಭವಾದ ಕಲಾಪ ನಡುವೆ ಮಧ್ಯರಾತ್ರಿ 12.50ರವರೆಗೆ ನಡೆಯಿತು. ಬೆಳಗಾವಿಯಲ್ಲಿ 10 ದಿನಗಳ ಕಾಲ ನಡೆಯಬೇಕಿದ್ದ ಅಧಿವೇಶನ ಕನ್ನಡಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ 9 ದಿನಕ್ಕೆ ಮೊಟಕುಗೊಂಡಿದೆ. ಅದರ ಜತೆಗೆ ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ನಿಧನದಿಂದಾಗಿ ಇಡೀ ದಿನ ಸಂತಾಪ ಸೂಚನೆಗೆ ಮಾತ್ರ ಸೀಮಿತವಾಗಿತ್ತು. ಅಲ್ಲದೆ ದಿನಾಂಕ:11.12.2024ರಂದು ಸರ್ಕಾರಿ ರಜೆ ಘೋಷಣೆಯಿಂದಾಗಿ ಕಲಾಪ ನಡೆಯಲಿಲ್ಲ. ಹೀಗಾಗಿ ಅಧಿವೇಶನ 8 ದಿನಕ್ಕೆ ಇಳಿಕೆಯಾಗಿತ್ತು. ಈ ಕಾರಣದಿಂದಾಗಿ ವಿಧಾನಸಭೆಯ ಕಾರ್ಯಕಲಾಪವನ್ನು ಪೂರ್ಣಗೊಳಿಸುವ ಉದ್ದೇಶದಿಂದಾಗಿ ದಿನಾಂಕ:12.12.2024ರಂದು ರಾತ್ರಿ 10.15ರವರೆಗೆ ನಡೆಸಲಾಗಿತ್ತು. ಆ ಅವಧಿಯನ್ನೂ ಮೀರಿ ಬೆಳಗ್ಗೆ 10.30ಕ್ಕೆ ಆರಂಭವಾದ ಕಲಾಪ ಮಧ್ಯರಾತ್ರಿ 12.30 ಗಂಟೆವರೆಗೂ ನಡೆಸಲಾಯಿತು. ಮಧ್ಯಾಹ್ನ ಭೋಜನ ವಿರಾಮ ಮತ್ತು ಸಂಜೆ ಕಲಾವದಲ್ಲಿ ನಡೆದ ಗದ್ದಲದಿಂದಾಗಿ 30 ನಿಮಿಷಗಳ ಕಾಲ ಕಲಾಪ ಮುಂದೂಡಿದ್ದು ಬಿಟ್ಟರೇ ದಿನದಲ್ಲಿ ಒಟ್ಟು 12 ಗಂಟೆಯವರೆಗೆ ಕಲಾಪ ನಡೆಸಲಾಯಿತು.

ಕಲಾಪದಿಂದ ಕೆಲ ಶಾಸಕರು ಹೊರಗೆ ಹೋಗಲು ಮುಂದಾದಾಗ ಇನ್ನು ಅರ್ಧ ಗಂಟೆಯಲ್ಲಿ ಮುಗಿಯುತ್ತದೆ. ಬಂದು ಕುಳಿತುಕೊಳ್ಳಿ ಎಂದು ಕರೆದು ಕೂರಿಸುತ್ತಿದ್ದರು. ಸಮಯವಾಯಿತು ಎನ್ನುತ್ತಿದ್ದ ಶಾಸಕರಿಗೆ, ಕ್ರಿಕೆಟ್ ಆದರೆ, ಮಧ್ಯರಾತ್ರಿ 3 ಗಂಟೆವರೆಗೆ ನೋಡುತ್ತಿದ್ದೀರಲ್ವಾ? ಅದೇ ರೀತಿ ಈಗಲೂ ಕುಳಿತುಕೊಳ್ಳಿ' ಎಂದೂ ಸ್ಪೀಕರ್ ಹೇಳಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:17.12.2024

## 20. ರಾತ್ರಿ 1 ಗಂಟೆವರೆಗೂ ನಡೆದೆ ಸದನ ಕಲಾಪ: ದಾಖಲೆ

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ತಡರಾತ್ರಿ ಒಂದು ಗಂಟೆಯವರೆಗೆ ನಡೆಸುವ ಮೂಲಕ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ವಿಶಿಷ್ಟ ದಾಖಲೆಯೊಂದನ್ನು ಬರೆದಿದ್ದಾರೆ.

ದಿನಾಂಕ:09.12.2024ರಂದು ಬೆಳಿಗ್ಗೆ ಭಾವಚಿತ್ರ ಅನಾವರಣ, ಸಂತಾಪ, ಉತ್ತರ ಕರ್ನಾಟಕದ ಮೇಲಿನ ಚರ್ಚೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರಿಂದ ಪ್ರಶ್ನೋತ್ತರ ಹಾಗೂ ಗಮನ ಸೆಳೆಯುವ ಸೂಚನೆಗಳನ್ನು ಎತ್ತಿಕೊಂಡಿರಲಿಲ್ಲ. ಆದರೆ ಅಜೆಂಡಾದಲ್ಲಿ 60 ಗಮನ ಸೆಳೆಯುವ ಸೂಚನೆಗಳ ವಿಷಯದ ಚರ್ಚೆ ಸೇರಿಸಲಾಗಿತ್ತು. ಸಂಜೆ ಆರರ ಬಳಿಕ ಪ್ರಶ್ನೋತ್ತರವನ್ನು ಎತ್ತಿಕೊಂಡ ಯು.ಟಿ.ಖಾದರ್ ಅವರು, ಗಮನ ಸೆಳೆ ಯುವ ಚರ್ಚೆಯನ್ನು 10 ಗಂಟೆಯ ಹೊತ್ತಿಗೆ ಕೈಗೆತ್ತಿಕೊಂಡರು. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳುವ ವೇಳೆಗೆ ರಾತ್ರಿ ಒಂದು ಗಂಟೆಯಾಯಿತು. ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ ಎನ್ನುವ ದಾಖಲೆ ಬರೆದಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:18.12.2024

## 21. ಗದ್ದಲಿಕ್ಕಿರಲಿ ವಿರಾಮ ಚರ್ಚೆಗಳಾಗಲಿ ಅರಾಮ

ಬೆಳಗಾವಿಯಲ್ಲಿ ನಡೆಯುವ ಪ್ರತಿ ಅಧಿವೇಶನವೂ ಮಹತ್ವಪೂರ್ಣವೇ ಉತ್ತರ ಕರ್ನಾಟಕ ಸಮಸ್ಯೆಗಳನ್ನು ಬಿಂಬಿಸುವ ದೃಷ್ಟಿಯಿಂದ ಈ ಅಧಿವೇಶನ ಮಹತ್ವ ಮಾತ್ರವಲ್ಲ, ಅರ್ಥಪೂರ್ಣವೂ ಹೌದು.

ಬೆಂಗಳೂರಿನಲ್ಲಿ ನಡೆಯುವ ಅಧಿವೇಶನದಲ್ಲಿ ಹೆಚ್ಚಾಗಿ ಬಿಂಬಿತವಾಗದ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರತಿಬಿಂಬಿಸಿ, ಸುದೀರ್ಘವಾಗಿ ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳುವ ದೃಷ್ಟಿಯಿಂದ ಬೆಳಗಾವಿಯಲ್ಲಿ ಜರುಗುವ ಅಧಿವೇಶನ ಸಹಕಾರಿ ಚುನಾವಣಾ ದೃಷ್ಟಿಯಿಂದ ನೋಡಿದರೆ ಉತ್ತರ ಕರ್ನಾಟಕದ ಜನರ ದನಿಗೆ ಸ್ಪಂದಿಸಿದ ಹಿರಿಮೆ ಹೊತ್ತುಕೊಳ್ಳಲು ರಾಜಕೀಯ ಪಕ್ಷಗಳಿಗೆ ಇದಕ್ಕಿಂತ ಸದಾವಕಾಶ ಮತ್ತೊಂದಿಲ್ಲ. ಆದರೆ, ಪ್ರತಿ ಅಧಿವೇಶನದಲ್ಲೂ ಬರೀ ಗದ್ದಲ, ಗಲಾಟೆಗಳೇ ಹೆಚ್ಚಾಗಿರುವುದು ಈಗಿನ ವಿಚಿತ್ರ ಪರಿಸ್ಥಿತಿ, ಬೆಳಗಾವಿಯ ಸುವರ್ಣಸೌಧ ಈ ಬಾರಿ ಅಂತಹ ಅನಪೇಕ್ಷಿತ ಗದ್ದಲ, ಗಲಾಟೆ, ರಾಜಕೀಯ ಕಿತ್ತಾಟಗಳಿಗೆ ಸಾಕ್ಷಿಯಾಗಬಾರದು, ಆಡಳಿತಾರೂಢ ಬಿಜೆಪಿ ಸೇರಿದಂತೆ ಮೂರು ರಾಜಕೀಯ ಪಕ್ಷಗಳು ಪ್ರತಿಯೊಂದು ವಿಷಯದ ಚರ್ಚೆಯಲ್ಲೂ ಸಮರ್ಥವಾಗಿ ಭಾಗವಹಿಸಿ ಚರ್ಚಿಸಿ ಸದನದ ಚರ್ಚೆಗೊಂದು ಅರ್ಥಪೂರ್ಣತೆ ತಂದುಕೊಡಬೇಕು. ರಾಜಕಾರಣವನ್ನು ಹಿನ್ನೆಲೆಗೆ ತಳ್ಳಿ ಜನಹಿತವನ್ನು ಮುನ್ನೆಲೆಗೆ ತರಬೇಕು. ಸದನದಲ್ಲಿ ಮಂಡಿತವಾಗುವ ಶಾಸನಗಳ ಕುರಿತು ಉತ್ತಮ ಚರ್ಚೆಯಾಗಬೇಕು. ಪ್ರತಿನಿತ್ಯ ಬೆಳಿಗ್ಗೆ ಅರ್ಧಗಂಟೆ ಹಾಗೂ ಸಂಜೆ ಅರ್ಧ ಗಂಟೆ ಹೆಚ್ಚುವರಿಯಾಗಿ ಕಲಾಪ ನಡೆಯುವಂತಾಗಬೇಕು. ಸದನದ ಮೊದಲ ದಿನವೇ ಸದನ ಕಲಾಪ ಸಮಿತಿಯಲ್ಲಿ ಈ ಬಗ್ಗೆ ಚರ್ಚೆಯಾಗಿ ನಿರ್ಧಾರ ಕೈಗೊಳ್ಳಬೇಕು. ರಾಜ್ಯದ ಅನ್ಯಭಾಗದ ಜ್ವಲಂತ ಸಮಸ್ಯೆಗಳನ್ನೂ ಚರ್ಚಿಸಬೇಕು. ಆದರೆ, ಪ್ರಥಮಾಧ್ಯತೆ ಮಾತ್ರ ಉತ್ತರ ಕರ್ನಾಟಕದ ಸಮಸ್ಯೆಗಳತ್ತ ಇರಬೇಕು.

ಜನಪ್ರತಿನಿಧಿಗಳ ಈ ನಡೆಯ ಜೊತೆಗೆ ಸಾರ್ವಜನಿಕ ಸಂಸ್ಥೆಗಳು ಸಹಕರಿಸಬೇಕು. ಪ್ರತಿಭಟನೆಗಳು, ಮುತ್ತಿಗೆ ಹಾಕುವಂತಹ ಘಟನಾವಳಿಗಳಿಗೆ ಕೊಂಚ ಬಿಡುವು ಕೊಟ್ಟು ಸಮಸ್ಯೆ ಏನೇ ಇದರೂ ಅದನ್ನು ಸರ್ಕಾರದ ಪ್ರತಿನಿಧಿಯೊಂದಿಗೆ ಸೌಹಾರ್ದಯುತವಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಯತ್ನಿಸಬೇಕು. ಸದನದ ಪ್ರತಿ ನಿಮಿಷವನ್ನೂ ಹಾಳುಗೆಡದಂತೆ ಕಲಾಪ ನಡೆಯಬೇಕು. ಆ ಮೂಲಕ ಬೆಳಗಾವಿಯ ಅಧಿವೇಶನಕ್ಕೆ ಅರ್ಥ ತಂದುಕೊಡಬೇಕೆಂಬುದು ನನ್ನ ಸಹಜ ನಿರೀಕ್ಷೆ. ಆ ನಿರೀಕ್ಷೆ ಹುಸಿಯಾಗದು ಎಂಬುದು ನನ್ನ ದೃಢವಾದ ನಂಬಿಕೆ– ಶ್ರೀ ಬಸವರಾಜು ಎಸ್. ಹೊರಟ್ಟಿ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:19.12.2024

# ಭಾಗ–2

## ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

## 1. 16ನೇ ವಿಧಾನಪರಿಷತ್‌ನ 154ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ವಿಧಾನಪರಿಷತ್ತಿನ 154ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಚಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ: 09.12.2024 ರಿಂದ 19.12.2024ರವರೆಗೆ ಒಟ್ಟು 08 ದಿನಗಳು ಅಂದರೆ, 51 ಗಂಟೆ 48ನಿಮಿಷ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 14 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2024–25ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು), ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಗಳನ್ನು ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01 ಹಾಗೂ 02 ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 2023–24ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ 1 ಮತ್ತು 2), ಮಾರ್ಚ್–2022ಕ್ಕೆ ಕೊನೆಗೊಂಡ ವರ್ಷದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ:5), ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ (2024ರ ವರದಿ ಸಂಖ್ಯೆ:6), ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕಪರಿಶೋಧನೆ–ಸಿವಿಲ್) (2024ರ ವರದಿ ಸಂಖ್ಯೆ:7), ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ (2024ರ ವರದಿ ಸಂಖ್ಯೆ:8), ಕರ್ನಾಟಕದಲ್ಲಿನ ರಾಜ್ಯ ಸಂರಕ್ಷಿತ ಐತಿಹಾಸಿಕ ಪುರಾತತ್ವ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ಸಂರಕ್ಷಣೆಯ ಮೇಲಿನ ವರದಿ (2024ರ ವರದಿ ಸಂಖ್ಯೆ:9), 73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಕಾರ್ಯನಿರ್ವಹಣಾ ವರದಿ (2024ರ ವರದಿ ಸಂಖ್ಯೆ:10) ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆಯ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೆಯ ವರದಿ, ಸಾರ್ವಜನಿಕ ಉದ್ಯಮಗಳ ಸಮಿತಿಯ 137ನೇ ಮತ್ತು 138ನೇ ವರದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 38ನೇ ವರದಿ, ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ 39, 40, 41 ಹಾಗೂ 42ನೇ, ವರದಿಗಳನ್ನು ಒಪ್ಪಿಸಲಾಯಿತು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಮಾನ್ಯ ಶಾಸಕರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:22.10.2024ರಿಂದ 06 ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿಯನ್ನು ಪಡೆಯಲಾಯಿತು.

"ಬೆಳಗಾವಿಯಲ್ಲಿ 1924ರಲ್ಲಿ ನಡೆದ 39ನೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಂಭ್ರಮದಲ್ಲಿ ಆಚರಿಸಲು ಯೋಜಿಸಲಾಗಿದೆ. ಭಾರತದ ಸ್ವಾತಂತ್ರ ಹೋರಾಟದ ಇತಿಹಾಸದಲ್ಲಿಯೇ ವಿಶೇಷವಾದ ಅಧಿವೇಶನ ಎಂಬ ಹೆಗ್ಗಳಿಕೆಗೂ ಈ ಬೆಳಗಾವಿ ಅಧಿವೇಶನ ಪಾತ್ರವಾಗಿದೆ. ಇದಕ್ಕೆ ಕಾರಣ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಇದು. ಅಲ್ಲದೆ ನಮ್ಮ ರಾಜ್ಯದಲ್ಲಿ ನಡೆದ ಏಕೈಕ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ ಅಧಿವೇಶನ ಕೂಡ ಹೌದು. ಹಿಂದೂ–ಮುಸ್ಲಿಂ ಸೌಹಾರ್ದತೆಯನ್ನು ಸಾರಿ ಏಕತೆಯಿಂದ ಅಖಂಡ ಭಾರತದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಹೆಚ್ಚಿಸಿದ, **'ಗಾಂಧಿ'** ಎನ್ನುವ ಬಿಂಬ ಸಾವಿರ ಕಣ್ಣುಗಳಲ್ಲಿ ಸಾವಿರ ತೆರನಾಗಿ ರೂಪಗೊಳ್ಳಲು ಕಾರಣವಾದ ವೇದಿಕೆ ಇದಾಗಿತ್ತು" ಎಂಬ ಅಧಿಕೃತ ನಿರ್ಣಯವನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು 5 ಗಂಟೆ 43 ನಿಮಿಷಗಳ ಕಾಲ, ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿರುವ ಹಿನ್ನಲೆಯಲ್ಲಿ ಅವರ ಕುರಿತು 4 ಗಂಟೆ 25 ನಿಮಿಷ ಕಾಲ ಹಾಗೂ ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆ, ಶಿಕ್ಷಣ ಮತ್ತು ಹದಿ ಹರಿಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು ಹಾಗೂ ಪರಿಹಾರೋಪಾಯಿಗಳ ಕುರಿತು 45 ನಿಮಿಷಗಳ ಕಾಲ ವಿಶೇಷ ಚರ್ಚೆಯಾಗಿರುತ್ತದೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹೇಳಿಕೆ ನೀಡಿದರು.

ನಿಯಮ 59 ರಡಿಯಲ್ಲಿ ಒಟ್ಟು 06 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ನಿಯಮ 68ಕ್ಕೆ, 02 ನಿಯಮ 72ಕ್ಕೆ ಪರಿವರ್ತನೆಗೊಂಡು ಸದನದಲ್ಲಿ ಉತ್ತರಿಸಲಾಗಿರುತ್ತದೆ ಹಾಗೂ 01 ನಿಯಮ 330ಕ್ಕೆ ಪರಿವರ್ತಿಸಲಾಗಿದೆ. 02 ತಿರಸ್ಕೃತಗೊಂಡಿರುತ್ತದೆ.

ನಿಯಮ 68ರಡಿಯಲ್ಲಿ 04 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 02 ಸೂಚನೆಗಳು ಅನುಮೋದನೆಗೊಂಡು 02 ತಿರಸ್ಕೃತಗೊಂಡಿರುತ್ತವೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1397 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 104 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 26 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1247 ಪ್ರಶ್ನೆಗಳ ಪೈಕಿ 886 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 142 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 07 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 65 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 99 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 01 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 45 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 73 ಸೂಚನೆಗಳ ಪೈಕಿ 09ಕ್ಕೆ ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತರೂಪದಲ್ಲಿರುವ 02 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 14 ವಿದೇಯಕಗಳಿಗೆ ವಿಧಾನಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ ಹಾಗೂ 02 ವಿಧೇಯಕಗಳನ್ನು ಹಿಂಪಡೆಯಲಾಯಿತು.

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಬೆಳಗಾವಿ ಜಿಲ್ಲೆಯ ಜಿಲ್ಲಾಡಳಿತ ವರ್ಗಕ್ಕೆ ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿದರು.

## 2. ವಿಧಾನಪರಿಷತ್ತಿನ ವಸತಿ ಸಮಿತಿಯ ಸದಸ್ಯರ ನಾಮನಿರ್ದೇಶನ ಬಗ್ಗೆ

# ಕರ್ನಾಟಕ ವಿಧಾನಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 01ನೇ ಅಕ್ಟೋಬರ್, 2024**

**ಸಂಖ್ಯೆ: 51**

ವಿಧಾನಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಶರವಣ ಟಿ.ಎ. ಅವರು ವಸತಿ ಸಮಿತಿಯ ಸದಸ್ಯ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಮಾನ್ಯ ಸಭಾಪತಿಯವರು ಅಂಗೀಕರಿಸಿ, ಸದರಿ ಸ್ಥಾನಕ್ಕೆ ಮಾನ್ಯ ಶಾಸಕರಾದ ಶ್ರೀ ಪ್ರದೀಪ್ ಶೆಟ್ಟರ್ ಅವರನ್ನು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್ ಮಹಾಲಕ್ಷ್ಮಿ,**
ಕಾರ್ಯದರ್ಶಿ
ಕರ್ನಾಟಕ ವಿಧಾನಪರಿಷತ್ತು.

ಕರ್ನಾಟಕ ವಿಧಾನಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ,

**www.kla.kar.nic.in/council.concil/htm**

## 3. ಶ್ರೀ ಸಿ.ಪಿ.ಯೋಗೇಶ್ವರ್ ವಿಧಾನಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆಗೆ ಸಂಬಂಧಿಸಿದ ಲಘು ಪ್ರಕಟಣೆ

## ಕರ್ನಾಟಕ ವಿಧಾನಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, ದಿನಾಂಕ: 21ನೇ ಅಕ್ಟೋಬರ್, 2024**

**ಸಂಖ್ಯೆ:52**

ಕರ್ನಾಟಕ ವಿಧಾನಪರಿಷತ್ತಿನ ಶಾಸಕರಾದ ಶ್ರೀ ಸಿ.ಪಿ. **ಯೋಗೇಶ್ವರ್**, ಇವರು ವಿಧಾನಪರಿಷತ್ತಿನ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದು, ಮಾನ್ಯ ಸಭಾಪತಿಯವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 185(2)ರ ಮೇರೆಗೆ ದಿನಾಂಕ: 21.10.2024ರಂದು ಅಂಗೀಕರಿಸಿರುತ್ತಾರೆಂದು ಮಾನ್ಯ ಶಾಸಕರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಎಸ್. ನಿರ್ಮಲ,**
ಕಾರ್ಯದರ್ಶಿ–2,
ಕರ್ನಾಟಕ ವಿಧಾನಪರಿಷತ್ತು.

ವಿಧಾನಪರಿಷತ್ತಿನ ಮಾನ್ಯ ಶಾಸಕರುಗಳಿಗೆ

**www.kla.kar.nic.in/council.concil/htm**

# 4. ವಿವಿಧ ಸಮಿತಿಗಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ

## ಕರ್ನಾಟಕ ವಿಧಾನಪರಿಷತ್ತು

**ಲಘು ಪ್ರಕಟಣೆ ಭಾಗ –2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 29ನೇ ಅಕ್ಟೋಬರ್, 2024**

**ಸಂಖ್ಯೆ: 53**

ದಿನಾಂಕ:30.08.2024ರ ಲಘುಪ್ರಕಟಣೆ ಸಂಖ್ಯೆ:46ನ್ನು ಭಾಗಶ: ಮಾರ್ಪಡಿಸಿ, ಈ ಕೆಳಕಂಡಂತೆ ವಿಧಾನಪರಿಷತ್ತಿನ ಮಾನ್ಯ ಶಾಸಕರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸಮಿತಿಗಳಿಗೆ ಸದಸ್ಯರನ್ನಾಗಿ ಮಾನ್ಯ ಸಭಾಪತಿಯವರು ಮರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

| ಕ್ರ. ಸಂ. | ಸದಸ್ಯರ ಹೆಸರು ಶ್ರೀಮತಿ/ಶ್ರೀಯುತರುಗಳಾದ | ಹಿಂದೆ ನಾಮನಿರ್ದೇಶನ ಮಾಡಿದ್ದ ಸಮಿತಿ | ಮರು ನಾಮನಿರ್ದೇಶನ ಮಾಡಲಾಗಿರುವ ಸಮಿತಿ |
|---|---|---|---|
| 1. | ಶಾಂತಾರಾಂ ಬುಡ್ನ ಸಿದ್ದಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ |
| 2. | ಹೇಮಲತಾ ನಾಯಕ್ | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ |

**ಎಸ್. ನಿರ್ಮಲ**
ಕಾರ್ಯದರ್ಶಿ–2,
ಕರ್ನಾಟಕ ವಿಧಾನಪರಿಷತ್ತು.

ವಿಧಾನಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ

# 5. “ವಿಶೇಷ ಸದನ ಸಮಿತಿ”ಯ ಅವಧಿಯನ್ನು ವಿಸ್ತರಿಸಿರುವ ಬಗ್ಗೆ

## ಕರ್ನಾಟಕ ವಿಧಾನಪರಿಷತ್ತು

**ಲಘು ಪ್ರಕಟಣೆ ಭಾಗ – 2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 05ನೇ ನವೆಂಬರ್, 2024**

**ಸಂಖ್ಯೆ:54**

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ಅಂತಿಮ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ‘ವಿಶೇಷ ಸದನ ಸಮಿತಿ’ಯ ಅವಧಿಯನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ, ದಿನಾಂಕ:22.10.2024 ರಿಂದ ಆರು ತಿಂಗಳವರೆಗೆ ವಿಸ್ತರಿಸಲಾಗಿದೆಯೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಎಸ್. ನಿರ್ಮಲ**
ಕಾರ್ಯದರ್ಶಿ–2,
ಕರ್ನಾಟಕ ವಿಧಾನಪರಿಷತ್ತು.

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ

**www.kla.kar.nic.in/council.concil/htm**

# 6. ವಿಶೇಷ ಜಂಟಿ ಸದನ ಸಮಿತಿಗೆ ಸದಸ್ಯರ ನಾಮನಿರ್ದೇಶನ ಮಾಡುವ ಬಗ್ಗೆ

## ಕರ್ನಾಟಕ ವಿಧಾನಪರಿಷತ್ತು

### ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ: 21ನೇ ನವೆಂಬರ್, 2024**

**ಸಂಖ್ಯೆ:55**

ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಆಲೈಡ್ ಹೆಲ್ತ್, ಸೈನ್ಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯಲ್ಲಿ ಶಾಸಕರಾಗಿದ್ದ ಶ್ರೀ ಯು.ಬಿ.ವೆಂಕಟೇಶ್ ಇವರ ನಿವೃತ್ತಿಯಿಂದ ತೆರವಾದ ಸ್ಥಾನಕ್ಕೆ ಡಾ:ಧನಂಜಯ ಸರ್ಜಿ ವಿಧಾನಪರಿಷತ್ತಿನ ಮಾನ್ಯ ಶಾಸಕರು ಇವರನ್ನು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆಯೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್.ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಪರಿಷತ್ತು.

ವಿಧಾನಪರಿಷತ್ತಿನ ಮಾನ್ಯ ಶಾಸಕರುಗಳಿಗೆ

# 7. ಮಾನ್ಯ ಸಭಾಪತಿ ಮತ್ತು ಮಾನ್ಯ ಉಪಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ

**ಕರ್ನಾಟಕ ವಿಧಾನಪರಿಷತ್ತು**

**154ನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 10ನೇ ಡಿಸೆಂಬರ್, 2024**

**ಸಂಖ್ಯೆ: 58**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

1. ಶ್ರೀ ಶಶೀಲ್ ಜಿ ನಮೋಶಿ
2. ಶ್ರೀಮತಿ ಭಾರತಿ ಶೆಟ್ಟಿ
3. ಶ್ರೀ ಕೆ.ಎ.ತಿಪ್ಪೇಸ್ವಾಮಿ
4. ಶ್ರೀ ಮಂಜುನಾಥ್ ಭಂಡಾರಿ

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನಪರಿಷತ್ತು.

ವಿಧಾನಪರಿಷತ್ತಿನ ಮಾನ್ಯ ಶಾಸಕರುಗಳಿಗೆ

www.kla.kar.nic.in/council.htm

# 8. ಸಭೆಯ ಮುಂದಿಡಲಾಗುವ ಕಾಗದಪತ್ರಗಳ ಸಮಿತಿಗೆ ನಾಮನಿರ್ದೇಶನ ಮಾಡುವ ಬಗ್ಗೆ

## ಕರ್ನಾಟಕ ವಿಧಾನಪರಿಷತ್ತು

**ಲಘು ಪ್ರಕಟಣೆ ಭಾಗ –2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಬುಧವಾರ, ದಿನಾಂಕ: 04ನೇ ಡಿಸೆಂಬರ್, 2024**

**ಸಂಖ್ಯೆ:60**

ದಿನಾಂಕ:30.08.2024ರ ಲಘು ಪ್ರಕಟಣೆ ಸಂಖ್ಯೆ: 46ನ್ನು ಭಾಗಶ: ಮಾರ್ಪಡಿಸಿ, ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಕಿಶೋರ್‌ಕುಮಾರ್ ಪುತ್ತೂರ್ ಅವರನ್ನು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಗೆ ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಪರಿಷತ್ತು.

ವಿಧಾನಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ

# 9. ಜಂಟಿ ಸಮಿತಿಗಳಿಗೆ ಸದಸ್ಯರನ್ನು ಮುಂದುವರೆಸುವ ಬಗ್ಗೆ

## ಕರ್ನಾಟಕ ವಿಧಾನಪರಿಷತ್ತು

**ಲಘು ಪ್ರಕಟಣೆ ಭಾಗ –2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ: 19ನೇ ಡಿಸೆಂಬರ್, 2024**

**ಸಂಖ್ಯೆ:62**

ದಿನಾಂಕ:29.10.2024ರ ಲಘು ಪ್ರಕಟಣೆ ಸಂಖ್ಯೆ: 53ನ್ನು ರದ್ದುಪಡಿಸಿ, ಮಾನ್ಯ ಶಾಸಕರುಗಳಾದ ಶ್ರೀ ಶಾಂತಾರಾಂ ಬುಡ್ನ ಸಿದ್ದಿಯವರನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಹಾಗೂ ಶ್ರೀಮತಿ ಹೇಮಲತಾ ನಾಯಕ್ ಅವರನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗಳಲ್ಲಿ ಸದಸ್ಯರನ್ನಾಗಿ ಮುಂದುವರೆಸಲಾಗಿದೆ ಎಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಪರಿಷತ್ತು.

ವಿಧಾನಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ

## 10. 16ನೇ ವಿಧಾನಸಭೆ 5ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

- 16ನೇ ವಿಧಾನಸಭೆಯ 5ನೇ ಅಧಿವೇಶನವು ದಿನಾಂಕ 09ನೇ ಡಿಸೆಂಬರ್, 2024ರಂದು ಬೆಳಗಾವಿ ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಪ್ರಾರಂಭವಾಗಿ 19ನೇ ಡಿಸೆಂಬರ್, 2024 ರವರೆಗೆ 08 ದಿನಗಳ ಕಾಲ ಸುಮಾರು 63 ಗಂಟೆ 57 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.
- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.
- ರಾಷ್ಟ್ರಪತಿಗಳು/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.
- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು 16 ವಿಧೇಯಕಗಳನ್ನು ಮಂಡಿಸಿ, ಪರ್ಯಾಲೋಚಿಸಿ, ಅಂಗೀಕರಿಸಲಾಗಿದೆ.
- 2024ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ ಮತ್ತು 2024ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕಗಳನ್ನು ಹಿಂಪಡೆಯಲಾಗಿದೆ.
- ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು ನಡೆದ ಚರ್ಚೆಯಲ್ಲಿ 49 ಸದಸ್ಯರುಗಳು ಭಾಗವಹಿಸಿದ್ದು ಸುಮಾರು 13 ಗಂಟೆ 11 ನಿಮಿಷಗಳ ಕಾಲ ಚರ್ಚೆ ನಡೆಸಲಾಗಿದೆ.
- ನಿಯಮ 60 ರಡಿಯಲ್ಲಿ ನೀಡಿದ್ದ 2 ನಿಲುವಳಿ ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿರುವುದನ್ನು ಸೇರಿದಂತೆ ಒಟ್ಟು 04 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ.
- ಒಟ್ಟು 3004 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 150 ಪ್ರಶ್ನೆಗಳ ಪೈಕಿ 137 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 2237 ಪ್ರಶ್ನೆಗಳ ಪೈಕಿ 1794 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಗಮನ ಸೆಳೆಯುವ 444 ಸೂಚನೆಗಳ ಪೈಕಿ 294 ಸೂಚನೆಗಳಿಗೆ ಉತ್ತರವನ್ನು ಸ್ವೀಕರಿಸಲಾಗಿದೆ.
- ನಿಯಮ 351 ರಡಿಯಲ್ಲಿ 160 ಸೂಚನೆಗಳನ್ನು ಅಂಗೀಕರಿಸಿದ್ದು, 80 ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಶೂನ್ಯ ವೇಳೆಯಲ್ಲಿ ಒಟ್ಟು 05 ಸೂಚನೆಗಳನ್ನು ಚರ್ಚಿಸಲಾಗಿದೆ.
- ರಾಜ್ಯದಲ್ಲಿ ಸುರಿದ ಅಧಿಕ ಮಳೆಯಿಂದ ಉಂಟಾದ ನಷ್ಟ ಕುರಿತಂತೆ ಕಂದಾಯ ಸಚಿವರು ನೀಡಿದ ಹೇಳಿಕೆ ಮೇಲೆ ಚರ್ಚಿಸಲಾಗಿದ್ದು, ಮಾನ್ಯ ಕಂದಾಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಿರುತ್ತಾರೆ.
- 2024–25ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಕಂತು ಹಾಗೂ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸಿ, ದಿನಾಂಕ:17.12.2024 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಯಿತು.
- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಕೆಳಕಂಡ 08 ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

| | |
|---|---|
| 1. | 2023–24ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ I ಮತ್ತು II) |
| 2. | ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ:5) |
| 3. | ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ (2024ರ ವರದಿ ಸಂಖ್ಯೆ:6) |
| 4. | ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕಪರಿಶೋಧನೆ–ಸಿವಿಲ್) (2024ರ ವರದಿ ಸಂಖ್ಯೆ:7) |
| 5. | ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ (2024ರ ವರದಿ ಸಂಖ್ಯೆ:8) |
| 6. | ಕರ್ನಾಟಕದಲ್ಲಿನ ರಾಜ್ಯ ಸಂರಕ್ಷಿತ ಐತಿಹಾಸಿಕ ಪುರಾತತ್ವ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ಸಂರಕ್ಷಣೆಯ ಮೇಲಿನ ವರದಿ (2024ರ ವರದಿ ಸಂಖ್ಯೆ:9) |
| 7. | 73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಕಾರ್ಯನಿರ್ವಹಣಾ ವರದಿ (2024ರ ವರದಿ ಸಂಖ್ಯೆ:10) |
| 8. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆಯ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ–4) |

- ಕರ್ನಾಟಕ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಈ ಕೆಳಕಂಡ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿರುತ್ತದೆ.

| | |
|---|---|
| 1. | ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮಿತಿಯ 2024–25ನೇ ಸಾಲಿನ ಮೊದಲನೇ ವರದಿ. |
| 2. | ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 2023–24ನೇ ಸಾಲಿನ ಮೂವತ್ತೆಂಟನೇ ವರದಿ. |
| 3. | ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರ ಮೂವತ್ತೇಳನೇ ಮತ್ತು ನೂರ ಮೂವತ್ತೆಂಟನೇ ವರದಿಗಗಳು. |
| 4. | ಕರ್ನಾಟಕ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 2023–24ನೇ ಸಾಲಿನ ಮೂರನೇ ವರದಿ. |
| 5. | ಕರ್ನಾಟಕ ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2024–25ನೇ ಸಾಲಿನ ನಾಲ್ಕನೇ ವರದಿ. |
| 6. | ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 2023–24ನೇ ಸಾಲಿನ 39ನೇ ವರದಿ ಹಾಗೂ 2024–25ನೇ ಸಾಲಿನ 40, 41 ಮತ್ತು 42ನೇ ವರದಿಗಳು |
| 7. | ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯ 2024–25ನೇ ಸಾಲಿನ ಮೊದಲನೇ ವರದಿ. |

- 41 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

- ಸಭೆಯ ಮುಂದಿಡಲಾದ ಕಾಗದ ಪತ್ರಗಳ 1 ಮತ್ತು 2 ಪಟ್ಟಿಯಿಂದ ಒಟ್ಟು 24 ಅಧಿಸೂಚನೆಗಳು, 02 ಅಧ್ಯಾದೇಶಗಳು ಮತ್ತು 170 ವಾರ್ಷಿಕ ವರದಿಗಳು, 181 ಲೆಕ್ಕ

ಪರಿಶೋಧನಾ ವರದಿಗಳು, 03 ಲೆಕ್ಕ ತಪಾಸಣಾ ವರದಿಗಳು, 05 ಅನುಪಾಲನ ವರದಿಗಳು, ಹಾಗೂ 04 ಅನುಸರಣಾ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿರುತ್ತದೆ.

- ಒಂದು ಹಕ್ಕುಚ್ಯುತಿ ಸೂಚನೆಯನ್ನು ತನಿಖೆ, ಪರಿಶೀಲನೆ ಮತ್ತು ವರದಿಗಾಗಿ ಹಕ್ಕುಬಾಧ್ಯತೆಗಳ ಸಮಿತಿಗೆ ವಹಿಸಲಾಗಿದೆ.

- ಬೆಳಗಾವಿಯಲ್ಲಿ 1924ರಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಅಧಿಕೃತ ನಿರ್ಣಯವನ್ನು ದಿನಾಂಕ: 19.12.2024 ರಂದು ಸದನದಲ್ಲಿ ಮಂಡಿಸಿ, ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

- ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೆನೆಟ್‌ಗೆ ಮೂರು ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸದನವು ಮಾನ್ಯ ಸಭಾಧ್ಯಕ್ಷರಿಗೆ ದಿನಾಂಕ:18.12.2024 ರಂದು ಅಧಿಕಾರ ನೀಡಿರುತ್ತದೆ.

- ಸದನದಲ್ಲಿ ಶ್ರೀ ಟಿ.ಬಿ.ಜಯಚಂದ್ರರವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

- ಅಂತರ್‌ರಾಷ್ಟ್ರೀಯ ವಿಶ್ವಚೆಸ್ ಚಾಂಪಿಯನ್‌ಶಿಪ್ ಪಟ್ಟವನ್ನು ಮುಡಿಗೇರಿಸಿಕೊಂಡ ಭಾರತದ ಗುಖೇಶ್ ದೊಮ್ಮರಾಜು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲಾಗಿದೆ.

- ಬೆಳಗಾವಿಯ ಸುವರ್ಣ ವಿಧಾನಸೌಧದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಶಾಶ್ವತ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ.

- ಬೆಳಗಾವಿಯ ಸುವರ್ಣ ವಿಧಾನಸೌಧದ ಮೊದಲನೇ ಮಹಡಿಯಲ್ಲಿ ಅನುಭವ ಮಂಟಪದ ತೈಲಚಿತ್ರವನ್ನು ಅನಾವರಣ ಮಾಡಲಾಗಿದೆ.

- ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿರುವ ಸಭಾಧ್ಯಕ್ಷರ ಪೀಠವನ್ನು ಹೊಸದಾಗಿ ರೋಸ್‌ವುಡ್‌ನಿಂದ ನಿರ್ಮಿಸಿ ಅಳವಡಿಸಲಾಗಿದೆ.

- ದಿನಾಂಕ: 16.12.2024ರಂದು ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಭಾರತ ದೇಶದ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಹಾಗೂ ದೇಶದ ಪ್ರಥಮ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್, ದೇಶದ ಪ್ರಥಮ ಪ್ರಧಾನಿ ಶ್ರೀ ಪಂಡಿತ್ ಜವಹರ್‌ಲಾಲ್ ನೆಹರು, ಸ್ವಾತಂತ್ರ್ಯ ಹೋರಟಾಗಾರರು ಹಾಗೂ ದೇಶದ ಪ್ರಥಮ ಶಿಕ್ಷಣ ಸಚಿವರಾದ ಶ್ರೀ ಮೌಲಾನಾ ಅಬುಲ್ ಕಲಾಂ ಅಜಾದ್, ಮತ್ತು ದೇಶದ ಪ್ರಥಮ ಮಹಿಳಾ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರುಗಳ ಕಲಾಕೃತಿಗಳನ್ನು ಅನಾವರಣಗೊಳಿಸ ಲಾಯಿತು ಹಾಗೂ ಮರುವಿನ್ಯಾಸಗೊಂಡ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್, ಭಾರತದ ಆಧ್ಯಾತ್ಮಿಕ ಹಾಗೂ ತತ್ವಜ್ಞಾನಿಗಳಾದ ಸ್ವಾಮಿ ವಿವೇಕಾನಂದ, ಅಪ್ರತಿಮ ಸ್ವಾತಂತ್ರ್ಯ ಹೋರಟಗಾರರಾದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ವರ್ಣಚಿತ್ರಗಳನ್ನು ಸಹ ಅನಾವರಣಗೊಳಿಸಲಾಗಿದೆ.

- ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಪ್ರಥಮ ಬಾರಿಗೆ ತಡರಾತ್ರಿಯವರೆಗೆ ಅಧಿವೇಶನ ನಡೆಸಿ ದಾಖಲೆ ನಿರ್ಮಿಸಲಾಗಿದೆ.

ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ಉಪಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ಬೆಳಗಾವಿಯಲ್ಲಿ ವಸತಿ ಮತ್ತು ಸಾರಿಗೆ ವ್ಯವಸ್ಥೆ ಮಾಡಿಕೊಟ್ಟು ಶಾಸಕರ ಸೌಕರ್ಯಕ್ಕೆ ನಿರಂತರವಾಗಿ ಪ್ರಯತ್ನಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಎಲ್ಲರಿಗೂ ಹಾಗೂ ವಿಶೇಷವಾಗಿ ಬೆಳಗಾವಿ ಜಿಲ್ಲಾಡಳಿತದವರಿಗೆ ಹಾಗೂ ಕಾನೂನು ಸುವ್ಯವಸ್ಥೆಯ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹಿಸಿದ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಾಗೂ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನಾಡಿನ ಜನತೆಗೆ ಮುಂಬರುವ 2025ರ ಹೊಸ ವರ್ಷದ ಶುಭಾಶಯಗಳನ್ನು ಸಲ್ಲಿಸಿದರು.

*****

# 11. ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನ

**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ: 03ನೇ ಅಕ್ಟೋಬರ್, 2024.**

**ಸಂಖ್ಯೆ : 115**

ದಿನಾಂಕ:27.09.2024ರ ಲಘು ಪ್ರಕಟಣೆ ಸಂಖ್ಯೆ:112ನ್ನು ಭಾಗಶ: ಮಾರ್ಪಡಿಸಿ. ಈ ಕೆಳಕಂಡಂತೆ ವಿಧಾನಸಭೆಯ ಮಾನ್ಯ ಸದಸ್ಯರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸಮಿತಿಗಳಿಗೆ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ಮರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

| ಕ್ರ. ಸಂ. | ಸದಸ್ಯರ ಹೆಸರು ಶ್ರೀಯುತರುಗಳಾದ | ಹಿಂದೆ ನಾಮನಿರ್ದೇಶನ ಮಾಡಿದ್ದ ಸಮಿತಿ | ಮರು ನಾಮನಿರ್ದೇಶನ ಮಾಡಲಾಗಿರುವ ಸಮಿತಿ |
|---|---|---|---|
| 1. | ಚನ್ನಾರೆಡ್ಡಿ ಪಾಟೀಲ್ ತುನ್ನೂರು | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ |
| 2. | ಶ್ರೀನಿವಾಸಯ್ಯ ಎನ್ | ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ |
| 3. | ಶರಣಗೌಡ ಕಂದಕೂರ | ಸರ್ಕಾರಿ ಭರವಸೆಗಳ ಸಮಿತಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ |

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.

# 12. ಸಮಿತಿಗಳಿಗೆ ಸದಸ್ಯರುಗಳ ಮರು ನಾಮನಿರ್ದೇಶನ ಮಾಡುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ: 16ನೇ ಅಕ್ಟೋಬರ್, 2024.**

**ಸಂಖ್ಯೆ :119**

ದಿನಾಂಕ:27.09.2024ರ ಲಘು ಪ್ರಕಟಣೆ ಸಂಖ್ಯೆ:112ನ್ನು ಭಾಗಶಃ ಮಾರ್ಪಡಿಸಿ, ಈ ಕೆಳಕಂಡಂತೆ ವಿಧಾನಸಭೆಯ ಮಾನ್ಯ ಸದಸ್ಯರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸಮಿತಿಗಳಿಗೆ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ಮರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

| ಕ್ರ. ಸಂ. | ಸದಸ್ಯರ ಹೆಸರು ಶ್ರೀಯುತರುಗಳಾದ | ಹಿಂದೆ ನಾಮನಿರ್ದೇಶನ ಮಾಡಿದ್ದ ಸಮಿತಿ | ಮರು ನಾಮನಿರ್ದೇಶನ ಮಾಡಲಾಗಿರುವ ಸಮಿತಿ |
|---|---|---|---|
| 1. | ಮಹೇಶ್ ಟೆಂಗಿನಕಾಯಿ | ವಸತಿ ಸೌಕರ್ಯಗಳ ಸಮಿತಿ | ಅರ್ಜಿಗಳ ಸಮಿತಿ |
| 2. | ಡಾ.ಚಂದ್ರು ಲಮಾಣಿ | ಅರ್ಜಿಗಳ ಸಮಿತಿ | ವಸತಿ ಸೌಕರ್ಯಗಳ ಸಮಿತಿ |

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.

# 13. ವಿವಿಧ ಸ್ಥಾಯಿ ಸಮಿತಿಗಳನ್ನು ನಿರ್ದಿಷ್ಟ ಸ್ಥಳ/ಕೊಠಡಿಗಳಲ್ಲಿ ನಡೆಸುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ 22ನೆ ಅಕ್ಟೋಬರ್, 2024**

**ಸಂಖ್ಯೆ:120**

ಕರ್ನಾಟಕ ವಿಧಾನ ಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳು ನಿಯಮಿತವಾಗಿ ಮತ್ತು ಸುಸೂತ್ರವಾಗಿ ಸಭೆಗಳನ್ನು ನಡೆಸಲು ಹಾಗೂ ಸಮಿತಿ ಸಭೆಗಳಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಸಂದರ್ಭಾನುಸಾರವಾಗಿ ಹಾಜರಾಗಲು ಮತ್ತು ವಿಧಾನಸಭೆಯ ಸಚಿವಾಲಯದ ವರದಿಗಾರರು ಸರದಿಯಂತೆ ಎಲ್ಲಾ ಸಮಿತಿ ಸಭೆಗಳ ನಡವಳಿಗಳನ್ನು ದಾಖಲಿಸಿಕೊಳ್ಳಲು ಅನುಕೂಲವಾಗುವಂತೆ ಈ ಕೆಳಕಾಣಿಸಿದ ರೀತ್ಯಾ ಸಮಿತಿ ಸಭೆಗಳನ್ನು ನಡೆಸಲು ಮಾನ್ಯ ಸಭಾಧ್ಯಕ್ಷರು ಆದೇಶಿಸಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಸಭೆಯ ದಿನದಂದು ಸಾರ್ವತ್ರಿಕ ರಜಾ ದಿನಗಳು ಬಂದಲ್ಲಿ, ಮುಂದಿನ ನಿಗದಿಗೊಳಿಸಿದ ದಿನದಂದೇ ಸಭೆಯನ್ನು ನಡೆಸಬೇಕೆಂದು ಮಾನ್ಯ ಸಭಾಧ್ಯಕ್ಷರು ಸೂಚಿಸಿರುತ್ತಾರೆ.

| ಕ್ರ. ಸಂ. | ವಾರ | ಸಮಿತಿಗಳ ಹೆಸರು | ಸಭೆಯ ಸ್ಥಳ/ಕೊಠಡಿ |
|---|---|---|---|
| 1. | ಮಂಗಳವಾರ | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ–106 |
| 2. | ಬುಧವಾರ | ಸಾರ್ವಜನಿಕ ಉದ್ದಿಮೆಗಳ ಸಮಿತಿ | ವಿಕಾಸಸೌಧದ ಮೂರನೇ ಮಹಡಿಯ ಕೊಠಡಿ ಸಂಖ್ಯೆ–318 |
| | | ಅಧೀನ ಶಾಸನ ರಚನಾ ಸಮಿತಿ | ವಿಧಾನಸಭೆಯ ಪೂರ್ವಮೊಗಸಾಲೆ |
| | | ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | ಶಾಸಕರ ಭವನ–5ರ ಎರಡನೇ ಮಹಡಿಯ ಸಮ್ಮೇಳನ ಸಭಾಂಗಣ |
| | | ಸರ್ಕಾರಿ ಭರವಸೆಗಳ ಸಮಿತಿ | ಶಾಸಕರ ಭವನ–5ರ ಮೊದಲನೇ ಮಹಡಿಯ ಸಮ್ಮೇಳನ ಸಭಾಂಗಣ |
| | | ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ–106 |
| 3. | ಗುರುವಾರ | ಹಕ್ಕುಬಾಧ್ಯತೆಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ–106 |
| | | ಅರ್ಜಿಗಳ ಸಮಿತಿ | ವಿಧಾನಸಭೆಯ ಪೂರ್ವಮೊಗಸಾಲೆ |
| | | ವಸತಿ ಸೌಕರ್ಯಗಳ ಸಮಿತಿ | ವಿಧಾನಸಭೆಯ ಪೂರ್ವಮೊಗಸಾಲೆ |

| | | | |
|---|---|---|---|
| 4. | ಶುಕ್ರವಾರ | ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ | ವಿಧಾನಸಭೆಯ ಪೂರ್ವಮೊಗಸಾಲೆ |
| | | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | ವಿಕಾಸಸೌಧದ ಮೂರನೇ ಮಹಡಿಯ ಕೊಠಡಿ ಸಂಖ್ಯೆ–318 |
| | | ಅಂದಾಜುಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ–106 |
| | | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ | ಶಾಸಕರ ಭವನ–5ರ ಮೊದಲನೇ ಮಹಡಿಯ ಸಮ್ಮೇಳನ ಸಭಾಂಗಣ |

ಸಮಿತಿ ಸಭೆಗಳನ್ನು ನಿಗದಿಪಡಿಸಿದ ದಿನದಂದು ನಡೆಸಲು ಸಮಿತಿಗಳ ಅಧ್ಯಕ್ಷರು ಸಹಕರಿಸಬೇಕೆಂದು ಕೋರಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.

# 14. ಜಂಟಿ ಪರಿಶೀಲನಾ ಸಮಿತಿಯ ಅವಧಿಯನ್ನು ಮುಂದುವರಿಸುವ ಬಗ್ಗೆ

## ಕರ್ನಾಟಕ ವಿಧಾನಸಭೆ

**ಹದಿನಾರನೇ ವಿಧಾನಸಭೆ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶನಿವಾರ, ದಿನಾಂಕ: 30ನೇ ನವೆಂಬರ್, 2024.**

**ಸಂಖ್ಯೆ :125**

2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ ವರದಿಯನ್ನು ನೀಡಲು ರಚಿಸಲಾಗಿರುವ ಕರ್ನಾಟಕ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ಅವಧಿಯನ್ನು ಇನ್ನೂ ಮೂರು ತಿಂಗಳು ಅಂದರೆ, ದಿನಾಂಕ:21.02.2025ರವರೆಗೆ ವಿಸ್ತರಿಸಿ ಸನ್ಮಾನ್ಯ ಸಭಾಧ್ಯಕ್ಷರು ಕಾಲಾವಕಾಶವನ್ನು ನೀಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ

# 15. ವಿಧಾನಸಭೆಯ ಸದಸ್ಯರುಗಳ ನಾಮನಿರ್ದೇಶನ ಮಾಡಿರುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ: 05ನೇ ಡಿಸೆಂಬರ್, 2024**

**ಸಂಖ್ಯೆ:126**

ಮಾನ್ಯ ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ವಿಧಾನಸಭೆಯ ಅಧ್ಯಕ್ಷತೆಯನ್ನು (Panel of Chairmen) ವಹಿಸಿಕೊಳ್ಳಲು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 9ರ ಮೇರೆಗೆ ಮಾನ್ಯ ಸಭಾಧ್ಯಕ್ಷರು ಈ ಕೆಳಕಂಡ ವಿಧಾನಸಭಾ ಸದಸ್ಯರುಗಳನ್ನು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಶ್ರೀಯುತರುಗಳಾದ :**

1. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
2. ಕೌಜಲಗಿ ಮಹಾಂತೇಶ್ ಶಿವಾನಂದ್
3. ಕೆ.ಎಂ. ಶಿವಲಿಂಗೇಗೌಡ
4. ಟಿ. ರಘುಮೂರ್ತಿ
5. ಆರಗ ಜ್ಞಾನೇಂದ್ರ
6. ಜಿ.ಟಿ ದೇವೇಗೌಡ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ

# 16. ವಿವಿಧ ಸಮಿತಿಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 31ನೇ ಡಿಸೆಂಬರ್, 2024.**

**ಸಂಖ್ಯೆ :130**

ವಿಧಾನಸಭೆಯ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸಮಿತಿಗಳಿಗೆ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

| ಕ್ರ. ಸಂ. | ಸದಸ್ಯರ ಹೆಸರು/ ಶ್ರೀಯುತರುಗಳಾದ | ನಾಮನಿರ್ದೇಶನ ಮಾಡಲಾಗಿರುವ ಸಮಿತಿ |
|---|---|---|
| 1. | ಸಿ.ಪಿ.ಯೋಗೇಶ್ವರ | ವಸತಿ ಸೌಕರ್ಯಗಳ ಸಮಿತಿ |
| 2. | ಪಠಾಣ ಯಾಸೀರ್ ಅಹಮ್ಮದ್ ಖಾನ್ | ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಮಿತಿ |
| 3. | ಶ್ರೀಮತಿ ಈ.ಅನ್ನಪೂರ್ಣ | ಸರ್ಕಾರಿ ಭರವಸೆಗಳ ಸಮಿತಿ |

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ

# ಭಾಗ–3

# ಸಂಸತ್ ಸುದ್ದಿಗಳು

## 1. ರಾಷ್ಟ್ರಲಾಂಛನ, ರಾಷ್ಟ್ರಪತಿ, ಪ್ರಧಾನಮಂತ್ರಿ ಚಿತ್ರ ದುರ್ಬಳಕೆಗೆ ರೂ.5ಲಕ್ಷ ದಂಡ, ಜೈಲು

ರಾಷ್ಟ್ರಲಾಂಛನ, ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಅವರ ಫೋಟೋಗಳ ದುರ್ಬಳಕೆ ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಅಪರಾಧಿಗಳಿಗೆ ರೂ.5/– ಲಕ್ಷವರೆಗೆ ದಂಡ ಹಾಗೂ ಜೈಲು ಶಿಕ್ಷೆ ಹೆಚ್ಚಿಸುವ ಬಗ್ಗೆ ಚಿಂತನೆ ನಡೆಸಿದೆ. ಇದಕ್ಕಾಗಿ ಅಸ್ತಿತ್ವದಲ್ಲಿರುವ ಈ ಕುರಿತಾದ 2 ಕಾನೂನುಗಳನ್ನು ವಿಲೀನಗೊಳಿಸಿ ಒಂದೇ ಇಲಾಖೆಯ ವ್ಯಾಪ್ತಿಗೆ ಬರುವಂತೆ ಮಾಡಲು ಯೋಜಿಸಿದೆ ಎಂದೂ ಮೂಲಗಳು ತಿಳಿಸಿವೆ.

ಪ್ರಸಕ್ತ ಕೇಂದ್ರ ಗೃಹ ಸಚಿವಾಲಯದ ವ್ಯಾಪ್ತಿಯಲ್ಲಿ ರಾಷ್ಟ್ರಲಾಂಛನ (ದುರ್ಬಳಕೆ ತಡೆ) ಕಾಯ್ದೆ–2005 ಇದ್ದರೆ, ಲಾಂಛನ ಹಾಗೂ ಹಾಗೂ ಹೆಸರುಗಳು (ದುರ್ಬಳಕೆ ತಡೆ) ಕಾಯ್ದೆ–1950 ಅನ್ನು ಗ್ರಾಹಕ ವ್ಯವಹಾರಗಳ ಸಚಿವಾಲಯ ನಿರ್ವಹಿಸುತ್ತಿದೆ. ಈ ಕಾನೂನುಗಳನ್ನು ಉಲ್ಲಂಘಿಸಿದರೆ ಬರೀ ರೂ.500/– ದಂಡ ವಿಧಿಸಲಾಗುತ್ತಿದೆ. ಇದು ಪರಿಣಾಮಕಾರಿಯಲ್ಲದ ಕಾರಣ ಎರಡೂ ಕಾನೂನುಗಳನ್ನು ವಿಲೀನಗೊಳಿಸುವ ಸಲಹೆಯನ್ನು ಇತ್ತೀಚೆಗೆ ನಡೆದ ಸಚಿವ ಸಂಪುಟದ ಆಂತರಿಕ ಸಭೆಯಲ್ಲಿ ನೀಡಲಾಗಿತ್ತು. ಇದನ್ನು ಸರ್ಕಾರ ಪರಿಗಣಿಸಿದ್ದು, ಶೀಘ್ರವೇ ಈ ಬಗ್ಗೆ ಅಂತಿಮ ನಿರ್ಣಯ ಹೊರಡಿಸಿ ತಿದ್ದುಪಡಿ ತರಲಿದೆ ಎಂದು ಮೂಲಗಳು ಹೇಳಿವೆ.

ಪ್ರಸಕ್ತ ಕಾನೂನು ಉಲ್ಲಂಘನೆಗೆ 2 ವರ್ಷ ಶಿಕ್ಷೆ, ರೂ. 5000/–ಗಳವರೆಗೆ ದಂಡ ವಿಧಿಸಬೇಕೆಂಬ ನಿಯಮವನ್ನು ರಾಷ್ಟ್ರ ಲಾಂಛನ ಹಾಗೂ ಹೆಸರುಗಳ (ದುರ್ಬಳಕೆ ತಡೆ) ಕಾಯ್ದೆ–1950ಕ್ಕೆ ತಿದ್ದುಪಡಿ ತಂದು ಅಪರಾಧಿಗಳಿಗೆ ರೂ.1ಲಕ್ಷ ದಂಡ, ಅಪರಾಧ ಪುನರಾವರ್ತನೆ ಆದರೆ ರೂ.5 ಲಕ್ಷ ದಂಡ ಹಾಗೂ 6 ತಿಂಗಳ ಜೈಲು ಶಿಕ್ಷೆ ವಿಧಿಸಬೇಕು ಎಂದು ಪ್ರಸ್ತಾವನೆ ಸಲ್ಲಿಸಿತ್ತು. ಈಗ ಈ ಸಲಹೆಗಳನ್ನು ಆಧರಿಸಿಯೇ ಸೂಕ್ತ ತಿದ್ದುಪಡಿ ತರುವ ಸಾಧ್ಯತೆಗಳಿವೆ ಎನ್ನಲಾಗಿದೆ.

**ಆಧಾರ:**ಉದಯವಾಣಿ, ದಿನಾಂಕ:25.10.2024

## 2. Waqf Bill JPC to seek extension till Budget Session

With BJP members of a Joint Parliamentary Committee scrutinising the Waqf Amendment bill joining the extension chorus, the panel will request Lok Sabha Speaker **Om Birla** to extend its tenure until the Budget Session, 2025.

The panel was scheduled to submit its report by the first week of the ongoing session of Parliament. This paper was the first to report on November 10 that the Modi government, under pressure from allies Telugu Desham party (TDP) and JD(U), may buy more time to table the revised Waqf Bill in Parliament and that the panel may seek more time to submit the report.

Amid Opposition protests, BJP members Nishikant Dubey and Aparajita Sarangi urger panel chairman Jagadambika Pal to request the Speaker to postpone the submission of the committee report until the Budget Session.

This came after the Opposition members boycotted the meeting saying the chairman was keen to close proceedings by the November 29 deadline in a hurry.

Later speaking to the media, Pal said, Nishikant Dubey and others said since we have to invite and hear some other stakeholders and state officials, we need an extension. I will consider this and then we will bring a resolution before Lok Sabha

Earlier, Congress MP Gaurav Gogoi, DMK's A Raji, AAP's Sanjay Singh and TMC's Kalyan Banerjee said the panel chairman was keen to wrap up the proceedings by the November 29 deadline without following due process. "The Speaker had indicated the committee could be given an extension, but it appeared that some "big ministers" was

directing Pal's actions," alleged Gogoi. Sanjay Singh said the panel hasn't heard the goverments of Delhi, J&K, Punjab and Uttar Pradesh. States that have maximum Waqf property weren't called, including Delhi. Seven people died in sambhal for Waqf property. They are not taking things seriously, said Kalyan Banerjee.

**Courtesty:**Indian Express, Dated:28.11.2024

## 3. ಒಂದೇ ಎಲೆಕ್ಷನ್‌ಗೆ ಕೇಂದ್ರದ ಹೆಜ್ಜೆ

ದೇಶದಲ್ಲಿ **'ಒಂದು ದೇಶ–ಒಂದು ಚುನಾವಣೆ'** ನೀತಿ ಜಾರಿಗೆ ತರಲು ರೂಪಿಸಲಾದ ಎರಡು ಪ್ರಮುಖ ವಿಧೇಯಕಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಸಂಸತ್ ಭವನದಲ್ಲಿ ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯು ಎರಡು ತಿದ್ದುಪಡಿ ವಿಧೇಯಕಗಳಿಗೆ ಸಮ್ಮತಿ ನೀಡಿದೆ. ಪ್ರಸಕ್ತ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲೇ ವಿಧೇಯಕ ಮಂಡಿಸಲು ಸರ್ಕಾರ ಉದ್ದೇಶಿಸಿದೆ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಅವಧಿ ವಿಸ್ತರಣೆ ಮತ್ತು ವಿಸರ್ಜನೆ, ಲೋಕಸಭೆ ಹಾಗೂ ವಿಧಾನಸಭೆಗಳ ಅವಧಿ ಜೋಡಿಸುವ ತಿದ್ದುಪಡಿ ವಿಧೇಯಕ ಹಾಗೂ ಜನಗಣತಿ ಬಳಿಕ ರಾಜ್ಯವಾರು ಲೋಕಸಭಾ ಕ್ಷೇತ್ರಗಳ ಹಂಚಿಕೆ ವಿಧೇಯಕಗಳನ್ನು ದಿನಾಂಕ:12.12.2024ರಂದು ನಡೆದ ಸಂಪುಟ ಸಭೆ ಅಂಗೀಕರಿಸಿದೆ.

ಎರಡು ಹಂತದಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸಲು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಸಮಿತಿ ಶಿಫಾರಸ್ಸು ಮಾಡಿದೆ. ಮೊದಲಿಗೆ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆ ನಡೆಸಬೇಕು. ಸಾರ್ವತ್ರಿಕ ಚುನಾವಣೆಯಾದ ನೂರು ದಿನದೊಳಗೆ ಸ್ಥಳೀಯ ಸಂಸ್ಥೆಗಳಿಗೆ (ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ) ಚುನಾವಣೆ ನಡೆಸಬೇಕು ಎಂದು ಶಿಫಾರಸು ಮಾಡಿದೆ. ಏಕಕಾಲಕ್ಕೆ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆ ನಡೆಸುವ ಕುರಿತ ವಿಧೇಯಕ ಸಂಸತ್‌ನಲ್ಲಿ ಅಂಗೀಕಾರಗೊಳ್ಳಬೇಕು. ಇದಕ್ಕೆ ರಾಜ್ಯಗಳ ಸಮ್ಮತಿ ಅಗತ್ಯವಿಲ್ಲ. ಆದರೆ, ಸ್ಥಳೀಯ ಸಂಸ್ಥೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ವಿಧೇಯಕಕ್ಕೆ ಸಂಸತ್ ಅಂಗೀಕಾರದ ಬಳಿಕ ಶೇ. 50ರಷ್ಟು ರಾಜ್ಯಗಳ ಒಪ್ಪಿಗೆ ಬೇಕಿದೆ.

ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ದೇಶಾದ್ಯಂತ ಲೋಕಸಭೆ ಹಾಗೂ ವಿಧಾನಸಭೆ, ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಕೆಲವೊಂದು ಸಾಂವಿಧಾನಿಕ ತಿದ್ದುಪಡಿ ಸೇರಿ 10 ಅಂಶಗಳ ಶಿಫಾರಸು ಮಾಡಿದೆ. ಸಮಿತಿ ಶಿಫಾರಸ್ಸು ಮಾಡಿದ ಒಂದು ದೇಶ–ಒಂದು ಚುನಾವಣೆ ಪ್ರಸ್ತಾವಕ್ಕೆ ಸೆಪ್ಟೆಂಬರ್–2024ರಲ್ಲಿ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:13.12.2024

## 4. ಕೇಂದ್ರ ಸಚಿವ ರಿಜಿಜು ವಿರುದ್ಧ ಹಕ್ಕುಚ್ಯುತಿ ನಿಲುವಳಿ ಮಂಡನೆ

ಪ್ರತಿಪಕ್ಷನಾಯಕರ ವಿರುದ್ಧ ಅಸಂಸದೀಯ ಪದ ಬಳಸಿ ನಿಂದಿಸಿದ್ದಾರೆ ಎಂದು ಆರೋಪಿಸಿ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿರುದ್ಧ ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಕ್ಕುಚ್ಯುತಿ ನಿಲುವಳಿ ಮಂಡಿಸಿದೆ.

ರಾಜ್ಯಸಭೆ ಸಭಾಪತಿ ಜಗದೀಪ್ ಧನ್‌ಕರ್ ಪದಚ್ಯುತಿಗೆ ಅವಿಶ್ವಾಸ ನಿರ್ಣಯ ಮಂಡಿಸಿದ ಮರು ದಿನವೇ ಸಚಿವರ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡಿಸಲಾಗಿದೆ.

ಸದನದಲ್ಲಿ ಟಿಎಂಸಿ ಉಪನಾಯಕ ಸಾಗರಿಕಾ ಘೋಷ್ ಅವರು ಸಚಿವ ರಿಜಿಜು ವಿರುದ್ಧ ಹಕ್ಕುಚ್ಯುತಿ ನಿಲುವಳಿ ಮಂಡಿಸಿದರು. ನೊಟೀಸ್‌ಗೆ ಪ್ರತಿಪಕ್ಷಗಳ 60 ಸಂಸದರು ಸಹಿ ಮಾಡಿದ್ದಾರೆ.

ಸಂಸದೀಯ ವ್ಯವಹಾರಗಳ ಸಚಿವರು ಸುಗಮ ಕಲಾಪ ನಡೆಸುವತ್ತ ಗಮನಕೊಡಬೇಕು. ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕರ್ತವ್ಯ ನಿರ್ವಹಣೆ ಮಾಡಬೇಕು. ಆದರೆ, ಸಚಿವರು ಪ್ರತಿಪಕ್ಷ ನಾಯಕರನ್ನು ಪದೇಪದೇ ಕೆಣಕುತ್ತಾರೆ. ಅಸಂಸದೀಯ ಪದ ಬಳಸಿ ಟೀಕಿಸುತ್ತಿದ್ದಾರೆ. ಅಧಿಕಾರ ದುರಪಯೋಗಪಡಿಸಿಕೊಂಡು ಅವಮಾನಿಸಿದ್ದಾರೆ ಎಂದು ಘೋಷ್ ದೂರಿದ್ದಾರೆ.

ರಾಜ್ಯಸಭೆ ಸಭಾಪತಿ ವಿರುದ್ಧ ಮಂಡಿಸಿದ ಅವಿಶ್ವಾಸ ನಿರ್ಣಯದ ಕುರಿತು ಸದನದಲ್ಲಿ ಮಾತನಾಡಿದ್ದ ಸಚಿವ ರಿಜಿಜು, ಅಧಿವೇಶನದಲ್ಲಿ ಪ್ರತಿಪಕ್ಷಗಳು ಅನಗತ್ಯವಾಗಿ ಗದ್ದಲ ಉಂಟು ಮಾಡುತ್ತಿವೆ. ಸಂವಿಧಾನಕ್ಕೆ ವಿರುದ್ಧವಾಗಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿವೆ. ರಾಜ್ಯಸಭೆ ಅಧ್ಯಕ್ಷರಿಗೆ ಗೌರವ ಕೊಡದ ನಾಯಕರು ಸದನದಲ್ಲಿರಲು ಅರ್ಹರಲ್ಲ ಎಂದು ಟೀಕಿಸಿದ್ದರು.

ರಾಜ್ಯಸಭೆ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡಿಸಿದ ವಿಷಯವಾಗಿ ಮೇಲ್ಮನೆಯಲ್ಲಿ ಆಡಳಿತ–ಪ್ರತಿಪಕ್ಷಗಳ ನಡುವೆ ಗದ್ದಲ ಕೋಲಾಹಲ ಮುಂದುವರಿಯಿತು. ಸದನದ ಹೊರಗೆ ಸಾಂವಿಧಾನಿಕ ಹುದ್ದೆಯಲ್ಲಿರುವ ಸಭಾಪತಿಗಳನ್ನು ಟೀಕಿಸಿದ ಪ್ರತಿಪಕ್ಷ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಸಭಾನಾಯಕ ಹಾಗೂ ಸಚಿವ ಜೆ.ಪಿ.ನಡ್ಡಾ ಅವರು ಉಪರಾಷ್ಟ್ರಪತಿಯವರನ್ನು ತೆಗಳಿದ ಪ್ರತಿಪಕ್ಷಗಳ ವಿರುದ್ಧ ನಿಂದನಾ ನಿರ್ಣಯ ಮಂಡಿಸಿದರು. ಈ ವೇಳೆ ಆಡಳಿತ ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆಯಿತು. ಕಲಾಪ ಮುಂದೂಡಿಕೆಯಾಗಿ ಎರಡು ಬಾರಿ ಪುನ: ಸದನ ಸೇರಿದಾಗಲೂ ಗದ್ದಲ ಕಡಿಮೆಯಾಗದ ಹಿನ್ನೆಲೆ ಸಭಾಪತಿ ಧನ್‌ಕರ್ ಅವರು ಕಲಾಪವನ್ನು ಮುಂದೂಡಿದರು. ಮತ್ತೊಂದೆಡೆ ಕೆಳಮನೆ ಲೋಕಸಭೆಯಲ್ಲಿ ಸುಗಮ ಕಲಾಪ ನಡೆಯಿತು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:13.12.2024

## 5. ರಾಜ್ಯಸಭಾ ಸಭಾಪತಿ ಪದಚ್ಯುತಿ ಸಾಧ್ಯವೇ

ರಾಜ್ಯಸಭೆಯ 72 ವರ್ಷಗಳ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಪ್ರತಿಪಕ್ಷಗಳು ಮುಂದಾಗಿವೆ. ಸಭಾಪತಿ ಸರ್ಕಾರದ ವಕ್ತಾರರಂತೆ ವರ್ತಿಸುತ್ತಿದ್ದು, ಪ್ರತಿಪಕ್ಷಗಳಿಗೆ ಮಾತನಾಡಲು ಅವಕಾಶವೇ ನೀಡುವುದಿಲ್ಲ ಎಂಬುದು ಅವುಗಳ ಆರೋಪ. ಈ ಹಿನ್ನಲೆಯಲ್ಲಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಪ್ರಕ್ರಿಯೆ ಹೇಗೆ, ಸಂವಿಧಾನದಲ್ಲಿರುವ ಅವಕಾಶವೇನು, ನಿರ್ಣಯ ಗೆದ್ದರೆ ಏನಾಗುತ್ತದೆ. ಲೋಕಸಭೆ ಸ್ಪೀಕರ್ ವಿರುದ್ಧ ಅವಿಶ್ವಾಸದ ನಿದರ್ಶನಗಳಿವೆ.

- ಲೋಕಸಭೆಯಲ್ಲಿ ಕೂಡ ಸ್ಪೀಕರ್ ವಿರುದ್ಧ 3 ಬಾರಿ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡನೆಯಾಗಿದ್ದವು. 1954 ಡಿಸೆಂಬರ್ 18 ರಂದು ಮೊದಲ ಸ್ಪೀಕರ್ ಜಿ.ವಿ.ಮಾವಲಂಕರ್ ವಿರುದ್ಧ ಬಿಹಾರದ ಸಂಸದ ವಿಘ್ನೇಶ್ವರ್ ಮಿಸಿರ್ ಅವಿಶ್ವಾಸ ನಿರ್ಣಯ ಮಂಡಿಸಿದ್ದರು. 2 ಗಂಟೆಗಳ ಚರ್ಚೆಗಳ ಬಳಿಕ ಅದು ತಿರಸ್ಕೃತಗೊಂಡಿತ್ತು.

- 1966 ನವೆಂಬರ್ 24ರಂದು ಸ್ಪೀಕರ್ ಆಗಿದ್ದ ಸರ್ದಾರ್ ಹುಕುಂ ಸಿಂಗ್ ವಿರುದ್ಧ ಸಮಾಜವಾದಿ ನಾಯಕ ಮಧುಲಿಮಯೆ ಅವಿಶ್ವಾಸ ನಿರ್ಣಯ ಮಂಡಿಸಿದ್ದರು. ಅದಕ್ಕೆ 50ಕ್ಕಿಂತ ಕಡಿಮೆ ಸಂಸದರು ಅನುಮೋದನೆ ನೀಡಿದ್ದರಿಂದ ಚರ್ಚೆಗೆ ಪರಿಗಣನೆಯಾಗಿರಲಿಲ್ಲ.

- 1987 ಏಪ್ರಿಲ್ 15ರಂದು ಬಲರಾಂ ಜಾಖಡ್ ಅವರನ್ನು ಸ್ಪೀಕರ್ ಹುದ್ದೆಯಿಂದ ತೆಗೆಯಲು ಸಿಪಿಎಂ ಸಂಸದ ಸೋಮನಾಥ ಚಟರ್ಜಿ ನಿರ್ಣಯ ಮಂಡಿಸಿದ್ದರು. ಅದು ತಿರಸ್ಕೃತವಾಗಿತ್ತು.

**ಅವಿಶ್ವಾಸ ನಿರ್ಣಯ ಮಂಡನೆ ಹೇಗೆ**

ಸಂವಿಧಾನದ 67(ಬಿ)ವಿಧಿಯ ಅನ್ವಯ ರಾಜ್ಯಸಭೆಯಲ್ಲಿ ಸಭಾಪತಿ ವಿರುದ್ಧ ನಿರ್ಣಯ ಮಂಡಿಸಿ ಅದನ್ನು ಸರಳ ಬಹುಮತದಿಂದ ಅಂಗೀಕರಿಸಬೇಕು. ಅದಕ್ಕಾಗಿ 14 ದಿನಗಳ ಮೊದಲು ನೋಟಿಸ್ ನೀಡಬೇಕಾಗುತ್ತದೆ. ಡಿಸೆಂಬರ್, 10 ರಂದು ಕಾಂಗ್ರೆಸ್ ನೇತೃತ್ವದ ವಿಪಕ್ಷಗಳು ಮಾಡಿದ್ದೂ ಅದನ್ನೇ, ಧನ್‌ಕರ್ ಅವರನ್ನು ಹುದ್ದೆಯಿಂದ ತೆಗೆಯುವ ನಿಟ್ಟಿನಲ್ಲಿ ವಿಪಕ್ಷಗಳು ರಾಜ್ಯಸಭೆ ಸೆಕ್ರೆಟರಿ ಜನರಲ್ ಪಿ.ಸಿ.ಮೋದಿ ಅವರಿಗೆ ಸಲ್ಲಿಸಿವೆ. ಆ ನೋಟಿಸ್ ಅನ್ನು ರಾಜ್ಯಸಭೆಯ ಉಪಸಭಾಪತಿ ಅನುಮೋದಿಸಬೇಕು. 14 ದಿನಗಳ ಅವಧಿಯ ಬಳಿಕ ಈ ಬಗ್ಗೆ ನಿರ್ಣಯ ಮಂಡಿಸಬೇಕು. ಅದಕ್ಕೆ ಕನಿಷ್ಠ 50 ಮಂದಿ ಸಂಸದರು ಸಹಿ ಹಾಕಬೇಕು. ವಿಪಕ್ಷಗಳೇ ಹೇಳಿಕೊಂಡಿರುವಂತೆ ನೋಟಿಸ್‌ಗೆ 70 ಮಂದಿ ಸಂಸದರು ಸಹಿ ಹಾಕಿದ್ದಾರೆ. ನಿಗದಿತ 14 ದಿನಗಳು ಕಳೆದ ಬಳಿಕ ಮೇಲ್ಮನೆಯಲ್ಲಿ ನಿರ್ಣಯ ಮಂಡಿಸಬೇಕು. ಅದರ ಬಗ್ಗೆ ಸದನದಲ್ಲಿ ಸದಸ್ಯರು ಹಾಜರಿದ್ದು ಮತದಾನ ಮಾಡಬೇಕು. ನಿರ್ಣಯ ಅಂಗೀಕಾರಗೊಂಡರೆ ಮೇಲ್ಮನೆಯಲ್ಲಿ ಕೆಲಸ ಮುಗಿದಂತೆ, ನಂತರ ಗೊತ್ತುವಳಿಯನ್ನು ಲೋಕಸಭೆಗೆ ಕಳುಹಿಸಲಾಗುತ್ತದೆ. ಅಲ್ಲಿ ಅಂಗೀಕಾರಗೊಂಡರೆ ಉಪರಾಷ್ಟ್ರಪತಿಯ ಹುದ್ದೆಯನ್ನೂ ಹೊಂದಿರುವ ರಾಜ್ಯಸಭೆ ಸಭಾಪತಿಯವರನ್ನು ಹುದ್ದೆಯಿಂದ ಕೆಳಗೆ ಇಳಿಸಲಾಗುತ್ತದೆ.

ಗೊತ್ತುವಳಿ ಮಂಡನೆಗೆ ಅವಕಾಶ ಸಿಕ್ಕಿ ಅದರ ಮೇಲೆ ಚರ್ಚೆ ನಡೆಯುವ ಸಂದರ್ಭದಲ್ಲಿ ರಾಜ್ಯಸಭೆ ಸಭಾಪತಿ ಅದರ ನೇತೃತ್ವ ವಹಿಸುವಂತಿಲ್ಲ. ಈ ಬಗ್ಗೆ ಸಂವಿಧಾನದ 92ನೇ ವಿಧಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ತಮ್ಮ ವಿರುದ್ಧದ ಆರೋಪಗಳ ಬಗ್ಗೆ ಪ್ರತಿಕ್ರಿಯೆ ನೀಡಲು ಅವಕಾಶ ಮಾತ್ರ ಇದೆ. ನಿರ್ಣಯದ ಪರ ಅಥವಾ ವಿರೋಧ ಮತಹಾಕುವಂತಿಲ್ಲ.

ಗಮನಾರ್ಹ ಅಂಶವೆಂದರೆ ವಿಪಕ್ಷಗಳಿಗೆ 14 ದಿನಗಳು ಸಿಗುವುದೇ ಇಲ್ಲ. ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಬಗ್ಗೆ ಡಿಸೆಂಬರ್ 10 ರಂದು ನೋಟೀಸ್ ನೀಡಿದ್ದವು. 14 ದಿನಗಳು ಕಳೆದ ಬಳಿಕ ಎಂದರೆ ಡಿಸೆಂಬರ್ 23ರಂದು ನಿರ್ಣಯ ಮಂಡಿಸಬೇಕಾಗುತ್ತದೆ. ಆದರೆ ಡಿಸೆಂಬರ್ 20ರಂದೆ ಚಳಿಗಾಲದ ಅಧಿವೇಶನ ಮುಕ್ತಾಯವಾಗುತ್ತದೆ. ಲೋಕಸಭೆಯ ನಿವೃತ್ತ ಸೆಕ್ರೆಟರಿ ಜನರಲ್ ಪಿ.ಡಿ.ಟಿ.ಆಚಾರಿಯವರು ಹೇಳುವಂತೆ ಹಾಲಿ ಅಧಿವೇಶನದಲ್ಲಿ ಧನ್‌ಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ವಿಪಕ್ಷಗಳಿಗೆ ಸಾಧ್ಯವಾಗದಿದ್ದರೂ, ನಿರ್ಣಯ ಬಿದ್ದು ಹೋಗದೆ ಊರ್ಜಿತದಲ್ಲಿಯೇ ಇರುತ್ತದೆ.

ಬಹಳ ಸ್ಪಷ್ಟವಾಗಿ ಹೇಳಬೇಕೆಂದರೆ ಇಲ್ಲವೇ ಇಲ್ಲ ರಾಜ್ಯ ಸಭೆಯ ಒಟ್ಟು ಸದಸ್ಯ ಬಲ 245. ಈ ಪೈಕಿ ಸರ್ಕಾರದ ಪರವಾಗಿ 119 ಮಂದಿ ಇದ್ದಾರೆ. ಇಂಡಿಯಾ ಒಕ್ಕೂಟದ ಪರವಾಗಿ 85 ಮಂದಿ ಸಂಸದರು ಇದ್ದಾರೆ. ಎನ್‌ಡಿಎ ಮತ್ತು ಇಂಡಿಯಾ ಒಕ್ಕೂಟಕ್ಕೆ ಸೇರದ 27 ಮಂದಿ ಸಂಸದರು ಮೇಲ್ಮನೆಯಲ್ಲಿ ಇದ್ದಾರೆ. ನಿರ್ಣಯ ಅಂಗೀಕಾರಗೊಳ್ಳಬೇಕಾದರೆ 116ಮಂದಿ ಸಂಸದರ ಬೆಂಬಲಬೇಕು. ಬಿಜೆಪಿ ನೇತೃತ್ವದ ಎನ್‌ಡಿಎ ಬಳಿಕ 119 ಮಂದಿ ಸಂಸದರ ಬಲ ಇದೆ. ಇನ್ನೂ ಎನ್‌ಡಿಎ, ಇಂಡಿಯಾ ಒಕ್ಕೂಟದ ಜತೆಗೆ ಗುರುತಿಸಿಕೊಳ್ಳದ ಪಕ್ಷಗಳಾಗಿರುವ ವೈ.ಎಸ್.ಆರ್. ಸಿ.ಪಿ., ಬಿಜೆಡಿ, ಬಿ.ಆರ್.ಎಸ್ ಸಂಸದರು ಇಂಡಿಯಾ ಒಕ್ಕೂಟಕ್ಕೆ ಬೆಂಬಲ ನೀಡುವ ಖಾತರಿ ನೀಡಿಲ್ಲ.

ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡಿಸಿದರೆ ಅದು ಅಂಗೀಕಾರವಾಗದು ಎಂಬ ತಿಳುವಳಿಕೆ ಇಂಡಿಯಾ ಒಕ್ಕೂಟಕ್ಕೂ ಇದೆ. ಆ ಒಕ್ಕೂಟದ ಮುಖಂಡರೇ ಹೇಳಿಕೊಂಡಿರುವಂತೆ ಸಭಾಪತಿ ಜನದೀಪ್ ಧನ್‌ಕರ್ ಕಲಾಪ ನಡೆಸುವ ರೀತಿಯ ವಿರುದ್ಧ ಪ್ರತಿಭಟನೆ ದಾಖಲು ಮಾಡುವ ನಿಟ್ಟಿನಲ್ಲಿ ಮಾತ್ರ ನೋಟಿಸ್ ನೀಡಲಾಗಿದೆ.

ಸಭಾಪತಿ ವಿರುದ್ಧ ಇಂಡಿಯಾ ಒಕ್ಕೂಟದ ಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸುವ ಬಗ್ಗೆ ನೋಟಿಸ್ ನೀಡಿವೆ. ಆದರೆ, ಎಲ್ಲ ಪಕ್ಷ ವಿಪಕ್ಷಗಳೂ ಅದಕ್ಕೆ ಸಹಮತ ವ್ಯಕ್ತಪಡಿಸಿಲ್ಲ. ಎನ್‌ಡಿಎ ಮತ್ತು ಇಂಡಿಯಾ ಒಕ್ಕೂಟದಲ್ಲಿಯೂ ಗುರುತಿಸಿಕೊಳ್ಳದ ಆಂಧ್ರಪ್ರದೇಶದ ವೈ.ಎಸ್.ಆರ್. ಕಾಂಗ್ರೆಸ್, ತೆಲಂಗಾಣದ ಭಾರತ ರಾಷ್ಟ್ರ ಸಮಿತಿ. ಒಡಿಶಾದ ಬಿಜು ಜನತಾ ದಳ ಮೌನವಾಗಿವೆ.

**ಆಧಾರ:**ಉದಯವಾಣಿ, ದಿನಾಂಕ:15.12.2024

## 6. ಸಂವಿಧಾನ 129ನೇ ತಿದ್ದುಪಡಿ ವಿಧೇಯಕ–2024

ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲೇ **'ಒಂದು ದೇಶ–ಒಂದು ಚುನಾವಣೆ'** ವಿಧೇಯಕವನ್ನು ಮಂಡಿಸಲು ಕೇಂದ್ರದ ಎನ್‌ಡಿಎ ಸರಕಾರ ಸಜ್ಜಾಗಿದೆ. ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು **'ಸಂವಿಧಾನ (129ನೇ ತಿದ್ದುಪಡಿ) ವಿಧೇಯಕ–2024'** ಶೀರ್ಷಿಕೆಯಡಿ ಈ ವಿಧೇಯಕವನ್ನು ಲೋಕಸಭೆಯಲ್ಲಿ ಮಂಡನೆ ಮಾಡಲಿದ್ದಾರೆ. ವಿಧೇಯಕವು ವಿಧಿ 82ಎ (ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು) ಸೇರ್ಪಡೆ ಹಾಗೂ ವಿಧಿ 83 (ಸಂಸತ್ತಿನ ಸದನಗಳ ಕಾಲಾವಧಿ), ವಿಧಿ 327ರ (ಶಾಸನಸಭೆಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ನೀಡಲಾಗುವ ಸಂಸತ್ತಿನ ಅಧಿಕಾರ) ತಿದ್ದುಪಡಿ ಕುರಿತದ್ದಾಗಿದೆ. ವಿಧೇಯಕವೂ ಸಂಸತ್ತಿನ ಎರಡೂ ಸದನಗಳಲ್ಲಿ ಮಂಡನೆಯಾಗಿ ಅಂಗೀಕಾರಗೊಂಡ ಬಳಿಕ ರಾಷ್ಟ್ರಪತಿಗಳ ಅಂಕಿತ ಪಡೆದು, ಸರ್ಕಾರದ ಅಧಿಕೃತ ಗೆಜೆಟ್ ಅಧಿಸೂಚನೆಯೊಂದಿಗೆ ಜಾರಿಗೆ ಬರಲಿದೆ. ಇದರೊಟ್ಟಿಗೇ ಮತ್ತೊಂದು ವಿಧೇಯಕವೂ ಮಂಡನೆಯಾಗಲಿದೆ. ಅದು **'ಕೇಂದ್ರಾಡಳಿತ ಪ್ರದೇಶಗಳ ಕಾಯಿದೆ(ತಿದ್ದುಪಡಿ) ವಿಧೇಯಕ–2024'** ಇದರ ಮೂಲಕ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಕಾಯಿದೆ–1963 ಮತ್ತು ರಾಷ್ಟ್ರ ರಾಜಧಾನಿ ಪ್ರದೇಶವಾದ ದೆಹಲಿ ಸರ್ಕಾರದ ಕಾಯಿದೆ–1991 ಹಾಗೂ ಜಮ್ಮು–ಕಾಶ್ಮೀರ ಮರು ರಚನೆ ಕಾಯಿದೆ–2019ಕ್ಕೆ ತಿದ್ದುಪಡಿಯಾಗಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:15.12.2024

## 7. ಉಪರಾಷ್ಟ್ರಪತಿ ವಿರುದ್ಧದ ದೋಷಾರೋಪಣೆ ಅರ್ಜಿ ವಜಾ

ಉಪರಾಷ್ಟ್ರಪತಿ ಹಾಗೂ ರಾಜ್ಯಸಭೆ ಸಭಾಪತಿ ಜಗದೀಪ್ ಧನ್‌ಕರ್ ವಿರುದ್ಧ ಕಾಂಗ್ರೆಸ್ ಸೇರಿದಂತೆ ಐಎನ್‌ಡಿಐಎ ಮಿತ್ರ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ವಜಾಗೊಳಿಸಲಾಗಿದೆ.

ಉಪರಾಷ್ಟ್ರಪತಿ ವಿರುದ್ಧ ಮಂಡಿಸಲಾದ ಅವಿಶ್ವಾಸ ನಿಲುವಳಿಯು ದೋಷಪೂರಿತವಾಗಿದೆ. ಪ್ರತಿಪಕ್ಷಗಳ ನಡೆ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವ ಪ್ರಯತ್ನದ ಭಾಗವಾಗಿದೆ. ಸಭಾಪತಿಗಳ ಘನತೆ ಹಾಳು ಮಾಡಲು ತರಾತುರಿಯಲ್ಲಿ ನಿಲುವಳಿ ಮಂಡನೆ ಮಾಡಲಾಗಿದೆ ಎಂದು ವಿವರಣೆ ನೀಡಿ ಉಪಸಭಾಪತಿ ಹರಿವಂಶ್ ನಾರಾಯಾಣ್ ಸಿಂಗ್ ಅವರು ವಜಾಗೊಳಿಸಿದ್ದಾರೆ.

ಅವಿಶ್ವಾಸ ನಿರ್ಣಯ ಮಂಡನೆಗೆ ನಿಯಮದಂತೆ 60 ಸಂಸದರ ಸಹಿ ಪಡೆಯಲಾಗಿದೆ. ಆದರೆ, 14 ದಿನಗಳ ಕಡ್ಡಾಯ ಸೂಚನೆಯನ್ನೂ ಪಾಲಿಸಲಾಗಿಲ್ಲ. ಅಲ್ಲದೆ ನಿರ್ಣಯದಲ್ಲಿ ಧನ್‌ಕರ್ ಅವರ ಹೆಸರನ್ನು ತಪ್ಪಾಗಿ ಬರೆಯಲಾಗಿದೆ ಎಂದು ವಜಾಗೊಳಿಸಿರುವುದಕ್ಕೆ ಉಪಸಭಾಪತಿಗಳು ಕಾರಣ ನೀಡಿದ್ದಾರೆ. ಪ್ರತಿಪಕ್ಷಗಳ ವಿಚಾರದಲ್ಲಿ ಸಭಾಪತಿಗಳು ತಾರತಮ್ಯ ಮಾಡುತ್ತಿದ್ದಾರೆ ಆಡಳಿತ ಪಕ್ಷಕ್ಕೆ ಆದ್ಯತೆ ನೀಡಿ ಪ್ರತಿಪಕ್ಷ ಸಂಸದರ ಬಗ್ಗೆ ಮಲತಾಯಿ ಧೋರಣೆ ಅನಸರಿಸುತ್ತಿದ್ದಾರೆ. ಆರೋಪಿಸಿದ್ದ ಕಾಂಗ್ರೆಸ್

ಸೇರಿ ಐಎನ್‌ಡಿಐಎ ಮಿತ್ರ ಪಕ್ಷಗಳು ಜಗದೀಪ್ ಧನ್‌ಕರ್ ವಿರುದ್ಧ ನಿಯಮ 67 (ಬಿ) ಅಡಿಯಲ್ಲಿ ಕಳೆದ ವಾರ ಅವಿಶ್ವಾಸ ನಿರ್ಣಯ ಮಂಡಿಸಿದ್ದವು.

ಪ್ರತಿಪಕ್ಷಗಳು ಮಂಡಿಸಿದ ಅವಿಶ್ವಾಸ ನಿಲುವಳಿ ಬಗ್ಗೆ ರಾಜ್ಯಸಭೆ ಪ್ರಧಾನ ಕಾರ್ಯದರ್ಶಿ ಸದನಕ್ಕೆ ಲಿಖಿತ ವರದಿ ಮಂಡಿಸಿದರು. ಉಪಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಅವರು ನಿಲುವಳಿ ವಜಾಗೊಳಿಸಿ ತೀರ್ಪು ನೀಡಿದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:20.12.2024

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

## 1. Shah's big push for Co-operative sector

Union Home Minister Amit Shah on dated 22.10.2024 said the Modi government was set to establish 2 lakh new Primary Agricultural Credit Societies (PACS), marking a major step to strengthen India's cooperative sector and empower rural communities.

Speaking at the Diamond Jubilee of the National Dairy Development Board (NDDB) and the birth anniversary of Amul founder Tribhuvandas Patel, Shah announced the Modi government's upcoming initiative framework. "**The Government is set to establish 2 lakh new PSCS. This will significantly enhance the strength and reach of all entities within the co-operative sector, further empoering farmers and rural communities**," said Shah.

Out of 8 crore rural families engaged in dairy farming across the country, 6-5 crore remain outsaid the co-operative sector, said the Union Home Minister. As a result, these farmers are unable to receive the full value of their milk production. Shah urged the NDDB to take proactive steps to ensure these farmers are intergrated into the co-operative system, enabling them to secure fair pricing for their produce.

The minister emphasized the need to expand the cooperative sector's reach. "**Currently, only 1.5 crore dairy farmers are part of the co-operative system, Shah noted**." I urge NDDB to work towards bringing to all 8 crore dairy farmers into the co-operative fold so that they can receive fair prices for their produce and prevent exploitation.

The Gandhinagar MP are called that Prime Minister Lal Bahadur Shastri had visited Amul in 1964 and decided that farmers across the country benefit from the idea, concept and the successful experiment, leading to the foundation of NDDB in Anand.

Shah noted that the products of Amul and NDDB are not adulterated because these organisations are owned by farmers.

Shah also paid tributes to Tribhuvandas Patel, lauding his pivotal role in establishing NDDB and empowering India's poor farmers particularly women "Tribhuvandas patel's efforts have laid the foundation for a moverment that continues to uplift our farmers. Shah remarked." Today the cooperative movement has made a remarkable contribution to the empowerment of women farmers across the country, he said.

The Home Minister emphasized the country's dominance in the dairy sector, saying India is now the world's largest milk producer, with an annual production of 231 million tonnes, surpassing even the US. This remarkable growth is projected to continue at an annual rate of 6% significantly higher than the global average of 2%.

Shah recalled the injustice faced by farmers in Anand at the hands of paulson Dairy. "Years ago, paulson Dairy wronged the farmers of Anand prompting Tribhuvandas Patel to take up the issue with Sardar Vallabhbhai Patel, "Shah said" Under Sardar Patel's guidance. Tribhuvandas Patel formed a cooperative, bringing together 2 crore farmers.

**Courtesty:**Indian Express, Dated:23.10.2024

## 2. ಕೇಂದ್ರ ಶಿಕ್ಷಣ ಸಚಿವಾಲಯಕ್ಕೆ ಸಂಸದೆ ಡಾ.ಪ್ರಭಾ ಆಯ್ಕೆ

ಕೇಂದ್ರ ಸರ್ಕಾರವು ಶಿಕ್ಷಣ ಸಚಿವಾಲಯಕ್ಕಾಗಿ ಸಲಹಾ ಸಮಿತಿಯನ್ನು ರಚನೆ ಮಾಡಿದ್ದು, ಈ ಸಮಿತಿಗೆ ಸದಸ್ಯರಾಗಿ ಕರ್ನಾಟಕದಿಂದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು

ನೇಮಿಸಲಾಗಿದೆ. ರಾಜ್ಯದ ಲೋಕಸಭಾ ಸದಸ್ಯರ ಪೈಕಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ನೇಮಕ ಮಾಡಲಾಗಿರುವುದು ವಿಶೇಷ. ಈ ಸಮಿತಿಗೆ ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್, ಶಿಕ್ಷಣ ಸಚಿವಾಲಯದ ರಾಜ್ಯ ಸಚಿವರಾದ ಜಯಂತ್ ಚೌಧರಿ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯದ ರಾಜ್ಯ ಸಚಿವರಾದ ಡಾ.ಸುಕಾಂತ ಮಜುಂದಾರ್ ಅವರುಗಳು ಅಧ್ಯಕ್ಷರಾಗಿದ್ದಾರೆ. ಈ ಸಮಿತಿಯಲ್ಲಿ 8 ಲೋಕಸಭಾ ಸದಸ್ಯರು ಹಾಗೂ ಎಂಟು ರಾಜ್ಯಸಭಾ ಸದಸ್ಯರು ನೇಮಕಗೊಂಡಿದ್ದಾರೆ ಹಾಗೂ ಇಬ್ಬರು ಪದನಿಮಿತ್ತ ಸದಸ್ಯರುಗಳಿದ್ದಾರೆ. ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಆರೋಗ್ಯ ಸಮಿತಿಯ  ಜತೆಯಲ್ಲಿ ಶಿಕ್ಷಣ ಸಮಿತಿಗೂ ಸದಸ್ಯರಾಗಿರುವುದು ವಿಶೇಷವಾಗಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:25.10.2024

## 3. ರಾಜ್ಯೋತ್ಸವಕ್ಕೆ ಕನ್ನಡದಲ್ಲೇ ಪ್ರಧಾನಿ ಮೋದಿ ಶುಭಾಶಯ

'ಕನ್ನಡ ರಾಜ್ಯೋತ್ಸವಕ್ಕೆ ದಿನಾಂಕ:01.11.2024ರಂದು ಪ್ರಧಾನಿ ನರೇಂದ್ರ ಮೋದಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕನ್ನಡದಲ್ಲೇ ಶುಭ ಕೋರಿದ್ದಾರೆ. ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ, ಕನ್ನಡ ರಾಜ್ಯೋತ್ಸವವು ಅತ್ಯಂತ ವಿಶೇಷವಾದ ಸಂದರ್ಭವಾಗಿದ್ದು, ಇದು ಕರ್ನಾಟಕದ ಅನುಕರಣೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಗುರುತಿಸುತ್ತದೆ. ರಾಜ್ಯವು ಮಹಾನ್ ವ್ಯಕ್ತಿಗಳನ್ನು ಪಡೆದಿದ್ದು, ಅವರು ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಮತ್ತು ನಾವೀನ್ಯತೆಗೆ ಶಕ್ತಿ ತುಂಬುತ್ತಿದ್ದಾರೆ ಕರ್ನಾಟಕದ ಜನರು ಸದಾ ಸಂತೋಷ ಮತ್ತು ಯಶಸ್ಸಿನಿಂದ ಕೂಡಿರಲಿ' ಎಂದು ಶುಭ ಹಾರೈಸಿದ್ದಾರೆ.

ಇತ್ತ ಅಮಿತ್ ಶಾ ಅವರು, ಕರ್ನಾಟಕ ರಾಜ್ಯೋತ್ಸವದಂದು ನಾಡಿನ ಎಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು. ಭವ್ಯ ಪರಂಪರೆಯ ಹೆಮ್ಮೆಯ ವಾರ ಸುದಾರರಾಗಿರುವ ಕರ್ನಾಟಕದ ಜನತೆ ದೇಶದ ಗೌರವವನ್ನು ಹೆಚ್ಚಿಸಲು ಮಹತ್ತರವಾದ ಕೊಡುಗೆ ನೀಡಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ. ಇನ್ನು ನಿರ್ಮಲಾ ಸೀತಾರಾಮನ್ ಅವರು, 'ಕರ್ನಾಟಕವು ಅತ್ಯಾಧುನಿಕ ತಂತ್ರಜ್ಞಾನ ಮತ್ತು ನಾವೀನ್ಯತೆಗಳ ಕೇಂದ್ರವಾಗಿದೆ. ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಕೇಂದ್ರ, ಕರ್ನಾಟಕ ರಾಜ್ಯವು ಪ್ರಗತಿ ಮತ್ತು ಸಮೃದ್ಧಿಯನ್ನು ಸಾಧಿಸಲೆಂದು ಹಾರೈಸುತ್ತೇನೆ' ಎಂದು ಹೇಳಿದ್ದಾರೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:02.11.2024

## 4. 7 ವರ್ಷಗಳಲ್ಲೇ 2ನೇ ಅತ್ಯಧಿಕ ಜಿಎಸ್‌ಟಿ ಸಂಗ್ರಹ

ಆರಂಭದ ದಿಸೆಯಲ್ಲಿ ವರ್ತಕ ಸಮೂಹದಿಂದ ತೀವ್ರ ವಿರೋಧ ಎದುರಿಸಿದ್ದ, ಪ್ರತಿಪಕ್ಷಗಳಿಂದ ಟೀಕೆಗೆ ಗುರಿಯಾಗಿದ್ದ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ಪದ್ಧತಿ ಈಗ ಯಶಸ್ವಿನ ಹಾದಿಯಲ್ಲಿ ದಾಪುಗಾಲಿಡುತ್ತಿದೆ. ಕಳೆದ 7 ವರ್ಷಗಳಲ್ಲೇ 2ನೇ ಅತ್ಯಧಿಕ ತೆರಿಗೆ ಮೊತ್ತವು ಅಕ್ಟೋಬರ್‌ನಲ್ಲಿ ಸಂಗ್ರಹವಾಗಿದ್ದು, ಸರ್ಕಾರದ ಬೊಕ್ಕಸವನ್ನು ಇನ್ನಷ್ಟು ಬಲಿಷ್ಠವಾಗಿಸಿದೆ.

ದಸರಾ–ದೀಪಾವಳಿ ಹಬ್ಬದ ಸಮಯದಲ್ಲಿ ವ್ಯಾಪಾರ ವಹಿವಾಟು ಭಾರೀ ಹೆಚ್ಚಳವಾಗಿದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಕ್ಟೋಬರ್‌ನಲ್ಲಿ ಸಂಗ್ರಹಿಸಿದ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ರೂ.1.87 ಲಕ್ಷ ಕೋಟಿಗಳಿಗೇರಿದೆ. 2017ರ ಜುಲೈ 1ರಂದು ನೂತನ ತೆರಿಗೆ ಸಂಗ್ರಹ ಪದ್ಧತಿ ಜಿಎಸ್‌ಟಿ ಜಾರಿಗೆ ಬಂದ ನಂತರ ಈಗಿನದೇ 2ನೇ ಅತ್ಯಧಿಕ ಮೊತ್ತದ ತೆರಿಗೆ ಸಂಗ್ರಹವಾಗಿದೆ. ಈ ಮೊದಲು 2024ರ ಏಪ್ರಿಲ್‌ನಲ್ಲಿ ರೂ.2.10 ಲಕ್ಷ ಕೋಟಿಗಳಷ್ಟು ಗರಿಷ್ಠ ಮೊತ್ತದ ಜಿಎಸ್‌ಟಿ ಸಂಗ್ರಹವಾಗಿತ್ತು.

2023ರ ಅಕ್ಟೋಬರ್‌ನಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹ ರೂ.1.72 ಲಕ್ಷ ಕೋಟಿಗಳಾಗಿತ್ತು. 2024ರ ಅಕ್ಟೋಬರ್‌ನಲ್ಲಿ ರೂ.1.87 ಲಕ್ಷ ಕೋಟಿ ರೂ. ತೆರಿಗೆ 'ಸರಕು–ಸೇವೆಗಳ' ವಿಭಾಗದಿಂದ ಸಂಗ್ರಹವಾಗಿದೆ.

ಆ ಮೂಲಕ ಜಿಎಸ್‌ಟಿ ಸಂಗ್ರಹ ವಿಚಾರದಲ್ಲಿ ವರ್ಷದಿಂದ ವರ್ಷಕ್ಕೆ ಶೇ.8.9ರಷ್ಟು ವೃದ್ಧಿ ಕಂಡು ಬಂದಿದೆ ಎಂದು ಕೇಂದ್ರದ ಹಣಕಾಸು ಸಚಿವಾಲಯದ ಅಂಕಿ–ಅಂಶಗಳು ತೋರಿಸಿವೆ. ಇತ್ತೀಚಿನ ಬೆಳವಣಿಗೆಯು ದೇಶಿಯ ಮಾರಾಟದಲ್ಲಿನ ಏರಿಕೆ ಮತ್ತು ವರ್ಧಿತ ಅನುಸರಣೆಯ ಖಾತೆಯಲ್ಲಿದೆ ಎಂಬುದು ಅಕ್ಟೋಬರ್ ಅಂಕಿ–ಅಂಶಗಳಿಂದ ತಿಳಿದುಬಂದಿದೆ.

ಮರುಪಾವತಿ ನಂತರ ಅಕ್ಟೋಬರ್ ತಿಂಗಳಲ್ಲಿ ನಿವ್ವಳ ಜಿಎಸ್‌ಟಿ ಸಂಗ್ರಹ ರೂ.1.68 ಲಕ್ಷ ಕೋಟಿಗಳಿಗೇರಿದ್ದು, ಶೇ.8ರಷ್ಟು ವೃದ್ಧಿ ದಾಖಲಾಗಿದೆ. ಮರುಪಾವತಿ ತೆರಿಗೆಯಲ್ಲಿ ಶೇ.18.2.ರ ಬೆಳವಣಿಗೆ ದಾಖಲಾಗಿದೆ. ಇತ್ತೀಚಿನ ಜಿಎಸ್‌ಟಿ ಸಂಗ್ರಹದ ಅಂಕಿ–ಅಂಶಗಳು ದೇಶದಲ್ಲಿನ ಗ್ರಾಹಕರು ಮಾಡುವ ವೆಚ್ಚದಲ್ಲಿ ನಿಧಾನಗತಿ ಸೂಚಿಸುತ್ತಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಗ್ರಾಹಕರ ವೆಚ್ಚ ಪ್ರಮಾಣ ಏರುಗತಿಯಲ್ಲಿತ್ತು ಎಂಬುದು ಉಲ್ಲೇಖಾರ್ಹ.

**ಆಧಾರ:**ವಿಶ್ವವಾಣಿ, ದಿನಾಂಕ:04.11.2024

## 5. ಉನ್ನತ ಶಿಕ್ಷಣಕ್ಕೆ ಪಿಎಂ ವಿದ್ಯಾಲಕ್ಷ್ಮಿ ನೆರವು

ಪ್ರತಿಭಾನ್ವಿತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಆರ್ಥಿಕ ನೆರವು ಒದಗಿಸುವ ಉದ್ದೇಶದ ಪಿಎಂ ವಿದ್ಯಾಲಕ್ಷ್ಮಿ ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ದಿನಾಂಕ:06.11.2024ರಂದು ಅನುಮೋದನೆ ನೀಡಿದೆ. ಈ ಯೋಜನೆಯ ಅಡಿ, ಗುಣಮಟ್ಟದ ಉನ್ನತ ಶಿಕ್ಷಣ ನೀಡುವ ಸಂಸ್ಥೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಬ್ಯಾಂಕ್‌ಗಳಲ್ಲಿ ಬಡ್ಡಿರಹಿತ, ಅಡಮಾನ ರಹಿತ ಸಾಲ ದೊರೆಯಲಿದೆ. ವಿದ್ಯಾರ್ಥಿಗಳ ಬೋಧನಾ ಶುಲ್ಕ ಸೇರಿದಂತೆ ಅವರು ಆಯ್ಕೆ ಮಾಡಿಕೊಂಡ ಕೋರ್ಸ್‌ಗೆ ವ್ಯಯಿಸುವ ಇತರ ಖರ್ಚನ್ನೂ ಈ ಯೋಜನೆಯಡಿ ಭರಿಸಲಾಗುವುದು.

ಆರಂಭದಲ್ಲಿ 860 ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವ 22 ಲಕ್ಷ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಹಣಕಾಸಿನ ನೆರವು ದೊರೆಯಲಿದೆ. ರೂ.8 ಲಕ್ಷವರೆಗೆ ವಾರ್ಷಿಕ ಕೌಟುಂಬಿಕ ಆದಾಯ ಹೊಂದಿರುವ ಹಾಗೂ ಇತರೆ ಯಾವುದೇ ಸರ್ಕಾರಿ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆಯದ ವಿದ್ಯಾರ್ಥಿಗಳಿಗೆ ರೂ.10 ಲಕ್ಷವರೆಗೆ 3% ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯವೂ ದೊರೆಯಲಿದೆ.

**ಆಧಾರ:**ವಿಜಯಕರ್ನಾಟಕ, ದಿನಾಂಕ:07.11.2024

## 6. Centre to launch collateral-free loan schemes for MSMEs:FM

The Union Government will provide up to Rs. 100 crore collateral-free loans to Micro, Small and Medium Enterprises (MSMEs) under a new special credit guarantee scheme, Union Finance Minister Smt. Nirmala Sitharama announced, highlighting that the move is in response to long standing challenges in securing funding especially for terms loans required for plant and machinery.

The FM also revealed plans for SIDBI (Small Industries Development Bank of India) to establish branches in every MSME cluster across the country within the next two to three years, with about 25 new branches coming up this year. "**The expansion is to help reduce the cost of loans by eliminating intermediary lending through public sector banks**," she mentioned.

During the event, she inaugurated eight SIDBI branches virtually and visited Sai Ram engineering, an MSME in Peenya Industrial Area which specialises manufacturing Down. The Hole (DTH) hammers, hammer cases, and related components. This initiative is designed to ensure that MSMEs do not need third-party guarantees or collateral to access these loans making it easier for small businesses to expand and grow, the minister said.

Sitharaman emphasised the government's commitment to supporting every state and MSME, with particular focus on Karnataka, which has 35 lakh MSMEs contributing 1.65 crore jobs.

Nirmala Sitharaman also reviewed the performance of 10 Regional Rural Banks (RRBs) from the Southern Region in Bengaluru. The review covered RRBs in Karnataka, TamilNadu, Andhra Pradesh, Telangana, Kerala, and Paducherry.

The Union Minister also highlighted the crucial role of sponsor banks in providing technical support, sharing best practices, and ensuring that RRBs have the necessary resources for success.

**Courtesty**:Indian Express, Dated:10.11.2024

## 7. ಸಂಸತ್ತಿನಲ್ಲೂ ಚನ್ನಮ್ಮ 200ನೇ ವರ್ಷಾಚರಣೆ

**"ಕಿತ್ತೂರು ರಾಣಿ ಚನ್ನಮ್ಮ ದೇಶದ ಆಸ್ತಿ, ನಾರಿಶಕ್ತಿಯ ಪ್ರೇರಣೆ"** ಎಂದು ಕೇಂದ್ರ ರೈಲ್ವೆ ಖಾತೆ ಸಹಾಯಕ ಸಚಿವ ವಿ. ಸೋಮಣ್ಣ ಬಣ್ಣಿಸಿದ್ದಾರೆ. ರಾಣಿ ಚನ್ನಮ್ಮವರ 246ನೇ ಜನ್ಮದಿನೋತ್ಸವ ಹಾಗೂ ಬ್ರಿಟಿಷರ ವಿರುದ್ಧ ಜಯ ಗಳಿಸಿದ 200 ವರ್ಷದ ವಿಜಯೋತ್ಸವವನ್ನು ದಿಲ್ಲಿಯ ಸಂಸತ್ ಭವನ ಆವರಣದ ಪ್ರೇರಣಾ ಸ್ಥಳದಲ್ಲಿ ಆಚರಿಸಲಾಯಿತು. ಬ್ರಿಟಿಷರೊಂದಿಗೆ ಹೋರಾಟ ನಡೆಸಿದ ದೇಶದ ಪ್ರಪ್ರಥಮ ಮಹಿಳೆಯಾಗಿ ರಾಣಿಚೆನ್ನಮ್ಮ ಅವರ ದಿಟ್ಟ ಹೋರಾಟ ಸಾವಿರಾರು ಭಾರತೀಯರನ್ನು ಸ್ವಾತಂತ್ರ್ಯ, ಹೋರಾಟಕ್ಕೆ ಪ್ರೇರೇಪಿಸಿತು. ಸಂಸತ್ ಭವನ ಆವರಣದಲ್ಲಿ ಚೆನ್ನಮ್ಮ ಅವರಿಗೆ ಗೌರವ ಸಮರ್ಪಣೆಯಿಂದ ಕರ್ನಾಟಕದ ಹೆಮ್ಮೆ ಇಮ್ಮಡಿಯಾಗಿದೆ" ಎಂದರು.

**ಆಧಾರ:**ವಿಜಯಕರ್ನಾಟಕ, ದಿನಾಂಕ:24.10.2024

## 8. ಅಂತರರಾಜ್ಯ ಮಂಡಳಿ ಪುನರ್‌ರಚನೆ

ಕೇಂದ್ರ ರಾಜ್ಯ ಮತ್ತು ಅಂತರರಾಜ್ಯಗಳ ನಡುವೆ ಸಹಕಾರ ಮತ್ತು ಸಮನ್ವಯದಿಂದ ಕೆಲಸ ಮಾಡುವ ಅಂತರರಾಜ್ಯ ಮಂಡಳಿಯನ್ನು ಪುನರ್ ರಚಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ಮತ್ತು ಎಲ್ಲಾ ಮುಖ್ಯಮಂತ್ರಿಗಳು ಹಾಗೂ 9 ಕೇಂದ್ರ ಸಚಿವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. 13 ಕೇಂದ್ರ ಸಚಿವರನ್ನು ಖಾಯಂ ಅಹ್ವಾನಿತರನ್ನಾಗಿ ನೇಮಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯ ಪ್ರಕಟಣೆ ಪ್ರಕಾರ, ಎನ್‌ಡಿಎ ಮಿತ್ರಪಕ್ಷಗಳಾದ ಸಂಯುಕ್ತ ಜನತಾ ದಳ, ಜಾತ್ಯತೀತ ಜನತಾ ದಳ, ತೆಲುಗು ದೇಶಂ ಪಕ್ಷ ಮತ್ತು ಲೋಕ ಜನಶಕ್ತಿ ಪಕ್ಷದ ಕೇಂದ್ರ ಸಚಿವರೂ ಪುನರ್‌ರಚನೆಯಾದ ಮಂಡಳಿಯ ಭಾಗವಾಗಿದ್ದಾರೆ.

ಮಂಡಳಿಯ ಸದಸ್ಯರ ಪೈಕಿ ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಅಮಿತ್ ಶಾ, ಜೆ.ಪಿ ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್, ನಿರ್ಮಲಾ ಸೀತಾರಾಮನ್, ಮನೋಹರ್ ಲಾಲ್ ಖಟ್ಟರ್, ರಾಜೀವ್ ರಂಜನ್ ಸಿಂಗ್ ಅಲಿಯಾಸ್ ಲಲನ್ ಸಿಂಗ್, ವೀರೇಂದ್ರಕುಮಾರ್ ಮತ್ತು ಕಿಂಜರಾಪು ರಾಮಮೋಹನ್ ನಾಯ್ಡು ಅವರು ಸೇರಿದ್ದಾರೆ.

**ಆಧಾರ:**ಪ್ರಜಾವಾಣಿ, ದಿನಾಂಕ:12.11.2024

## 9. Govt to remind taxpayers of "undisclosed" foreign assets

The income tax department would send reminders to taxpayers who misses disclosing foreign assets or income from foreign sources while filling income tax returns (ITRs)for assessment year (AY) 2024-25.

In a press statement, the tax departmnet has said that it would guide and assist taxpayers with accurately completing Schedule Foreign Assets and reporting income from foreign sources in their Income tax Returns( ITR).

This is part of a compliance Cum-Awareness Campaign for Assessment Year (AY) 2024-25 launched by the Central Board of Direct Taxes(CBDT). As part of this campaign, informational messages will be sent through SMS and e-mail to resident taxpayers who have already submitted their ITR for AY 2024-25.

“These messages are intended for individuals identified through information received under bilateral and multilateral agreements, suggesting that they may hold foreign accounts or assets, or have received income from foreign jurisdictions. The purpose is to remind and guide those who may not have fully completed Schedule Foreign Assets in their submitted ITR for AY 2024-25, especially in cases involving high-value foreign assets,” says statement by the CBDT.

Compliance with Schedule FA and FSI is mandatory under the Black Money (Undisclosed Foreign Income and Assets) and Imposition of Tax Act, 2015, which requires the full disclosure of foreign assets and income. According to the tax department, the initiative highlights the Income Tax Department’s commitment to using technology to simplify taxpayer compliance and reduce human interaction.

By leveraging data obtained through the Automatic Exchange of Information (AEOI), the department is working to create a more efficient, taxpayers friendly system, says the tax department.

The CBDT expects all eligible taxpayers to take advantage of this opportunity to fulfil their tax responsibilities and contribute to the the nation’s economic development.

This effort not only is in line with the government’s vision for a developed India but also fosters a culture of transparency, accountability, and voluntary compliance.

**Courtesty:**Indian Express, Dated:18.11.2024

## 11. ಪ್ಯಾನ್ 2.0ಗೆ ಅನುಮೋದನೆ

ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ಹೈಟೆಕ್ ಮಾಡುವ ಮತ್ತು ಬಳಕೆದಾರ ಸ್ನೇಹಿಯಾಗಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಮತ್ತೊಂದು ಮಹತ್ವದ ಹೆಜ್ಜೆ ಇರಿಸಿದೆ. ಈ ನಿಟ್ಟಿನಲ್ಲಿ **‘ಪ್ಯಾನ್ 2.0’** ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ರೂ.1,435 ಕೋಟಿ ವೆಚ್ಚದ ಈ ಯೋಜನೆಯು ತಂತ್ರಜ್ಞಾನ ಬೆಂಬಲಿತ ಪರಿವರ್ತನೆಯ ಮೂಲಕ ತೆರಿಗೆದಾರರ ನೋಂದಣಿ ಮತ್ತು ಧೃಢೀಕರಣ ಪ್ರಕ್ರಿಯೆಗಳನ್ನು ಮತ್ತಷ್ಟು ಸರಳೀಕರಣಗೊಳಿಸಲಿದೆ. ಕಾಗದರಹಿತ ಮತ್ತು ಸಂಪೂರ್ಣ ಆನ್‌ಲೈನ್ ವ್ಯವಸ್ಥೆ ಇದಾಗಿರಲಿದೆ. ಸುಲಭ ದೃಢೀಕರಣಕ್ಕಾಗಿ **‘ಪ್ಯಾನ್ 2.0’** ಕಾರ್ಡ್ ಮೇಲೆ ಕ್ಯೂಆರ್ ಕೋಡ್ ಇರಲಿದೆ. ಗ್ರಾಹಕರು ಉಚಿತವಾಗಿ ಕಾರ್ಡ್ ಅಪ್‌ಗ್ರೇಡ್ ಮಾಡಿಕೊಳ್ಳಲು ಅವಕಾಶ ದೊರೆಯಲಿದೆ.

ಪ್ರಸ್ತುತ ಇರುವ **‘ಪ್ಯಾನ್ 1.0’** ವ್ಯವಸ್ಥೆಯ ಸ್ಥಾನವನ್ನು ಹೊಸ ಯೋಜನೆಯು ತುಂಬಲಿದ್ದು, ಕೋರ್ ಮತ್ತು ನಾನ್ ಕೋರ್, ಕಾರ್ಯಾಚರಣೆಗಳನ್ನು ಇದು ಒಳಗೊಂಡಿರಲಿದೆ. ತೆರಿಗೆದಾತರ ನೊಂದಣಿ ಸೇವೆಗಳು, ತ್ವರಿತ ಸೇವಾ ಪೂರೈಕೆಗೆ ಇದು ನೆರವಾಗಲಿದೆ. ಪರಿಸರ ಸ್ನೇಹಿಯಾದ ಹೊಸ ವ್ಯವಸ್ಥೆ ವೆಚ್ಚ ಉಳಿತಾಯ, ಭದ್ರತೆ ಮತ್ತು ಸೇವಾ ದಕ್ಷತೆ ವೃದ್ಧಿಗೂ ನೆರವಾಗಲಿದೆ ಎಂದು ಸರ್ಕಾರ ತಿಳಿಸಿದೆ.

**ಆಧಾರ:**ವಿಜಯಕರ್ನಾಟಕ, ದಿನಾಂಕ:26.11.2024

## 12. ಸಂವಿಧಾನದ ಆದರ್ಶ ಪಾಲಿಸಿ

ಎಲ್ಲಾ ನಾಗರಿಕರು ತಮ್ಮ ನಿತ್ಯ ಜೀವನದಲ್ಲಿ ಸಾಂವಿಧಾನಿಕ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಮೂಲಭೂತ ಕರ್ತವ್ಯಗಳನ್ನು ಅನುಸರಿಸಿ ಮತ್ತು 2047ರ ವೇಳೆಗೆ **'ವಿಕಸಿತ ಭಾರತ'** ನಿರ್ಮಿಸುವ ರಾಷ್ಟ್ರೀಯ ಗುರಿಗೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ.

ಭಾರತ ಸಂವಿಧಾನವನ್ನು ಅಂಗೀಕರಿಸಿ 75 ವರ್ಷಗಳು ಸಂದ ನಿಮಿತ್ತ ಹಳೆಯ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ನಡೆದ **'ಸಂವಿಧಾನ ದಿವಸ್'** ಆಚರಣೆ ವೇಳೆ ಸಂಸತ್ತಿನ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವು ಸಾಮಾನ್ಯ ಜನರ ಜೀವನವನ್ನು ಉತ್ತಮಗೊಳಿಸಲು ಒಟ್ಟಾಗಿ ಕೆಲಸ ಮಾಡಬೇಕು ಎಂದರು.

'ನಮ್ಮ ಸಂವಿಧಾನವು ಜೀವಂತ ಮತ್ತು ಪ್ರಗತಿಪರ ದಾಖಲೆಯಾಗಿದೆ. ನಮ್ಮ ಸಂವಿಧಾನ ಮೂಲಕ, ನಾವು ಸಾಮಾಜಿಕ ನ್ಯಾಯ ಮತ್ತು ಅಂತರ್ಗತ ಅಭಿವೃದ್ಧಿಯ ಗುರಿಗಳನ್ನು ಸಾಧಿಸಿದ್ದೇವೆ' ಎಂದು ಹರ್ಷಿಸಿದರು.

ಉಪರಾಷ್ಟ್ರಪತಿ ಹಾಗೂ ರಾಜ್ಯಸಭಾ ಸ್ಪೀಕರ್ ಜಗದೀಪ್ ಧನಕರ್ ಮಾತನಾಡಿ, ನಾವು ಪಂಥವನ್ನು ದೇಶಕ್ಕಿಂತ ಮೇಲಿಟ್ಟರೆ, ನಮ್ಮ ಸ್ವಾತಂತ್ರ್ಯ ಎರಡನೇ ಬಾರಿಗೆ ಅಪಾಯಕ್ಕೆ ತಳ್ಳಲ್ಪಡಲಿದೆ. ಇದಕ್ಕೆ ಯಾರೂ ಅವಕಾಶ ನೀಡಬಾರದು ಎಂದು ಕರೆಯಿತ್ತರು.

ಲೋಕಸಭೆ ಸ್ಪೀಕರ್ **ಓಂ ಬಿರ್ಲಾ** ಮಾತನಾಡಿ, 75 ವರ್ಷಗಳ ಹಿಂದೆ ಸಂವಿಧಾನದ ಅಂಗೀಕಾರಗೊಂಡಿತು. ಈ ದಿನದಂದು, ಈ ಪವಿತ್ರ ಕೊಠಡಿಯಲ್ಲಿ ನಮ್ಮ ಸಂವಿಧಾನವನ್ನು ಅಂಗೀಕರಿಸಲಾಯಿತು, ಇದು ನಮ್ಮ ಪೂರ್ವಜರ ಸಮರ್ಪಣೆ, ತ್ಯಾಗ ಮತ್ತು ದೂರದೃಷ್ಟಿಗೆ ಸಾಕ್ಷಿ. ಜನಪ್ರತಿನಿಧಿಗಳು ಸದನದಲ್ಲಿ ನಮ್ಮ ಸಂವಿಧಾನ ಪ್ರತಿಪಾದಿಸಿರುವ ಆದರ್ಶಗಳನ್ನು ಎತ್ತಿಹಿಡಿಯುವಂಥ ಚರ್ಚೆ ಮಾಡಬೇಕು. ಈ ನಿಟ್ಟಿನಲ್ಲಿ ಶಪಥ ಮಾಡಬೇಕು ಎಂದು ಮನವಿ ಮಾಡಿದರು.

**ಆಧಾರ:**ಕನ್ನಡಪ್ರಭ, ದಿನಾಂಕ:27.11.2024

## 13. ಪ್ರಧಾನಿಗೆ ರಾಜ್ಯ ಹಕ್ಕೋತ್ತಾಯ

ನಬಾರ್ಡ್ ಸಾಲದ ಮಿತಿ ಹೆಚ್ಚಳ ಮಾಡಬೇಕು. ಮೇಕೆದಾಟು ಮತ್ತು ಮಹದಾಯಿ ಯೋಜನೆಗಳಿಗೆ ಅನುಮತಿ ನೀಡಬೇಕು. ಅನುದಾನ ತಾರತಮ್ಯ ಸರಿಪಡಿಸಬೇಕು ಎಂಬುದು ಸೇರಿದಂತೆ ರಾಜ್ಯದ ಹಲವು ಹಕ್ಕೋತ್ತಾಯಗಳನ್ನು ಸಿಎಂ ಸಿದ್ದರಾಮಯ್ಯ ಅವರು ದಿನಾಂಕ:29.11.2024ರಂದು ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟಿದ್ದಾರೆ.

ಸಿಎಂ ಡಿ.ಕೆ.ಶಿವಕುಮಾರ್ ಅವರೊಟ್ಟಿಗೆ ದಿಲ್ಲಿಯಲ್ಲಿ ಪ್ರಧಾನಿಯವರನ್ನು ಭೇಟಿಯಾದ ಸಿಎಂ, ರಾಜ್ಯದ ಹಲವು ಪ್ರಮುಖ ವಿಷಯಗಳ ಬಗ್ಗೆ ಮೋದಿ ಅವರ ಗಮನ ಸೆಳೆದರು. ರಾಜ್ಯಕ್ಕೆ ನಬಾರ್ಡ್ ಸಾಲದ ಮಿತಿಯನ್ನು ಶೇ.58ರಷ್ಟು ಕಡಿತಗೊಳಿಸಲಾಗಿದೆ. ಕಳೆದ ಸಾಲಿನಲ್ಲಿ ರೂ.5,600 ಕೋಟಿ ಮಂಜೂರು ಮಾಡಲಾಗಿತ್ತು. ಪ್ರಸಕ್ತ 2024–25ನೇ ಸಾಲಿಗೆ ರೂ.2,340 ಕೋಟಿ ಮಂಜೂರಾಗಿದ್ದು, ಸಾಲದ ಮಿತಿ ಕಡಿತದಿಂದಾಗಿ ರೈತರಿಗೆ ಅಲ್ಪಾವಧಿ ಬೆಳೆ ಸಾಲ ವಿತರಣೆ ತೊಂದರೆಯಾಗಿದೆ. ಇದು ರಾಜ್ಯದ ಆರ್ಥಿಕ ಸ್ಥಿತಿ ಮೇಲೂ ಪರಿಣಾಮ ಬೀರಲಿದೆ ಎಂಬುದನ್ನು ಪ್ರಧಾನಿಗಳ ಗಮನಕ್ಕೆ ತಂದರು.

ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರನ್ನು ಈಗಾಗಲೇ ಭೇಟಿ ಮಾಡಿ ನಬಾರ್ಡ್ ನೆರವು ಹೆಚ್ಚಿಸಲು ಮನವಿ ಸಲ್ಲಿಸಲಾಗಿದೆ. ರಾಜ್ಯದ ರೈತರ ಹಿತದೃಷ್ಟಿಯಿಂದ ಸಕಾಲಕ್ಕೆ ಬೆಳೆ

ಸಾಲ ಸಿಗುವಂತಾಗಲು ಕೂಡಲೇ ಮಧ್ಯಪ್ರವೇಶಿಸಿ ವಿತ್ತ ಸಚಿವಾಲಯಕ್ಕೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:30.11.2024

## 14. ಬ್ಯಾಂಕಿಂಗ್ ಕಾಯ್ದೆಗೆ ತಿದ್ದುಪಡಿ

ಬ್ಯಾಂಕಿಂಗ್ ಕಾನೂನುಗಳ (ತಿದ್ದುಪಡಿ) ಮಸೂದೆ 2024ರ ಮೂಲಕ ಪ್ರಸ್ತಾಪಿಸಲಾದ ಬದಲಾವಣೆಗಳು ಬ್ಯಾಂಕಿಂಗ್ ವಲಯದ ಆಡಳಿತ ಬಲಪಡಿಸಲಿದೆ ಮತ್ತು ಗ್ರಾಹಕರ ಅನುಕೂಲತೆ ಹೆಚ್ಚಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಲೋಕಸಭೆಯ ಪರಿಗಣನೆಗೆ ಮತ್ತು ಅಂಗೀಕಾರಕ್ಕಾಗಿ ಮಸೂದೆ ಮಂಡಿಸಿದ ಸಚಿವರು, ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ–1934, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ–1949, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆ, ಬ್ಯಾಂಕಿಂಗ್ ಕಂಪನಿಗಳು (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ–1970 ಮತ್ತು ಬ್ಯಾಂಕಿಂಗ್ ಕಂಪನಿಗಳು (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ–1980ರಲ್ಲಿ ಬದಲಾವಣೆಗಳನ್ನು ತರಲು ಒಟ್ಟು 19 ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು.

ಬ್ಯಾಂಕ್ ಖಾತೆದಾರರು ತಮ್ಮ ಖಾತೆಯಲ್ಲಿ ನಾಲ್ಕು ನಾಮಿನಿಗಳನ್ನು ಹೊಂದಲು ಈ ಮಸೂದೆ ಪ್ರಸ್ತಾಪಿಸುತ್ತದೆ. ಒಟ್ಟಾರೆ ಹೂಡಿಕೆದಾರರ ಹಿತಾಸಕ್ತಿಗಳನ್ನು ಕಾಪಾಡುವ ಹಲವು ಅಂಶಗಳು ಈ ಮಸೂದೆಯಲ್ಲಿವೆ. ಬ್ಯಾಂಕಿಂಗ್ ಕ್ಷೇತ್ರವು ವರ್ಷಗಳಲ್ಲಿ ವಿಕಸನಗೊಂಡಿರುವುದರಿಂದ ಮತ್ತು ಬ್ಯಾಂಕ್ ಆಡಳಿತ, ಹೂಡಿಕೆದಾರರ ರಕ್ಷಣೆಯನ್ನು ಸುಧಾರಿಸುವ ದೃಷ್ಟಿಯಿಂದ ಐದು ಕಾಯ್ದೆಗಳಿಗೆ ಕೆಲವು ತಿದ್ದುಪಡಿಗಳನ್ನು ಮಾಡುವುದು ಅಗತ್ಯವಾಗಿದೆ ಎಂದು ಸಚಿವರು ಮಾಹಿತಿ ಹಂಚಿಕೊಂಡಿದ್ದಾರೆ.

ಬ್ಯಾಂಕಿಂಗ್ ಕಾನೂನುಗಳ (ತಿದ್ದುಪಡಿ) ಮಸೂದೆ, 2024ನ್ನು ಲೋಕಸಭೆ ಅಂಗೀಕರಿಸಿದೆ. ಬ್ಯಾಂಕ್ ಖಾತೆದಾರರಿಗೆ ನಾಲ್ಕು ಫಲಾನುಭವಿಗಳನ್ನು ನಾಮನಿರ್ದೇಶನ ಮಾಡುವ ನಿಬಂಧನೆಗಳನ್ನು ಈ ಕಾಯ್ದೆ ಪರಿಚಯಿಸಿದೆ. ಸಂವಿಧಾನದ (97ನೇ ತಿದ್ದುಪಡಿ) ಕಾಯ್ದೆ–2011ಕ್ಕೆ ಅನುಗುಣವಾಗಿ, ಅಧ್ಯಕ್ಷ ಮತ್ತು ಪೂರ್ಣಾವಧಿಯ ನಿರ್ದೇಶಕರನ್ನು ಹೊರತುಪಡಿಸಿ ಸಹಕಾರಿ ಬ್ಯಾಂಕ್‌ಗಳಲ್ಲಿನ ನಿರ್ದೇಶಕರ ಅಧಿಕಾರವಧಿಯನ್ನು 8 ರಿಂದ 10 ವರ್ಷದವರೆಗೆ ವಿಸ್ತರಿಸಲು ತಿದ್ದುಪಡಿ ಪ್ರಸ್ತಾಪಿಸಿದೆ. ಕೇಂದ್ರ ಸಹಕಾರಿ ಬ್ಯಾಂಕ್‌ಗಳ ನಿರ್ದೇಶಕರು ರಾಜ್ಯ ಸಹಕಾರಿ ಬ್ಯಾಂಕ್‌ಗಳಲ್ಲಿ ಮಂಡಳಿಯ ಸ್ಥಾನಗಳನ್ನು ಹೊಂದಲು ಅನುಮತಿ ನೀಡಲೂ ಮಸೂದೆ ಪ್ರಸ್ತಾಪಿಸಿದೆ.

**ಆಧಾರ:**ವಿಜಯವಾಣಿ, ದಿನಾಂಕ:04.12.2024

## 15. 23 ರಾಜ್ಯಗಳಿಗೆ ರೂ.50,571 ಕೋಟಿ ಅನುದಾನ

ಕೇಂದ್ರ ಸರ್ಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೂ ವಿಶೇಷ ಅನುದಾನದಡಿ 23 ರಾಜ್ಯಗಳಿಗೆ ರೂ.50,571 ಕೋಟಿ ಬಿಡುಗಡೆ ಮಾಡಿದೆ.

2024–25ನೇ ಹಣಕಾಸು ವರ್ಷದ ಮೊದಲ 8 ತಿಂಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ವೆಚ್ಚ ಹೆಚ್ಚಿಸಲು ಬಂಡವಾಳ ಹೂಡಿಕೆ ಯೋಜನೆಯ ಭಾಗವಾಗಿ ವಿಶೇಷ ನೆರವನ್ನು ಕೇಂದ್ರದಿಂದ ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ಸಹಾಯಕ ಸಚಿವ ಪಂಕಜ್ ಚೌಧರಿ ಲೋಕಸಭೆಯಲ್ಲಿ ದಿನಾಂಕ:03.12.2024ರಂದು ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದ್ದಾರೆ.

ಕೇಂದ್ರ ಸರ್ಕಾರ ಒದಗಿಸುವ ಬಡ್ಡಿ ರಹಿತ ಸಾಲ ಸೌಲಭ್ಯವನ್ನು 28 ರಾಜ್ಯಗಳ ಪೈಕಿ 23 ರಾಜ್ಯಗಳು ಬಳಸಿಕೊಂಡಿವೆ. ಆದರೆ, ಅರುಣಾಚಲ ಪ್ರದೇಶ, ಹರಿಯಾಣ, ಕೇರಳ, ಪಂಜಾಬ್ ಮತ್ತು

ತೆಲಂಗಾಣ ರಾಜ್ಯಗಳು ಮಾತ್ರ ಈ ಸೌಲಭ್ಯವನ್ನು ಬಳಸಿಕೊಂಡಿಲ್ಲ ಎಂದು ಸಚಿವರು ಲಿಖಿತ ಉತ್ತರ ನೀಡಿದ್ದಾರೆ.

ರಾಜ್ಯಗಳಲ್ಲಿ ಬಂಡವಾಳ ಹೂಡಿಕೆಗಾಗಿ ಕೇಂದ್ರದ ವಿಶೇಷ ನೆರವು ಯೋಜನೆಯಡಿ 2024–25ರ ಬಜೆಟ್‌ನಲ್ಲಿ ರೂ.1.50 ಲಕ್ಷ ಕೋಟಿ ಮೀಸಲಿಡಲಾಗಿದೆ. ಬಡ್ಡಿ ರಹಿತ ಸಾಲವಾಗಿ ಕೇಂದ್ರದಿಂದ ಈ ನೆರವು ರಾಜ್ಯಗಳಿಗೆ ಲಭ್ಯವಾಗುತ್ತಿದೆ. ಆರೋಗ್ಯ, ಶಿಕ್ಷಣ, ನೀರಾವರಿ, ಕುಡಿಯುವ ನೀರು ಸರಬರಾಜು, ವಿದ್ಯುತ್ ಸಂಪರ್ಕ, ರಸ್ತೆ–ಸೇತುವೆಗಳು, ರೈಲ್ವೆ ಸೇರಿದಂತೆ ವಿವಿಧ ವಲಯಗಳಲ್ಲಿನ ಬಂಡವಾಳ ಹೂಡಿಕೆ ಯೋಜನೆಗಳಿಗೆ ಕೇಂದ್ರದ ನೆರವು ಯೋಜನೆಯಡಿ ಹಣ ಒದಗಿಸಲಾಗುತ್ತಿದೆ. ಜಲಜೀವನ್ ಮಿಷನ್ ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಳಲ್ಲಿ ರಾಜ್ಯದ ಪಾಲು ಪೂರೈಸಲು ಈ ಹಣ ಬಳಸಬಹುದಾಗಿದೆ.

ಅಲ್ಲದೆ, ಈ ಯೋಜನೆಯಡಿಯೇ ರಾಜ್ಯ ಸರ್ಕಾರದ ವಾಹನಗಳು, ಅಂಬ್ಯುಲೆನ್ಸ್ ಹಳೆ ವಾಹನಗಳನ್ನು ಹೊಸ ವಿದ್ಯುಚ್ಛಕ್ತಿ ಚಾಲಿತ ವಾಹನಗಳಿಗೆ ಬದಲಿಸಲೂ, ವಿದ್ಯುಚ್ಛಕ್ತಿ ಚಾಲಿತ ವಾಹನಗಳಿಗೆ ತೆರಿಗೆ ರಿಯಾಯಿತಿ ಒದಗಿಸಲೂ ರಾಜ್ಯಗಳು ಬಳಸಿಕೊಳ್ಳಬಹುದಾಗಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:04.12.2024

## 16. ಏಕ ಚುನಾವಣೆಗೆ ಸಂಪುಟ ಸಮ್ಮತಿ

ಏಕಕಾಲದಲ್ಲಿ ಲೋಕಸಭೆ, ವಿಧಾನಸಭೆ ಚುನಾವಣೆ ನಡೆಸಲು ನಾಂದಿ ಹಾಡುವ **'ಏಕ ದೇಶ–ಏಕ ಚುನಾವಣೆ'** ಮಸೂದೆಗೆ ದಿನಾಂಕ:03.12.2024ರಂದು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಪ್ರಸಕ್ತ ನಡೆಯುತ್ತಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸುವ ಸಾಧ್ಯತೆಯಿದೆ. ಆದರೆ ಎಲ್ಲ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಸೂದೆ ಅಂಗೀಕರಿಸುವ ಉದ್ದೇಶವಿರುವ ಕಾರಣ ತಕ್ಷಣ ಇದನ್ನು ಅಂಗೀಕರಿಸುವುದಿಲ್ಲ.

ಬದಲಾಗಿ, ವಕ್ಫ್ ತಿದ್ದುಪಡಿ ಮಸೂದೆಯಂತೆಯೇ ಇದನ್ನು ಜಂಟಿ ಸದನ ಸಮಿತಿಗೆ (ಜೆಪಿಸಿ) ಕಳಿಸಿ ಅಲ್ಲಿ ಸರ್ವಸಮ್ಮತಿ ಪಡೆಯಲು ಯತ್ನಿಸಲಾಗುತ್ತದೆ. ರಾಜ್ಯಗಳ ವಿಧಾನಸಭೆ ಸ್ಪೀಕರ್‌ಗಳು, ಜನಪ್ರತಿನಿಧಿಗಳು, ಬುದ್ಧಿಜೀವಿಗಳು, ತಜ್ಞರ ಅಭಿಪ್ರಾಯ ಆಲಿಸುವ ಉದ್ದೇಶ ಸರ್ಕಾರಕ್ಕಿದೆ.

ಅಲ್ಲದೇ ನಾಗರಿಕ ಸಮಾಜದ ಸದಸ್ಯರು ಹಾಗೂ ಸಾರ್ವಜನಿಕರ ಅಭಿಪ್ರಾಯವನ್ನೂ ಆಲಿಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಮೂಲಗಳು ಹೇಳಿವೆ. ಆದರೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಲೋಕಸಭೆ, ವಿಧಾನಸಭೆ ಒಟ್ಟಿಗೆ ನಡೆಸುವ ಅಂಶವನ್ನು ಮಸೂದೆಯಿಂದ ಸದ್ಯದ ಮಟ್ಟಿಗೆ ಹೊರಗಿಡಲಾಗಿದೆ ಎಂದು ಮೂಲಗಳು ಹೇಳಿವೆ.

ಲೋಕಸಭೆ ಚುನಾವಣೆ ಪ್ರಣಾಳಿಕೆಯಲ್ಲಿ ಬಿಜೆಪಿ ನೀಡಿದ ಪ್ರಮುಖ ಭರವಸೆಗಳಲ್ಲಿ ಏಕಕಾಲಕ್ಕೆ ಎಲ್ಲ ಚುನಾವಣೆ ನಡೆಸುವುದು ಕೂಡ ಒಂದಾಗಿತ್ತು. ಪದೇ ಪದೇ ಚುನಾವಣೆ ನಡೆಯುವ ಕಾರಣ ಎದುರಾಗುವ ನೀತಿ ಸಂಹಿತೆಗಳಿಂದ ಅಭಿವೃದ್ಧಿ ಕೆಲಸಗಳು ನಿಲ್ಲುತ್ತವೆ ಹಾಗೂ ನಿರಂತರ ಚುನಾವಣೆಗಳಿಂದ ಅನಗತ್ಯ ಖರ್ಚಾಗುತ್ತದೆ. ಒಟ್ಟಿಗೆ ಚುನಾವಣೆ ನಡೆದರೆ ಖರ್ಚು ತಗ್ಗುತ್ತದೆ ಎಂಬ ಕಾರಣಕ್ಕೆ ಏಕ ಚುನಾವಣೆ ಅಗತ್ಯ ಎಂದು ಬಿಜೆಪಿ ಒತ್ತಿ ಹೇಳಿತ್ತು.

ಈ ಬಗ್ಗೆ ಅಧ್ಯಯನಕ್ಕೆ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರ ರಚಿಸಿತ್ತು. ಲೋಕಸಭೆ, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂತಹಂತವಾಗಿ ಏಕಕಾಲಕ್ಕೆ ಚುನಾವಣೆ ನಡೆಸುವಂತೆ ಸಮಿತಿ ಸೂಚಿಸಿತ್ತು. ಬಳಿಕ ಈ ವರದಿಯನ್ನು ಸ್ವೀಕರಿಸಿ ಸಂಪುಟದಲ್ಲಿ ವರದಿಗೆ ಅನುಮೋದನೆಯನ್ನೂ ನೀಡಲಾಗಿತ್ತು. ಈಗ ಇದನ್ನು ಕೆಲವು ಬದಲಾವಣೆಯೊಂದಿಗೆ ಮಸೂದೆ ರೂಪದಲ್ಲಿ ಅಂಗೀಕರಿಸಲಾಗಿದೆ.

ಏಕದೇಶ–ಏಕಚುನಾವಣೆಗೆ ಕಾಂಗ್ರೆಸ್ ಸೇರಿ ಹಲವಾರು ಇಂಡಿಯಾ ಬ್ಲಾಕ್ ಪಕ್ಷಗಳಿಂದ ವಿರೋಧವಿದ್ದು, ಇದು ಕೇಂದ್ರದಲ್ಲಿ ಆಡಳಿತಾರೂಢ ಪಕ್ಷಕ್ಕೆ ಲಾಭ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಹತ್ತಿಕ್ಕಲು ಹೀಗೆ ಮಾಡಲಾಗುತ್ತಿದೆ. ವೈಫಲ್ಯಗಳಿಂದ ಜನರ ಗಮನ ಬೇರೆಡೆ ಸೆಳೆಯಲೂ ಹೀಗೆ ಮಾಡಲಾಗುತ್ತಿದೆ ಎಂದು ಆರೋಪಿಸಿವೆ. ಆದರೆ ನಿತೀಶ್‌ಕುಮಾರ್ ಅವರ ಜೆಡಿಯು ಮತ್ತು ಚಿರಾಗ್, ಪಾಸ್ವಾನ್‌ನಂತಹ ಪ್ರಮುಖ ಎನ್‌ಡಿಎ ಮಿತ್ರಪಕ್ಷಗಳು ಏಕಕಾಲದ ಚುನಾವಣೆಯನ್ನು ಬೆಂಬಲಿಸಿವೆ.

ಕೋವಿಂದ್ ನೇತೃತ್ವದ ಸಮಿತಿಯು ತನ್ನ 18,626 ಪುಟಗಳ ವರದಿಯಲ್ಲಿ ಈ ಕ್ರಮವನ್ನು 2 ಹಂತಗಳಲ್ಲಿ ಜಾರಿಗೆ ತರಲು ಸೂಚಿಸತ್ತು. ಮೊದಲ ಹಂತವಾಗಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವಂತೆ ಸೂಚಿಸಿತ್ತು. ಇದಾದ ನಂತರ ಮುಂದಿನ ಹಂತದಲ್ಲಿ ಲೋಕಸಭೆ ಮತ್ತು ರಾಜ್ಯಗಳ ಚುನಾವಣೆಗಳೊಂದಿಗೆ ಸ್ಥಳೀಯ ಸಂಸ್ಥೆಗಳು ಮತ್ತು ಪುರಸಭೆಗಳ ಚುನಾವಣೆಗಳನ್ನು ನಡೆಸಬೇಕು ಎಂದೂ ಹೇಳಿತ್ತು.

ಒಂದು ರಾಷ್ಟ್ರ ಒಂದು ಚುನಾವಣೆಗೆ 18 ಸಾಂವಿಧಾನಿಕ ತಿದ್ದುಪಡಿಗಳನ್ನು ಸಮಿತಿಯು ಶಿಫಾರಸ್ಸು ಮಾಡಿದೆ. ಅಲ್ಲದೇ, ದೇಶದ ರಾಜ್ಯಗಳಲ್ಲಿ ಅರ್ಧಕ್ಕಿಂತ ಹೆಚ್ಚು ರಾಜ್ಯಗಳು ಇದಕ್ಕೆ ಅನುಮೋದನೆ ನೀಡಬೇಕು

**ಆಧಾರ:**ವಿಶ್ವವಾಣಿ, ದಿನಾಂಕ:04.12.2024

# ಭಾಗ–5

# ರಾಜ್ಯ ಸರ್ಕಾರದ ಸುದ್ದಿಗಳು

## 1. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿ ರಚನೆ

ಪ್ರಸಕ್ತ ಸಾಲಿನ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಬಹು ನಿರೀಕ್ಷಿತ ಆಯ್ಕೆ ಸಮಿತಿಯನ್ನು ರಚಿಸಿ ಸರ್ಕಾರ ಆದೇಶ ಹೊರಡಿಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅಧ್ಯಕ್ಷತೆಯಲ್ಲಿ 50 ಮಂದಿಯುಳ್ಳ ರಾಜ್ಯೋತ್ಸವ ಆಯ್ಕೆ ಸಲಹಾ ಸಮಿತಿ ರಚಿಸಲಾಗಿದ್ದು, ಈ ಪೈಕಿ ವಿವಿಧ ಅಕಾಡೆಮಿ–ಪ್ರಾಧಿಕಾರಗಳ ಅಧ್ಯಕ್ಷರನ್ನು 13 ಮಂದಿ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವಿವಿಧ ಕ್ಷೇತ್ರವಾರು ಗಣ್ಯರನ್ನು ಸಮಿತಿಯ ಸದಸ್ಯರನ್ನಾಗಿ ನಿಯುಕ್ತಿಗೊಳಿಸಲಾಗಿದ್ದು, ಕನ್ನಡ ಮತ್ತು ಸಂಸ್ಕೃತಿಯ ಸರ್ಕಾರದ ಕಾರ್ಯದರ್ಶಿ ಅಜಯ್ ನಾಗಭೂಷಣ್ ಅವರನ್ನು ಸದಸ್ಯ, ಇಲಾಖೆಯ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಅವರನ್ನು ಸದಸ್ಯ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:06.10.2024

## 2. Karnataka outperforming national economy: Siddu

Karnataka is outperforming the national economy. Chief Minister Siddaramaiah's office said pointing out that the state registered '**robust**' Gross State Domestic product (GSDP) growth of 10.2% in the 2023-24 fiscal.

"… far from being a case of economic mismanagement, Karnataka is outperforming the national economy, driven by strategic investments, innovative policies, and a business-friendly environment. The state continues to be a leading engine of India's economy, the Chief Minister's economy," the Chief Minister's office (CMO) said in a statement.

In a statement, the Government said the NSE (National Stock Exchange in its State of States report) initially projected a "**meagre 4% growth for Karnataka**" only to revise it drastically' to 13.1%. "Sucha significant discrepancy points to an error in early measurement and underestimation of economic performace," the CMO said.

In reality, Karnataka's GSDP growth in FY 2023-24 stood at 10.2%, far exceeding the national average growth rate of 8.2%," the statement pointed out. For 2024-25, the NSE has projected a GSDP growth rate of 9.4% for the state and a national average of 10.5%, the CMO said. "However, the Ministry fo Finance, Government of India, has projeced a more realistic 14% GSDP growth rate for Karnataka. Strong economic indicators, such as a 10% year on year growth in GST collections and a 24% year on year growth in stamp duty revenue as of September 2024, further reinforce the view that Karnataka's economy is growing at a very healthy pace",the CMO said.

'Importantly, Karnataka's GSDP per capita remains among the highest in the country, on par with Telangana. Both Congress led states are demonstrating strong economic performances. Karnataka's pro people policies, such as the Guarantees, are ensuring the benefits of development reach every citizen, fostering inclusive and equitable growth, the CMO argued.

Karnataka's growth at 10.2% is "particularly significant in the backdrop of challenges it faces, the CMO said, "Karnataka endured the worst drought in a decade, which severely impacted agricultural output, contributing to negative growth in that sector, Moreover as a state heavily reliant on the IT and hardware sectors, which contribute 28% of its GSVA, Karnataka was further affected by a global economic slowdown," it said.

**Courtesty:** Decan Herald, Dated:22.10.2024

## 3. Sharavathy pumped storage project site a biodiversity spot: Report

The proposed site for the pumped storage project in the Sharavathy Lion Tailed Macaque (LTM) sanctuary is home to ‘at least’ 362 species of flora and hundreds of fauna, many of which are endangered and endemic to the Western Ghats, a report on the assessment of the biodiversity impact has said.

The Karnataka Power Corporation Limited (KPCL) has proposed a 2,000-MW project on 133.8 acres of the sanctuary between Talakalale in the upstream and the Gerusoppa reservoir in the downstream. The project involves constructing a powerhouse with 8 units of 250 MW turbines along with a 7.8 km conductor system.

A survery of the biodiversity impact assessment submitted by the DPCL, conducted in three months of 2019 to cover different seasons, shows the rich heritage value of the area. For instance, the number of flora went up from 2300 in winter to 342 in monsoon season in the eight sites.

These included six endangered species like Dhooma, Karidhoopa, Gulimavu, Murugalu and others, along with critically endangered Syzigium travancourium and the rare Sattavari.

A divisional forest officer noted that any research conducted a short time will have its limitations. “Many conservationists have pointed out that the Ghats still throws up new species every once in a while. It’s also a fact that not all biodiversity of this area has been documented. When taking up projects, agencies conduct study and submit some of their findings. The larger impact and long-term impact is virtually unknow,” the official said.

The 5 mammals included shedule-I species LTM, tiger, leopard, fishing cat; 18 schedule-II species and 10 which are not classified. As many as six of the mammals were classified as vulnerale while two were endangered and three, including striped hyena, were near threatened.

The 25 reptiles in the area include monitor lizard, python and the montane keelback. The Indian Chameleon and common Indian monitor lizard were the two vulnerable reptiles listed by the study. Among the 23 amphibians, many endemic to the Ghats, were the endangered Nyctibatrachus aliciae and the near threatened Rana temporalis (tree frog).

Of the more than 55 types of butterflies, 23 were classified as rare. The study said the area hosts over 130 species of birds. Except Jungle Myna, all belonged to Schedule IV.

However, the conservation status of the birds was yet to be analysed. Species like Tawny eagle and Great pied hornbill(Vulnerable), Malabar pied hornbill and Indian griffon vulture (near threatened) and common pea fowl were among the birds present.

To a question, chief conservator of forests of Shivamogga circle, K.T.Hanumanthppa, said any submission by DPCL will be verified by the divisional officers of the project area.

“The divisional officers will conduct a thorough site inspection. We will review the same with another site inspection before submitting our point of view to the nodal officer for further decision making”, he said.

**Courtesty:**Decan Herald, Dated:23.10.2024

## 4. ನಿಜಲಿಂಗಪ್ಪ ಮನೆ ಖರೀದಿಗೆ ರಾಜ್ಯ ಸರ್ಕಾರ ನಿರ್ಧಾರ

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ನಿಜಲಿಂಗಪ್ಪ ಅವರ ಚಿತ್ರದುರ್ಗದ ಮನೆಯನ್ನು ಸರ್ಕಾರ ಶೀಘ್ರ ಖರೀದಿಸಿ, ಒಂದು ತಿಂಗಳಲ್ಲಿ ನೊಂದಣಿ ಮಾಡಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸೂಚಿಸಿದ್ದಾರೆ.

ನಿಜಲಿಂಗಪ್ಪ ಅವರ ಮನೆ ಖರೀದಿಸಿ ಸಂರಕ್ಷಿಸಲು ಹಾಗೂ ಅಭಿವೃದ್ಧಿಗೊಳಿಸುವ ಸಂಬಂಧ ವಿಕಾಸಸೌಧದಲ್ಲಿ ಸಭೆ ನಡೆಸಿ ಮಾತನಾಡಿ, ಸರ್ಕಾರ ಈಗಾಗಲೇ ಐದು ಕೋಟಿ ಅನುದಾನ ಬಿಡುಗಡೆಗೊಳಿಸಿದ್ದರೂ. ತಡವಾಗುತ್ತಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಈ ಹಿಂದೆ ಮನೆ ಖರೀದಿ ಸಂಬಂಧ ತಾಂತ್ರಿಕ ಕಾರಣ ಎದುರಾಗಿದ್ದು, ಇದೀಗ ನಿಜಲಿಂಗಪ್ಪ ಅವರ ಪುತ್ರ ಹಾಗೂ ಅವರ ಸಂಬಂಧಿಗಳ ಜತೆ ಚರ್ಚೆ ನಡೆಸಿ ಮನೆ ಖರೀದಿ ಪ್ರಕ್ರಿಯೆಗೆ ಮುಂದಾಗಿದ್ದೇವೆ ಎಂದು ತಿಳಿಸಿದ್ದಾರೆ.

ನಿಜಲಿಂಗಪ್ಪ ಅವರ ಮನೆ ಖರೀದಿ ಹಿನ್ನೆಲೆಯಲ್ಲಿ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲಾಗಿದೆ. ನಿಜಲಿಂಗಪ್ಪ ವಾಸವಿದ್ದ ಕೋಟೆ ನಾಡಿನ ಮನೆ ಖಾತೆಯು ಅವರ 3ನೇ ಪುತ್ರ ಎಸ್.ಎನ್.ಕಿರಣ್ ಶಂಕರ್ ಹೆಸರಿನಲ್ಲಿದ್ದು, ನಿಜಲಿಂಗಪ್ಪ ಬರೆದಿಟ್ಟಿರುವ ವಿಲ್‌ನಂತೆ ಮನೆ ಖಾತೆ ಪ್ರಸ್ತುತ ನಿಜಲಿಂಗಪ್ಪ ಅವರ ಮೊಮ್ಮಗ ವಿನಯ್ ಬಿನ್ ಎಸ್.ಎ.ಕಿರಣ್ ಶಂಕರ್ ಹೆಸರಿನಲ್ಲಿದ್ದು, ಸಂಪೂರ್ಣ ಆಸ್ತಿಗೆ ವಿನಯ್ ಮಾಲೀಕತ್ವ ಹೊಂದಿದ್ದಾರೆ. ಈ ಸಂಬಂಧ ಅಧಿಕಾರಿಗಳು ಕಿರಣ್ ಅವರೊಂದಿಗೆ ಚರ್ಚೆ ನಡೆಸಿ ತಿಂಗಳಲ್ಲಿ ಮನೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಮನೆ ಖರೀದಿಸಿ ಸಂರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಐದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಈ ಪೈಕಿ ಅಂದಾಜು ರೂ.4.18 ಕೋಟಿ ಹಣದಲ್ಲಿ ಮನೆ ಖರೀದಿಸಲು ತೀರ್ಮಾನಿಸಲಾಗಿದ್ದು, ಮನೆ ಅಭಿವೃದ್ಧಿಗೆ ರೂ.81.0 ಲಕ್ಷ ವೆಚ್ಚ ಮಾಡಲಾಗುವುದು ಎಂದು ವಿವರಿಸಿದರು.

**ಆಧಾರ:**ವಿಶ್ವವಾಣಿ, ದಿನಾಂಕ:15.11.2024

## 5 . Tech-savvy MLA to launch app to keep rural weddings a simple affair

To prevent rural families from hosting grand weddings and falling into financial ruin, tech-savvy MLA from Melukote, Darshan puttannaiah, is set to launch an app to help those preferring simple '**Mantra Mangalya**' weddings', a model devised by writer Kuvempu., where expenses are kept to a bare minimum.

Darshan said the app is aimed at bringing like-minded brides and bridegrooms together. The MLA, who sold a thriving software firm which he founded in the US to take the plunge into full time politics in Karnataka ahead of last year's Assembly Elections, was himself married at a simple wedding cemerony.

"The app will be developed in a couple of months, Darshan told TOI." Recently, a matrimonial platform raised several million in funds to expand its services. But there is no platform for youth who want a simple wedding. My aim is to create a platform to enable idealistic youths find life partners and marry in a simple way.

He went on to say grand weddings were financially ruining families in rural areas. Expensive education, health, and grand weddings are the three main factors derailing village economies. He said. "The Mantra Mangalya Model is the best solution for lavish weddings. Through this new platform, I aim to connect all like minded couples".

Farmers movements have also pushed to curb extravagant spendings on weddings by spreading awareness on the issue and promoting 'Mantra Mangalya' be sides trying to eradicate harmful practices like demanding dowry.

Badagalapura Nagendra president, Karnataka Rajya Raitha Sangha, said his organisation spreads awareness on simple weddings even today. "There are two types of simple weddings Manta Mangalya and Vachana Mangalya. Both are against lavish spending. We appreciate all efforts and new initiatives aimed at promoting simple weddings," he said.

Nagendra himself opted for a Mantra Mangalya wedding and even got his daughter married the same way. He said simple weddings are the "need of the hour to protect rural economies.

**Courtesty:**Times of India, Dated:18.11.2024

## 6. ರಾಜ್ಯದ 2 ತಾಣ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಯೋಜನೆ

ಕಡಿಮೆ ಪ್ರಸಿದ್ಧಿ ಇರುವ, ಹೆಚ್ಚು ಪರಿಚಿತವಲ್ಲ ಹಲವು ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಇದಕ್ಕಾಗಿ ರಾಜ್ಯಗಳಿಗೆ ವಿಶೇಷ ಆರ್ಥಿಕ ನೆರವನ್ನೂ ಪ್ರಕಟಿಸಿದೆ. ಈ ಪಟ್ಟಿಯಲ್ಲಿ ಬೆಂಗಳೂರಿನ ತಾತಗುಣಿಯ ರೋರಿಚ್–ದೇವಿಕಾರಾಣಿ ಎಸ್ಟೇಟ್ ಮತ್ತು ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮನ ಗುಡ್ಡ ಕೂಡ ಸೇರಿದೆ. ಒಟ್ಟು 40 ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಜ್ಯದ ಈ ಎರಡೂ ಸ್ಥಳಗಳನ್ನು ಬಂಡವಾಳ ಹೂಡಿಕೆಗೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ವಿಶೇಷ ನೆರವು (ಎಸ್ಎಎಸ್‌ಸಿಐ) ಅಡಿ ಆಯ್ಕೆ ಮಾಡಲಾಗಿದೆ.

ಈ ಪೈಕಿ ರೋರಿಚ್–ದೇವಿಕಾರಾಣಿ ಎಸ್ಟೇಟ್, ಅನ್ನು ರೂ.99.17 ಕೋಟಿ ವೆಚ್ಚದಲ್ಲಿ ಪರಿಸರ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ರೂಪಿಸಲಾಗುತ್ತದೆ. ಅದೇ ರೀತಿ, ರೂ.100 ಕೋಟಿ ವೆಚ್ಚದಲ್ಲಿ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಎಸ್ಎಸ್‌ಸಿಐ ಯೋಜನೆಯಡಿ ಕೇಂದ್ರ ಪ್ರವಾಸೋದ್ಯಮ ಇಲಾಖೆಗೆ ಒಟ್ಟು 83 ಪ್ರಾಜೆಕ್ಟ್‌ಗಳನ್ನು ಸಲ್ಲಿಸಲಾಗಿತ್ತು. ಈ ಪೈಕಿ 23 ರಾಜ್ಯಗಳ 40 ಪ್ರಾಜೆಕ್ಟ್‌ಗಳನ್ನು ಆಯ್ಕೆ ಮಾಡಲಾಗಿದ್ದು ಸುಮಾರು ರೂ.3295 ಕೋಟಿ ವೆಚ್ಚ ಮಾಡಲಾಗುತ್ತಿದೆ. ಅಯ್ಕೆಯಾದ ರಾಜ್ಯಗಳಿಗೆ ತಮ್ಮ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಲು 2026ರ ಮಾರ್ಚ್‌ಗಿಂತ ಮೊದಲ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

**ಆಧಾರ:**ಉದಯವಾಣಿ, ದಿನಾಂಕ:01.12.2024

## 7. ಠೇವಣಿದಾರರ ಹಿತರಕ್ಷಣೆಗೆ ಕಾನೂನು

ಹಣಕಾಸು ಸಂಸ್ಥೆಗಳ ವಂಚನೆಯಿಂದ ಠೇವಣಿದಾರರ ಹಿತಾಸಕ್ತಿ ರಕ್ಷಣೆ ಮಾಡುವ ಸಂಬಂಧ ಕಾನೂನು ತಿದ್ದುಪಡಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಐಎಂಎ ಸೇರಿ ಹಲವು ಹಣಕಾಸು ಸಂಸ್ಥೆಗಳ ವಂಚನೆ ಹಿನ್ನಲೆಯಲ್ಲಿ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ(ತಿದ್ದುಪಡಿ) ವಿಧೇಯಕ–2024ನ್ನು ಕ್ಯಾಬಿನೆಟ್ ಅನುಮೋದಿಸಿದ್ದು, ಬೆಳಗಾವಿ ಅಧಿವೇಶನದಲ್ಲಿ ವಿಧೇಯಕ ಮಂಡನೆಯಾಗಲಿದೆ.

ವಂಚಕ ಹಣಕಾಸು ಸಂಸ್ಥೆಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಮೂಲಕ ಮಾರಾಟ ಮಾಡಿ ಸಂಗ್ರಹವಾಗುವ ಹಣವನ್ನು ಬಾಧಿತ ಠೇವಣಿದಾರರಿಗೆ ಹಂಚಿಕೆ ಮಾಡುವ ಮೂಲಕ ನ್ಯಾಯ ಒದಗಿಸಲು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಮತ್ತು ಸಂರಕ್ಷಣೆಗಾಗಿ ಈಗಾಗಲೇ ಕಾನೂನು ರೂಪಿಸಲಾಗಿದೆ. ಈ ಕಾಯಿದೆಯಲ್ಲಿ ಇನ್ನಷ್ಟು ಅಂಶಗಳನ್ನು ಸೇರ್ಪಡೆ ಮಾಡಿ ಒಟ್ಟು 36 ತಿದ್ದುಪಡಿ ತರಲು ತೀರ್ಮಾನಿಸಲಾಯಿತು, ಎಂದು ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು.

ಠೇವಣಿದಾರರು ಎಂಬ ವ್ಯಾಖ್ಯಾನವನ್ನು ವಿಸ್ತರಣೆ ಮಾಡಲಾಗುತ್ತಿದ್ದು, ಠೇವಣಿದಾರರು ಎಂದರೆ ನಗದು ಅಥವಾ ಇನ್ನಿತರ ಯಾವುದೇ ರೂಪದಲ್ಲಿ ಠೇವಣಿ ಇಟ್ಟವರು ಎಂದು ಸೇರ್ಪಡೆ ಮಾಡಲಾಗುತ್ತಿದೆ. ಲೇವಾದೇವಿದಾರರು ಮತ್ತು ಕಮಿಷನ್ ಏಜೆಂಟರ ಬಳಿ ಕೃಷಿ ಉತ್ಪನ್ನದ ರೂಪದಲ್ಲಿ ಠೇವಣಿ ಮಾಡುವ ರೈತರು ಮತ್ತು ಸಾರ್ವಜನಿಕರು, ವಸತಿ ಅಭಿವೃದ್ಧಿ ಸೊಸೈಟಿಯಲ್ಲಿ ಅಥವಾ ಸಂಸ್ಥೆಯಲ್ಲಿ ಆಸ್ತಿಯನ್ನು ಹೊಂದಲು ಠೇವಣಿ ಮಾಡುವವರ ಹಿತರಕ್ಷಣೆಯನ್ನೂ ಈ ಕಾಯಿದೆ ವ್ಯಾಪ್ತಿಗೆ ತರಲಾಗುತ್ತಿದೆ ಎಂದು ವಿವರಿಸಿದರು.

**ಆಧಾರ:**ವಿಜಯಕರ್ನಾಟಕ, ದಿನಾಂಕ:07.12.2024

## 8. ಔಷಧ–ಆಹಾರ ಇಲಾಖೆ ವಿಲೀನ

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಯ ಕಾರ್ಯವೈಖರಿಗಳು ಬಹುತೇಕ ಒಂದೇ ರೀತಿಯಲ್ಲಿರುವುದರಿಂದ ಈ ಇಲಾಖೆಗಳನ್ನು ವಿಲೀನಗೊಳಿಸಲು ಸಚಿವ ಸಂಪುಟ ಸಭೆ ನಿರ್ಣಯಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಎರಡೂ ಇಲಾಖೆಗಳನ್ನು ವಿಲೀನಗೊಳಿಸಿ ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಎಂದು ಪದನಾಮೀಕರಿಸಲು ತೀರ್ಮಾನಿಸಲಾಗಿದೆ. ಜಮ್ಮು–ಕಾಶ್ಮೀರ, ಗುಜರಾತ್, ಉತ್ತರ ಪ್ರದೇಶ, ಅಸ್ಸಾಂ, ಹರಿಯಾಣ, ರಾಜಸ್ಥಾನ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈಗಾಗಲೇ ಈ ಇಲಾಖೆಗಳು ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಾ ಇರುವುದರಿಂದ ರಾಜ್ಯದಲ್ಲಿಯೂ ಇವುಗಳನ್ನು ವಿಲೀನಗೊಳಿಸುವುದು ಅಗತ್ಯವೆಂದು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆಯುಕ್ತರು ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆ ಎಂದು ಮರು ಪದನಾಮೀಕರಿಸುವುದರಿಂದ ಇಲಾಖೆಯ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಯುಕ್ತರು ವಿಲೀನಗೊಂಡ ಇಲಾಖೆ ಮುಖ್ಯಸ್ಥರಾಗಲಿದ್ದಾರೆ.

**ಆಧಾರ:** ವಿಜಯವಾಣಿ, ದಿನಾಂಕ:07.12.2024

## 9. ತಂತ್ರಜ್ಞಾನ ಬಳಸಿ ತೆರಿಗೆ ವಸೂಲಿ: ರಾಜ್ಯವೇ ಪ್ರಥಮ

ತಂತ್ರಜ್ಞಾನ ಬಳಸಿಕೊಂಡು ಗ್ರಾ.ಪಂ.ಮಟ್ಟದಲ್ಲಿ ಅತಿಹೆಚ್ಚು ತೆರಿಗೆ ವಸೂಲಿ ಮಾಡುತ್ತಿರುವುದರಲ್ಲಿ ದೇಶದಲ್ಲಿ ಕರ್ನಾಟಕ ರಾಜ್ಯವೇ ಪ್ರಥಮ ಸ್ಥಾನದಲ್ಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದವರು, ಕಳೆದ ವರ್ಷ ವಿಶೇಷ ಅಭಿಯಾನ ಹಾಗೂ ಕಾಳಜಿ ವಹಿಸಿ ರಾಜ್ಯದಲ್ಲಿ ಶೇ.52 ರಷ್ಟು ತೆರಿಗೆ ವಸೂಲಿ ಮಾಡಲಾಗಿದೆ. ನೇರವಾಗಿ ಯಾರಿಂದಲೂ ತೆರಿಗೆ ಪಡೆದಂತೆ ಕಟ್ಟುನಿಟ್ಟಿನ ಸೂಚನೆ ಹಿನ್ನಲೆಯಲ್ಲಿ ಆನ್‌ಲೈನ್ ಮೂಲಕವೇ ತೆರಿಗೆ ವಸೂಲಿ ಮಾಡುವಲ್ಲಿ ರಾಜ್ಯವೇ ಮೊದಲು ಎಂದರು.

ಇನ್ನೂ ಇ–ಸ್ವತ್ತು ಸಮಸ್ಯೆ ನಿವಾರಣೆಗೆ ರಾಜ್ಯದ ಇತಿಹಾಸದಲ್ಲಿ ಸರ್ಕಾರ ಕ್ರಮ ವಹಿಸಿದ್ದು, ಇದನ್ನು ಸದ್ಯ ರಾಷ್ಟ್ರೀಯ ಮಾಹಿತಿ ಕೇಂದ್ರ ನಿರ್ವಹಣೆ ಮಾಡುತ್ತಿದ್ದು, ರಾಜ್ಯದಲ್ಲಿಯೂ ನಿರ್ವಹಣೆ ಮಾಡಲು ಸಬಲರಿದ್ದು, ನಮಗೆ ನೀಡಬೇಕೆಂದು ಈಗಾಗಲೇ ಮನವಿ ಕೂಡಾ ಮಾಡಲಾಗಿದೆ. ಅಲ್ಲದೇ ಇದಕ್ಕೆ ಈಗಾಗಲೇ ನೀಲನಕ್ಷೆ ಕೂಡಾ ತಯಾರಿಸಲಾಗಿದ್ದು, ಶೀಘ್ರವೇ ಇದನ್ನು ಅನುಷ್ಠಾನ ತರುವುದಾಗಿ ಸಚಿವ ಪ್ರಿಯಾಂಕ ಖರ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿಯವರೆಗೆ 1,41,42,124 ಆಸ್ತಿಗಳನ್ನು ಮ್ಯಾನ್ಯುವಲ್ ಸಮೀಕ್ಷೆ ಮಾಡಿದ್ದು, ಕೃಷಿ ತೆರಿಗೆ ನಿರ್ಧಾರಣೆಗೆ ಒಳಪಟ್ಟಿರದ ಎಲ್ಲಾ ಭೂಮಿ ಮತ್ತು ಕಟ್ಟಡಗಳ ಸಮೀಕ್ಷೆ ನಡೆಸಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿ ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಆದ್ದರಿಂದ ಒಂದು ವರ್ಷದೊಳಗೆ ಎಲ್ಲವನ್ನೂ ಆಸ್ತಿಗಳ ವಿವರ ಆನ್‌ಲೈನ್ ತಂತ್ರಾಂಶಗಳಲ್ಲಿ ನಮೂದಿಸುವುದಾಗಿ ಸಚಿವರು ತಿಳಿಸಿದರು.

ಆಧಾರ:ವಿಶ್ವವಾಣಿ, ದಿನಾಂಕ:14.12.2024

## 10. ಸಿಎಂ ಸಿದ್ದರಾಮಯ್ಯ ಅವರ ದಾಖಲೆಯ 16ನೇ ಮುಂಗಡ ಪತ್ರ। ರಾಮಕೃಷ್ಣ ಹೆಗಡೆ ಮಂಡಿಸಿದ್ದು 13 ಬಜೆಟ್

ರಾಜ್ಯದಲ್ಲಿ ಸಿದ್ದರಾಮಯ್ಯ ಬಿಟ್ಟರೆ ರಾಮಕೃಷ್ಣ ಹೆಗಡೆ 13 ಬಜೆಟ್ ಮಂಡಿಸಿ ಎರಡನೇ ಸ್ಥಾನದಲ್ಲಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ 8ನೇ ಬಜೆಟ್ ಮಂಡಿಸಿದ್ದಾರೆ. ಇಡೀ ದೇಶದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ಕೀರ್ತಿ ಗುಜರಾತ್‌ನ ಹಣಕಾಸು ಸಚಿವರಾಗಿದ್ದ ವಿ.ಆರ್.ವಾಲಾ ಅವರ ಹೆಸರಿನಲ್ಲಿದೆ. ಅವರು ಒಟ್ಟು 18 ಬಜೆಟ್ ಮಂಡಿಸಿದ್ದಾರೆ. ರಾಜ್ಯದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಹದಿನಾರನೇ ಬಜೆಟ್‌ನ್ನು ಮಾರ್ಚ್ 14ರಂದು ಮಂಡಿಸಲು ನಿರ್ಧರಿಸಿದ್ದಾರೆ. 2025–26ನೇ ಸಾಲಿನ ಬಜೆಟ್ ಗಾತ್ರ ರೂ.4.00 ಲಕ್ಷ ಕೋಟಿಗಳನ್ನು ದಾಟುವ ಸಾಧ್ಯತೆಗಳಿವೆ. ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ಕೀರ್ತಿಗೆ ಸಿದ್ದರಾಮಯ್ಯ ಪಾತ್ರರಾಗಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಗೂ ಇತರ ಕಾರಣಗಳಿಂದ ಸಮತೋಲಿತ ಬಜೆಟ್ ಮಂಡಿಸಲು ತೀರ್ಮಾನಿಸಲಾಗಿದೆ. ಫೆಬ್ರವರಿಯಿಂದ ಬಜೆಟ್ ಸಿದ್ಧತೆ ಆರಂಭಿಸಲಿದ್ದಾರೆ ಎಂದು ಸರ್ಕಾರದ ಮೂಲಗಳು ಖಚಿತಪಡಿಸಿವೆ.

ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಕೇಂದ್ರ ಸರ್ಕಾರದ 2025–26ನೇ ಸಾಲಿನ ಬಜೆಟ್‌ನ್ನು ಫೆಬ್ರವರಿ, 1 ರಂದು ಮಂಡಿಸಲಿದ್ದಾರೆ. ಅವರು ತಮ್ಮ ಬಜೆಟ್‌ನಲ್ಲಿ ರಾಜ್ಯಗಳಿಗೆ ಏನೇನು ಕೊಡುಗೆ ನೀಡಲಿದ್ದಾರೆ ಎಂಬುದನ್ನು ಪರಿಗಣಿಸಿ ಸಿಎಂ ಸಿದ್ದರಾಮಯ್ಯ ಬಜೆಟ್ ಸಿದ್ಧತೆ ಮಾಡಿಕೊಳ್ಳಲಿದ್ದಾರೆ.

ರಾಜ್ಯದಲ್ಲಿ ಈಗ ಬಜೆಟ್ ಗಾತ್ರ ರೂ.3.71 ಲಕ್ಷ ಕೋಟಿಗಳಿದೆ. ಮುಂದಿನ ಹಣಕಾಸು ವರ್ಷಕ್ಕೆ ಈ ಗಾತ್ರ ರೂ.4.25 ಲಕ್ಷ ಕೋಟಿಗಳಿಗೆ ತಲುಪುವ ಸಾಧ್ಯತೆಗಳಿವೆ. ಪ್ರಸಕ್ತ ವರ್ಷದಲ್ಲಿ ರೂ.27,354 ಕೋಟಿಗಳಿಗೆ ತಲುಪುವ ಸಾಧ್ಯತೆಗಳಿವೆ. ಪ್ರಸಕ್ತ ವರ್ಷದಲ್ಲಿ ರೂ.27,354 ಕೋಟಿಗಳ ರಾಜಸ್ವ ಕೊರತೆ ಹಾಗೂ ರೂ.82,981 ಕೋಟಿಗಳ ರಾಜಸ್ವ ಕೊರತೆ ಹಾಗೂ ರೂ.82,981 ಕೋಟಿಗಳ ವಿತ್ತೀಯ ಕೊರತೆ ಇದೆ. ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ವ್ಯಾಪ್ತಿಯಲ್ಲೇ ಇದ್ದರೂ ಸಹ ರಾಜಸ್ವ ಕೊರತೆಯನ್ನು ತಗ್ಗಿಸಬೇಕಾಗಿದೆ. ರಾಜ್ಯದ ಸಾಲಗಳು ರೂ.6.65 ಲಕ್ಷ ಕೋಟಿಗಳಿದ್ದು ಅದು ರೂ.7 ಲಕ್ಷ ಕೋಟಿ ಮೀರುವುದು ಖಚಿತವಾಗಿದೆ. ಆ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನಡೆಯುವ ಕಸರತ್ತುಗಳೇನು ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಸಂಪನ್ಮೂಲ ಕ್ರೋಢೀಕರಣ ಹಾಗೂ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಮತೋಲಿತ ಬಜೆಟನ್ನು ಮಂಡಿಸಲಾಗುತ್ತದೆ. ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ಮುಂದಿನ ಬಜೆಟ್‌ನಲ್ಲಿ ನೀಡಲಾಗುತ್ತದೆ. ಆ ಮೂಲಕ ಶಾಸಕರ ಒತ್ತಾಯಕ್ಕೆ ಒತ್ತು ನೀಡಲಾಗುತ್ತದೆ ಎಂದು ಮೂಲಗಳು ಹೇಳಿದೆ.

**ಆಧಾರ:**ಪ್ರಜಾವಾಣಿ, ದಿನಾಂಕ:26.12.2024

# ಭಾಗ–6

# ನ್ಯಾಯಾಲಯ ಸುದ್ದಿಗಳು

## 1. ನಕ್ಸಲ್ ಪ್ರಕರಣಗಳಿಗೆ ವಿಶೇಷ ನ್ಯಾಯಲಯ

ಶರಣಾಗತರಾದ ನಕ್ಸಲರ ಮೇಲೆ ದಾಖಲಾಗಿರುವ ಪ್ರಕರಣಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಲು **'ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ'** ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಪಶ್ಚಿಮಘಟ್ಟ ಸೇರಿದಂತೆ ರಾಜ್ಯದ ಹಲವೆಡೆ ಎಡಪಂಥೀಯ ತೀವ್ರಗಾಮಿ ಸಂಘಟನೆ ಚಟುವಟಿಕೆಗಳು ಸಕ್ರೀಯವಾಗಿದ್ದಾಗ, ಸ್ಥಳೀಯ ಯುವಜನರು ಸಂಘಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗಿದ್ದರು. ನಿರುದ್ಯೋಗ, ಅಸಮಾನತೆ, ಮೂಲಸೌಕರ್ಯಗಳ ಅಭಿವೃದ್ಧಿ ಕಲ್ಪಿಸದ ಆಡಳಿತದ ಧೋರಣೆಗಳ ವಿರುದ್ಧ ಆಕ್ರೋಶಗೊಂಡಿದ್ದ ಯುವಕರ ಸಂಘಟಿಸಿ, ಚಳುವಳಿ ಕಟ್ಟಲು ನಕ್ಸಲರು ಮುಂದಾಗಿದ್ದರು.

ಚಳುವಳಿ ಹತ್ತಿಕ್ಕಲು ರಚಿಸಲಾಗಿದ ನಕ್ಸಲ್ ನಿಗ್ರಹ ಪಡೆಯು ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ತೀವ್ರಗೊಳಿಸಿತ್ತು. ಕೆಲ ನಕ್ಸಲರ ಹತ್ಯೆಯನ್ನೂ ಮಾಡಿತ್ತು. ಇದೇ ಸಮಯದಲ್ಲಿ ರಾಜ್ಯ ಸರ್ಕಾರ ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದವರ ಶರಣಾಗತಿಗೆ ಅವಕಾಶ ಮಾಡಿಕೊಟ್ಟಿತ್ತು. ಶರಣಾಗತರಾದವರಿಗೆ 2015ರಲ್ಲಿ ವಿಶೇಷ ಪ್ಯಾಕೇಜ್ ಘೋಷಿಸಿತ್ತು.

**ಆಧಾರ:**ಪ್ರಜಾವಾಣಿ, ದಿನಾಂಕ:06.10.2024

## 2. Free legal aid fundamental right even for those who don’t seek it: SC

The Supreme Court said that the right to counsel for a prisoner is a fundamental right traceable to Article 21 of the Constitution, emphasizing that legal aid for the poor should not be inadequate.

A bench of Justices B.R Gavai and K.V. Vishwanathan said that free legal assistance for the poor and indigent, funded by the State is a fundamental right under Article 21, even if the individual does not actively seek legal help.

In its judgment on a Public Interest Litigation (PIL) filed by activist Suhas Chakma, the apex court issued numerous directions under the Legal Services Authorities Act 1987, to strengthen the rights of prisoners. whether undertrial or convicted, to receive free legal aid.

A robust mechanism should be established and periodically updated to ensure that the various beneficial schemes promoted by the Legal Services Authorities reach all corners of the nation, particularly to those whose grievances these schemes aim to address the bench stated.

The court called for the creation of adequate literature in local languages and appropriate promotional methods to ensure that those entitled to these schemes can effectively utilize them.

It directed that boards displaying contact information for the nearest legal aid office should be prominently displayed in public spaces such as police stations, post offices, bus stands and railway stations, in both local languages and English.

The court also instructed Union and state Governments to continue their cooperation and support for the Legal Service Authorities at various levels to ensure effective implementation of these measures.

Additionally, the court suggested that High Courts consider issuing a practice direction requiring all courts including the High Court to append a coversheet to judgments of conviction dismissal or reversal informing convicts of the availability of free legal aid for pursuing higher remedies.

The petitioner sought assurances that no prisoner would be subjected to torture, cruel, inhumane or degrading treatment due to over crowded and unsanitary conditions in jails. The petitioner is also called for the establishment of a permanent mechanism to reduce prison over crowding.

The court heard from senior advocates Vijay Hansaria and K Parmeshwar both acting as amicus curiae, noting that the National Legal Services Authority (NALSA) has been doing commendable work in this area.

**Courtesty:**Decan Herald, Dated:24.10.2024

## 3. Parliament's supremacy ticks in only in 'conflict', SC holds

The Supreme Court said the federal balance lies not in recongnising that the Constitution grants Parliament predominant legislative power but in identifying the scope of such predominance.

While upholding the power of States to impose tax on all kinds of alcohol, including industrial alcohol, a nine- judge bench led by Chief Justice of India DY Chandrachud said it is crucial to note the difference between 'overlap and 'conflict' between the legislative competence of Parliament and state legislatures.

An overlap occurs when two or things of fields partially intersect. However a conflict occurs when two or more entries operate in exactly the same field. Courts, while dealing with an overlap of legislative entries, must endeavour to diminish the overlap and not enhance it by including it in the field of conflict. The federal supremacy accorded to Parliament ticks in at the stage of conflict, the judgment authored by the CJI said.

The court emphasised the principle of federal supremacy in Article 246 can be resorted to only when there is an irresponcible direct conflict between the entries in List (Union List) and List II (States list)

"When there is a conflict between an entry in List-I and an entry in List-II if which is not capable of reconciliation, the power of Parliament to legislate for a field covered by List I must supersede the exercise of power by the State legislature," the bench said.

In case of a seeming conflict between the entries in the two lists, the Union and State list, the bench said the entries must be read together without giving a narrow meaning to either of the entries. However, if the entries cannot be reconciled by giving a wide meaning, it must be determined if they can be reconcied by giving the entries a narrower meaning.

**Courtesty:**Decan Herald, Dated:24.10.2024

## 4. Aadhaar can't be authoritative proof of date of birth:SC

Observing that Aadhaar is not an authoritative proof for date of birth the Supreme Court set aside a Punjab and Haryana High Court order, which had relied on Aadhaar for deciding the age of a victim for calculating the amount of compensation in a road accident case.

A bench of Justices Sanjay Karol and Ujjal Bhuyan said an Aadhaar Card cannot be taken as a conclusive proof for establishing age under various statutes and if there are reliable age documents then they should be considered. It approved the Motor Accident Claims Tribunal's (MCAT) decision to rely upon School Leaving Certificate for age determination as there was a difference in date of birth on the two documents.

The court noted that the Unique Identification Authority of India, by way of its circular in 2023, had stated in reference to an office memorandum issued by the electronics and information technology ministry, that an Aadhaar card, while can be used to establish identity is not perse proof date of birth. The card has not been relied upon by various HCs as proof for date of birth, the SC said.

That being the position, as it stands with respect to the determination of age, we have no hesitation in accepting the contention of the claimant appellants based on the School Leaving Certificate. Thus, we find no error in the learned MACT determination of age based on the School Leaving Certificate, the bench said.

**Courtesy:**Times of India, Dated:25.10.2024

## 5. ಖಾಸಗಿ ಸ್ವತ್ತು ಸಮುದಾಯದ್ದಲ್ಲ

ಖಾಸಗಿ ಒಡೆತನದಲ್ಲಿರುವ ಎಲ್ಲ ಸಂಪನ್ಮೂಲಗಳನ್ನು ಸಾರ್ವಜನಿಕ ಬಳಕೆಗಾಗಿ ಸರ್ಕಾರ ಸ್ವಾಧೀನಪಡಿಸಿಕೊಳ್ಳುವಂತಿಲ್ಲ. ಆದರೆ, ಸಮುದಾಯದ ವಶದಲ್ಲಿರುವ ಭೌತಿಕ ರೂಪದ ಸಂಪನ್ಮೂಲಗಳನ್ನು ಜನಸಮೂಹದ ಒಳಿತಿಗಾಗಿ ಸ್ವಾಧೀನಕ್ಕೆ ಪಡೆಯಬಹುದು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು 7:2ರ ಬಹುಮತದ ತೀರ್ಪನ್ನು ನೀಡಿದೆ.

ಖಾಸಗಿ ಒಡೆತನದಲ್ಲಿರುವ ಎಲ್ಲ ಸ್ವತ್ತುಗಳನ್ನು ಸಮುದಾಯದ ಭೌತಿಕ ಸಂಪತ್ತು ಎಂಬುದಾಗಿ ಪರಿಗಣಿಸಲಾಗದು ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ. 'ಈ ವಿಚಾರವಾಗಿ ಕರ್ನಾಟಕ ಸರ್ಕಾರ ವರ್ಸಸ್ ರಂಗನಾಥ ರೆಡ್ಡಿ ಪ್ರಕರಣದಲ್ಲಿ (1977) ನ್ಯಾಯಮೂರ್ತಿ ಕೃಷ್ಣಅಯ್ಯರ್ ನೇತೃತ್ವದ ಪೀಠವು ನೀಡಿದ್ದ ತೀರ್ಪು ನಿರ್ದಿಷ್ಟವಾದ ಆರ್ಥಿಕ ಮತ್ತು ಸಮಾಜವಾದಿ ಸಿದ್ಧಾಂತದಿಂದ ಪ್ರೇರಿತವಾಗಿತ್ತು' ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಖಾಸಗಿ ಒಡೆತನದಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಸರ್ಕಾರ ಸ್ವಾಧೀನಕ್ಕೆ ಪಡೆದುಕೊಳ್ಳಬಹುದು' ಎಂದು ನ್ಯಾಯಮೂರ್ತಿ ಅಯ್ಯರ್ ನೇತೃತ್ವದ ಪೀಠವು ಆಗ ತೀರ್ಪು ನೀಡಿತ್ತು. ಸಂವಿಧಾನದ 39(ಬಿ) ವಿಧಿಯಲ್ಲಿ ಉಲ್ಲೇಖಿಸಿರುವಂತೆ, 'ಸಮುದಾಯದ ಭೌತಿಕ ಸಂಪತ್ತು' ಎಂಬ ಪದವು ಖಾಸಗಿ ಒಡೆತನದಲ್ಲಿರುವ ಸಂಪನ್ಮೂಲಗಳನ್ನು ಒಳಗೊಂಡಿದೆಯೇ ಎಂಬ ಪ್ರಶ್ನೆ ನ್ಯಾಯಪೀಠದ ಮುಂದಿದೆ, ಹೌದು ಎಂಬುದು ಈ ಪ್ರಶ್ನೆಗೆ ಸೈದ್ಧಾಂತಿಕವಾಗಿ ನೀಡುವ ಉತ್ತರವಾಗಿದೆ. ಈ ಪೀಠವು ಬಹುಮತದ ತೀರ್ಪಿನಲ್ಲಿ ಹೇಳಿದೆ.

ಖಾಸಗಿ ಒಡೆತನದ ಸಂಪನ್ಮೂಲ ಕೂಡ ಸಮುದಾಯದ ಭೌತಿಕ ಸಂಪತ್ತು ಎಂಬುದನ್ನು ವ್ಯಾಪಕ ಅರ್ಥದಲ್ಲಿ ಬಳಸಬಹುದೆಂದು ಕರ್ನಾಟಕ ವರ್ಸಸ್ ರಂಗನಾಥ ರೆಡ್ಡಿ ಪ್ರಕರಣದಲ್ಲಿ ನ್ಯಾ.ಕೃಷ್ಣ ಅಯ್ಯರ್ ನೀಡಿರುವ ತೀರ್ಪಿನಲ್ಲಿ ಹೇಳಿದ್ದಾರೆ. ಹಾಗೆಯೇ ಸಂಜೀವ್ ಕೋಕ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ವರ್ಸಸ್ ಭಾರತ್ ಕೋಕಿಂಗ್ ಕೋಲ್ ಲಿ. (1983) ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಕೂಡ ಇದೇ ಅರ್ಥದಲ್ಲಿ ಈ ವಿಧಿಯನ್ನು ವ್ಯಾಖ್ಯಾನಿಸಿದ್ದನ್ನೂ ಒಪ್ಪುವುದು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ.

ಮಹಾರಾಷ್ಟ್ರ ವಸತಿ ಮತ್ತು ಅಭಿವೃದ್ಧಿ ಕಾಯ್ದೆ–1976ರ 8–ಎ ಅಧ್ಯಾಯವು ಖಾಸಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶ ನೀಡುತ್ತದೆ. ಇದನ್ನು ಪ್ರಶ್ನಿಸಿ, ಆಸ್ತಿಗಳ ಮಾಲೀಕರ ಸಂಘವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

**ಆಧಾರ:**ಪ್ರಜಾವಾಣಿ, ದಿನಾಂಕ:06.11.2024

## 6. Trial reforms, promoting mediation among new Chief Justice's priorities.

Justice Sanjiv Khanna, who took oath as the 51st Chief Justice of India said the core principles of the judiciary was to provide equal treatment, fair opportunity at Justice to all and unbased adjudication to all, regardless of status, wealth or power.

Chief Justice Khanna, in an official statement released by the Supreme Court, said judges had a constitutional duty to ensure easy access to justice to all citizens of our great nation. Judiciary is an integral, yet distinct and independent part of the governance system. The Constitution trusts upon us the role of constitutional guardian, protector of fundamental rights, and responsibility to fulfil the important task of being service provider of Chief Justice Khanna said.

He underscored the judiciary's commitment and responsibility as "protectors of citizens rights and dispute resolvers." The Chief Justice identified his top prorities as making judgments comprehensible to the citizens, promotion of mediation, adoption of focused reforms in criminal case management such as reducing trial duration and efforts to make litigation less gruelling. He termed the judiciary the third wing of democracy.

Chief Justice Khanna was administered the oath of office by president Droupadi Murmu at the Rashtrapati Bhavan. The short but impressive ceremony saw Vice President Jagdeep Dhankhar, Prime Minister Narendra Modi, Ministers, former Chief Justices of India, and sitting and retired judges of the Supreme Court and High Courts in attendance.

**Courtesy:**The Hindu, Dated:12.11.2024

## 7. Illegal export of iron ore: HC suspends sentence, grants bail to Satish Sail, five others

The High court of Karnataka suspended the sentence imposed on Karwar MLS Satish Krishna Sail and other convicts and granted them bail in the six separate cases of illegal export of seized iron ore from Belekeri port in Karwar during 2009-10 in which they were sentenced to rigorous improsonment of seven years by the special court in each of these cases.

Justice M. Nagaprasanna passed the interim order on separate petitions filed by Mr. Sail and other five individuals of the total six convicted persons, and seven companies, including Shree Mallikarjuna shipping Pvt. Ltd. (SMSPL) of which Mr. Sail is the managing director. The SMSPL and Mr. Sail were convicted in all six cases as they were found guilty of exporting seized iron-ore by purchasing it from six other companies..

The High Court directed all the convicted individuals to deposit, within six weeks, 25% of the fine imposed by the special court on them as one of the conditions during the pendency of consideration of their appeals against their conviction and imprisonment.

Earlier, P. Prasanna Kumar, Special Public prosecutor for the Central Bureau of Investigation (CBI) which had probed the cases on the Supreme Court's directions, said Mr. Sail is facing a total of 42 years of imprisonment as the special court has not merged the imprisonment of seven years imposed in each of the six cases.

However, Senior Advocate C.V.Nagesh, who appeared for Mr. Sail and his company, said the trial court had erred in imposing the imprisonment of upto seven years under certain provisions of the Indian Penal Code while also pointing out that the special court had failed to

quantify the fine amount on each of the convicts the pointed out that all the convicts were on bail during the pendency of the trial.

Meanwhile, the High court also orally observed that the order of the special court imposing the sentence and the fine was vague as it had not quantified the fine as the special court had merely said that the accused persons would jointly and severally pay the fine imposed.

Mr. Justice Nagaprasanna, before whom the appeals had come up for hearing, had adjourned to hear the argumets on their plea seeking interim order of suspension of sentence and grant of bail.

**Courtesy:**The Hindu, Dated:14.11.2024

## 8. ಬುಲ್ಡೋಜರ್ ನ್ಯಾಯಕ್ಕೆ ಅಂಕುಶ

ಬುಲ್ಡೋಜರ್ ನ್ಯಾಯವನ್ನು ಕಾನೂನಿನ ಅಸ್ತಿತ್ವಕ್ಕೆ ಬೆಲೆಯನ್ನೇ ನೀಡದ ಅರಣ್ಯ ನ್ಯಾಯದ ಜೊತೆ ಹೋಲಿಸಿರುವ ಸುಪ್ರೀಂಕೋರ್ಟ್ ಕಟ್ಟಡಗಳ ಧ್ವಂಸಕ್ಕೆ ಸಂಬಂಧಿಸಿದಂತೆ ಇಡೀ ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ನೋಟಿಸ್ ನೀಡದೆ ಯಾವ ಕಟ್ಟಡವನ್ನೂ ಧ್ವಂಸಗೊಳಿಸುವಂತೆ ಇಲ್ಲ ಹಾಗೂ ನೋಟಿಸ್ ನೀಡಿದ ನಂತರ ಅದಕ್ಕೆ ಉತ್ತರ ನೀಡಲು ಸಂಬಂಧಪಟ್ಟ ವ್ಯಕ್ತಿಗೆ 15 ದಿನಗಳ ಕಾಲವಕಾಶ ನೀಡಬೇಕು ಎಂದು ಕೋರ್ಟ್ ಸೂಚನೆ ನೀಡಿದೆ.

ಪ್ರಜೆಗಳಿಗೆ ಶಿಕ್ಷೆ ವಿಧಿಸಲು ನ್ಯಾಯಾಂಗಕ್ಕೆ ಇರುವ ಅಧಿಕಾರವನ್ನು ಕಾರ್ಯಾಂಗವು ಚಲಾಯಿಸುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಸ್ಪಷ್ಟಪಡಿಸಿದೆ.

ಕಾನೂನನ್ನು ಸರಿಯಾಗಿ ಪಾಲನೆ ಮಾಡದೆ ಕಟ್ಟಡಗಳನ್ನು ಧ್ವಂಸಗೊಳಿಸುವುದು ಇನ್ನೊಬ್ಬರ ಭಾವನೆಗಳಿಗೆ ಬೆಲೆಯನ್ನೇ ಕೊಡದ ಕೃತ್ಯ, ಅಂತಹ ಕೃತ್ಯಗಳನ್ನು ಕಾನೂನಿನ ಶಕ್ತಿಯನ್ನು ಬಳಸಿ ನಿಗ್ರಹಿಸಬೇಕು ಎಂದು ಪೀಠವು ಹೇಳಿದೆ. ವ್ಯಕ್ತಿ ಆರೋಪಿ ಎಂಬ ಕಾರಣಕ್ಕೆ ಆತನಿಗೆ ಸೇರಿದ ಕಟ್ಟಡ ಧ್ವಂಸಗೊಳಿಸುವುದು ಅರಾಜಕತೆ ಎಂದಿದೆ.

ಬುಲ್ಡೋಜರ್‌ಗಳು ಮನೆಗಳನ್ನು ಧ್ವಂಸಗೊಳಿಸುವ, ಮಹಿಳೆಯರು, ಮಕ್ಕಳು ಹಾಗೂ ವೃದ್ಧರನ್ನು ರಾತ್ರೋರಾತ್ರಿ ಸೂರಿಲ್ಲದವರನ್ನಾಗಿಸುವ ದೃಶ್ಯಗಳು ಬಹಳ ಭೀತಿ ಮೂಡಿಸುವಂಥವು ಎಂದು ಪೀಠವು ಹೇಳಿದೆ. ಇಂತಹ ಕೃತ್ಯಗಳಿಗೆ ಸಂವಿಧಾನದ ಅಡಿಯಲ್ಲಿ ಮಾನ್ಯತೆ ಇಲ್ಲ ಎಂದು ಅದು ಸ್ಪಷ್ಟಪಡಿಸಿದೆ.

ಕಟ್ಟಡ ಧ್ವಂಸಕ್ಕೆ ಸಂಬಂಧಿಸಿದಂತೆ ತಾನು ರೂಪಿಸಿರುವ ಮಾರ್ಗಸೂಚಿಗಳು ರಸ್ತೆ, ಬೀದಿ, ಪಾದಚಾರಿ ಮಾರ್ಗ ರೈಲು ಮಾರ್ಗಕ್ಕೆ ಹೊಂದಿಕೊಂಡಿರುವ ಜಾಗಗಳು, ನದಿ ಅಥವಾ ಜಲ ಮೂಲಗಳಲ್ಲಿ ಇರುವ ಅನಧಿಕೃತ ಕಟ್ಟಡಗಳಿಗೆ ಅನ್ವಯ ಆಗುವುದಿಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ. ಹಾಗೆಯೇ, ಕಟ್ಟಡ ಧ್ವಂಸಕ್ಕೆ ನ್ಯಾಯಾಲಯದಿಂದ ಆದೇಶ ಇದ್ದರೆ, ಅಂತಹ ಪ್ರಕರಣಗಳಿಗೆ ಕೂಡ ಈ ಮಾರ್ಗಸೂಚಿ ಅನ್ವಯವಾಗುವುದಿಲ್ಲ ಎಂದು ಅದು ಹೇಳಿದೆ.

**ಆಧಾರ:**ಪ್ರಜಾವಾಣಿ, ದಿನಾಂಕ:14.11.2024

## 9. ಮ್ಯಾಜಿಸ್ಟ್ರೇಟ್ ಆದೇಶಕ್ಕೆ ಹೈಕೋರ್ಟ್ ಚಾಟಿ

"ಕೇವಲ ಪುಟಗಳನ್ನು ತುಂಬಿಸುವ ಸಲುವಾಗಿ ಉದ್ದುದ್ದದ ಆದೇಶಗಳನ್ನು ಬರೆಸುವುದು ಸಲ್ಲ" ಎಂದು ಕ್ರಿಮಿನಲ್ ಪ್ರಕರಣವೊಂದರಲ್ಲಿ ಮ್ಯಾಜಿಸ್ಟ್ರೇಟ್ ಆದೇಶಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಯಾವುದೇ ಆದೇಶವನ್ನು ಬರೆಸುವ ಮೊದಲಿಗೆ ನಿಮ್ಮ ಮನಸ್ಸು ಮತ್ತು ಬುದ್ಧಿಗೆ ಅನುಗುಣವಾಗಿ ಸಮತೋಲನ ಕಾಪಾಡಿಕೊಳ್ಳಿ ಸುಮ್ಮನೆ ಕಾಗದದ ಮೇಲೆ ಮಸಿಯನ್ನು ವ್ಯರ್ಥವಾಗಿ ಹರಿಸುವ ಪ್ರಯತ್ನ ಮಾಡಬೇಡಿ ಎಂದು ಚಾಟಿ ಬೀಸಿದೆ.

ನಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು ಎಂದು ಕೋರಿ ತುರುವೇಕೆರೆಯ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ಮತ್ತು ಜೆಡಿಎಸ್‌ನ ಸ್ಥಳೀಯ ಘಟಕದ ಮುಖ್ಯಸ್ಥ ಸ್ವಾಮಿ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಾದ ಆದೇಶದಲ್ಲಿ ವಿವರಿಸಿದೆ.

ಯಾವುದೇ ದೂರಿನ ಅಪರಾಧಿಕ ಕಲಂಗಳನ್ನು ವಿಚಾರಣೆಗೆ ಪರಿಗಣಿಸುವಾಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಸಾಕಷ್ಟು ಆಸ್ಥೆ ವಹಿಸಬೇಕು. ಅನವಶ್ಯಕ ಆದೇಶಗಳನ್ನು ಹೊರಡಿಸಬಾರದು ಎಂದು ಹೈಕೋರ್ಟ್, ಮ್ಯಾಜಿಸ್ಟ್ರೇಟ್‌ಗಳಿಗೆ ಪದೇ ಪದೇ ನಿರ್ದೇಶಿಸುತ್ತಲೇ ಬಂದಿದೆ. ಆದರೂ, ಇದನ್ನು ಗಮನಿಸದೇ ಇರುವುದು ಸರಿಯಲ್ಲ ಎಂದು ನ್ಯಾಯಪೀಠ ಅತೃಪ್ತಿ ಹೊರಹಾಕಿದೆ.

**ಆಧಾರ:**ಪ್ರಜಾವಾಣಿ, ದಿನಾಂಕ:21.11.2024

## 10. ತಪ್ಪು ಆಸ್ತಿ ವಿವರ ಕೊಟ್ಟ ಚಿತ್ರದುರ್ಗ ಮಾಜಿ ಶಾಸಕ ಉಮಾಪತಿಗೆ ಜೈಲು

ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಚಿತ್ರದುರ್ಗದ ಮಾಜಿ ಶಾಸಕ ಎ.ವಿ.ಉಮಾಪತಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು 3 ತಿಂಗಳ ಶಿಕ್ಷೆ ಮತ್ತು ರೂ.1 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ. ಉಮಾಪತಿ ಅವರು ಚುನಾವಣೆ ಆಯೋಗಕ್ಕೆ ಸಲ್ಲಿಕೆ ಮಾಡಿದ ಆಸ್ತಿ ವಿವರದಲ್ಲಿ ತಪ್ಪು ಮಾಹಿತಿಯನ್ನು ಒದಗಿಸಿದ್ದರು. ಈ ಸಂಬಂಧ ಲೋಕಾಯುಕ್ತದಲ್ಲಿ ದೂರು ಸಲ್ಲಿಕೆಯಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯವು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಎ.ವಿ.ಉಮಾಪತಿ ಅವರಿಗೆ ಶಿಕ್ಷೆ ವಿಧಿಸಿದೆ. 3 ತಿಂಗಳ ಶಿಕ್ಷೆ ಮತ್ತು ರೂ.1 ಸಾವಿರ ದಂಡ ವಿಧಿಸಿದೆ. ದಂಡ ನೀಡಲು ವಿಫಲವಾದರೆ ಮತ್ತು 1 ತಿಂಗಳು ಶಿಕ್ಷೆ ಅನುಭವಿಸಬೇಕು ಎಂದು ತೀರ್ಪಿನಲ್ಲಿ ತಿಳಿಸಿದೆ.

**ಆಧಾರ:**ಕನ್ನಡಪ್ರಭ ದಿನಾಂಕ:27.11.2024

## 11. Verify papers of govt job candidates in 6 months:Top court

The Supreme Court has directed police officials of all the state governments to check and verify documents pertaining to the character, antecedents, nationality, and verify documents pertaining to the character, antecedents, nationality, genuineness produced by the candidates selected for government jobs within six months from their appointment.

A bench of Justices J K Maheswari and R Mahadevan issued the direction also saying, that only upon verification of the credentials of the candidates, their appointments will have to be regularised.

In a judgment of December 5, the Court here set aside the Calcutta HC's judgment of August 16, 2023, which allowed the West Bengal government's writ petition against the West Bengal State Administrative Tribunal's decision quashing termination of an ophthalmic assistant, Basudev Datta, 2 months before his retirement.

**Courtesy:**Deccan Herald, Dated:07.12.2024

## 12. 4 ನ್ಯಾಯಮೂರ್ತಿಗಳ ಸೇವೆ ಖಾಯಂ

ಸುಪ್ರಿಂ ಕೋರ್ಟ್ ಕೊಲಿಜಿಯಂ ಶಿಫಾರಸ್ಸು ಆಧರಿಸಿ ಕರ್ನಾಟಕ ಹೈಕೋರ್ಟ್‌ನ ನಾಲ್ವರು ನ್ಯಾಯಮೂರ್ತಿಗಳ ಸೇವೆಯನ್ನು ಕೇಂದ್ರ ಸರ್ಕಾರ ಖಾಯಂಗೊಳಿಸಿದೆ.

ಕಳೆದ ಡಿಸೆಂಬರ್ 12ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಧ್ಯಕತೆಯಲ್ಲಿ ನಡೆದ ಕೊಲಿಜಿಯಂ ಸಭೆಯಲ್ಲಿ ಹಾಲಿ ಹೆಚ್ಚುವರಿ ನ್ಯಾಯಮೂರ್ತಿಗಳಾದ ರಾಮಚಂದ್ರ ದತ್ತಾತ್ರೇಯ ಹುದ್ದಾರ್. ವೆಂಕಟೇಶ್ ನಾಯಕ್, ವಿಜಯಕುಮಾರ ಪಾಟೀಲ್ ಮತ್ತು ರಾಜೇಶ್ ರೈ ಕಲ್ಲಂಗಳ ಅವರ ಸೇವೆ ಖಾಯಂಗೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ ಈಗ ಸೇವೆ ಖಾಯಂ ಆದೇಶವನ್ನು ಹೊರಡಿಸಲಾಗಿದೆ.

ನ್ಯಾ.ರಾಮಚಂದ್ರ ಹುದ್ದಾರ್ ಮತ್ತು ವೆಂಕಟೇಶ್ ನಾಯಕ್ ಅವರು 2023ರ ಜನವರಿ 24ರಂದು ಹಾಗೂ ವಿಜಯಕುಮಾರ ಪಾಟೀಲ್ ಮತ್ತು ರಾಜೇಶ್ ರೈ ಕಲ್ಲಂಗಳ ಅವರು 2023 ಫೆಬ್ರವರಿ 9ರಂದು ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಹೆಚ್ಚುವರಿ ನ್ಯಾಯಮೂರ್ತಿಗಳ ಕಾರ್ಯವೈಖರಿ, ದಕ್ಷತೆ ಪರಿಗಣಿಸಿ ಅವರ ಸೇವೆಯನ್ನು ಖಾಯಂಗೊಳಿಸುವ ಪರಿಪಾಠ ಚಾಲ್ತಿಯಲ್ಲಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:25.12.2024

# ಭಾಗ–7

# ಹೊರ ರಾಜ್ಯ ಸುದ್ದಿಗಳು

## 1. Speaker dismisses disqualification pleas against 8 Goa MLAs

Goa Speaker Ramesh Tawadkar dismised the disqualification petition against eight MLAs who joined BJP from Congress in Septemeber 2022. He said the case was identical to the facts in the disqualification case of Dominic Noronha vs Digambar Kamat, which was disposed of last month, and is based on the same event that took place on september 14, 2022.

In the Noronha vs Kamat case, Tawadkar had dismissed the petition saying the SC had clearly upheld that if two thirds of the members of the legislature party disagree with the political party, such disagreement is protected and the same shall not incur as disqualification. Thus, the Supreme Court has carved out an exception as stated above.

He also said the judgment of the Bombay HC is in line with the Supreme Court observation. “Accordingly I find that there is no disqualification incurred by the respondents in this case and the petitioner cannot claim their disqualification,” the speaker had ruled.

Former state Congress president Girish Chodankar filed the disqualification petition under the 10th Schedule of the Constitution seeking the disqualification of Michael Lobo, Digambar Kamat, Aleixo Sequeira, Sankalp Amonkar, Delilah Lobo, Kedar Naik, Rajesh Faldessai, and Rodolfo Fernandes as MLAs. They were elected as members of the Goa legislative assembly in March 2022. The MLAs claimed they formed two-thirds of the legislature party of Congress and merely merged with BJP.

Advocate Abhijit Gosavi, representing chodankar, submitted to the speaker that the eight MLAs voluntarily gave up membership of their original political party and should be disqualified. He said the object of the 10th Schedule of the Constitution is to eradicate the evil of defection and emphasised the role of political parties in a democratic set up.

The MLAs said the present issue has already been decided and fully covered in the judgment of Dominic Nornha *vs* Digambar Kamat (disqualification petition) on Oct. 14. They added that theirs is a valid merger as they constitute two-thirds of the members of the Congress Legislature Party and that there is no need for an actual and factual merger of the original political parties, Congress and BJP.

The speaker held that the stand of Chodankar was factually and legally incorrect. Meanwhile, Chodaankar said he would be challenging the order before the higher courts.

“After over two years of filing the petition, we received the order today. The speakers decision was anticipated. I will challenge the order either in the high court or the Supreme Court, ” he said.

**Courtesty:**Times of India, Dated:02.11.2024

## 2. Hemant Soren begins fourth term as Chief Minister of Jharkhand

Hemant Soren began his fourth innings as Chief Minister of Jharkhand as he was sworn in by Governor Santosh Kumar Gangwar in a grand ceremony at the Morabadi Ground in Ranchi.

Top leaders of the INDIA bloc present at the event included Congress President at the even included Congress President Mallikarjun Kharge, Leader of the Opposition in the Lok Sabha Rahul Gandhi, West Bengal Chief Miniser Mamta Banerjee, Samajwadi Party Chief Akhilesh Yadav, Aam Aadmi party leader Arvind Kejriwal, punjab CM Bhagwant Mann,

Rashtriya Janata Dal leader Tejashwi Yadav, Karnataka Deputy Chief Minister D.K.Shivakumar and Tamil Nadu Deputy Chief Minister Udhayanidhi Stalin.

No other Minister took oath during the ceremony, though sources said INDIA allies had discussed a formula where by the JMM will get six ministerial berths, leaving four for the Congress and also one for the RJD.

After takiang oath, Mr. Soren posted on social media. Today's historic occasion is dedicated to the struggle of the immortal brave martyrs, great revolutionaries and agitators of Jharkhand. Today's emotional moment is dedicated to the crores of people of Jharkhand. Abua Sarkar Government of every Jharkhand.

Mr.Soren was arrested by the Enforcement Directorate on January 31, forcing his resignation as Chief Minister in his second stint. Six months later, the Jharkhand High Court granted him bail.

After his release from jail, he was sworn in as the Chief Minister for the thier time on July 4 and immediately plunged into preparations for the Assembly election. The INDIA bloc, led by the JMM in the State, emerged victorious, winning 56 of the 81 seats in the Jharkhand Assembly.

The BJP led National Democratic Alliance won 24 seats, with the Jharkhand Loktrantrik Krantikari Morcha picking up the remaining seat.

**Courtesty:**The Hindu, Dated:29.11.2024

## 3. ಆಂಧ್ರಪ್ರದೇಶ ವಕ್ಫ್ ಬೋರ್ಡ್ ವಿಸರ್ಜನೆ

ವಕ್ಫ್ ತಿದ್ದುಪಡಿ ಮಸೂದೆ ಕುರಿತು ದೇಶಾದ್ಯಂತ ಭಾರಿ ಪರ–ವಿರೋಧ ಬೆಳವಣಿಗೆಗಳು ನಡೆಯುತ್ತಿರುವ ನಡುವೆಯೇ ಆಂಧ್ರಪ್ರದೇಶದಲ್ಲಿ ವಕ್ಫ್ ಮಂಡಳಿಯನ್ನೇ ವಿಸರ್ಜಿಸಲಾಗಿದೆ. ಈ ಮೂಲಕ ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಎನ್‌ಡಿಎ ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡಿದೆ ಎಂಬ ಮಾತುಗಳು ಕೇಳಿಬಂದಿವೆ.

ಹನ್ನೊಂದು ಸದಸ್ಯರನ್ನು ಒಳಗೊಂಡ ವಕ್ಫ್ ಮಂಡಳಿಯನ್ನು ಹೈಕೋರ್ಟ್ ಆದೇಶದ ಹಿನ್ನೆಲಯಲ್ಲಿ ಹಿಂದಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸರ್ಕಾರ ಕಳೆದ ವರ್ಷ ರಚನೆ ಮಾಡಿತ್ತು. ಆದರೆ ವಕ್ಫ್ ಮಂಡಳಿ ರಚನೆ ಕುರಿತು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಹೊರಡಿಸಿದ್ದ ಆದೇಶವನ್ನು ಹಿಂಪಡೆದಿರುವುದಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ನವೆಂಬರ್ 30ರಂದು ಆದೇಶ ಹೊರಡಿಸುವ ಮೂಲಕ ಈ ಮಹತ್ವದ ಕ್ರಮಕೈಗೊಂಡಿದೆ. ತಿರುಪತಿ ಲಡ್ಡು ಕಲಬೆರೆಕೆ ಪ್ರಕರಣದಲ್ಲಿ ವೈಎಸ್‌ಆರ್‌ಸಿಪಿಗೆ ಮರ್ಮಾಘಾತ ನೀಡಿದ್ದ ತೆಲುಗುದೇಶಂ ಪಕ್ಷ ಇದೀಗ ವಕ್ಫ್ ಮಂಡಳಿ ರದ್ದು ಮಾಡುವ ಮೂಲಕ ವೈಎಸ್‌ಆರ್‌ಸಿಪಿಇ ವಿರುದ್ಧ ಮತ್ತೊಂದು ಮಾಸ್ಟರ್ ಸ್ಟ್ರೋಕ್ ಪ್ರಯೋಗಿಸಿದೆ. ರಾಜ್ಯ ವಕ್ಫ್ ಮಂಡಳಿ ಸುದೀರ್ಘಕಾಲದಿಂದ ಕಾರ್ಯನಿರ್ವಹಿಸದಿರುವುದು, ದಾವೆಗಳನ್ನು ಇತ್ಯರ್ಥಗೊಳಿಸುವುದು ಮತ್ತು ಆಡಳಿತಾತ್ಮಕ ನಿರ್ವಾತವನ್ನು ತಡೆಯುವುದರ ಜೊತೆಗೆ ಆದೇಶದಲ್ಲಿನ ಕಾನೂನಾತ್ಮಕತೆ ಪ್ರಶ್ನಿಸಿ ಸಲ್ಲಿಸಲಾದ ರಿಟ್ ಅರ್ಜಿಗಳ ಪರಿಹಾರ ಬಾಕಿ ಇರುವುದರ ಬಗ್ಗೆ ಮಂಡಲಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸರ್ಕಾರದ ಗಮನಕ್ಕೆ ತಂದಿರುವ ಹಿನ್ನೆಲೆಯಲ್ಲಿ ಮಂಡಳಿಯನ್ನು ವಿಸರ್ಜಿಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

**ಆಧಾರ:**ವಿಜಯವಾಣಿ, ದಿನಾಂಕ:02.12.2024

## 4. ನಾಲ್ಕು ರಾಜ್ಯಗಳಿಗೆ ಹೊಸ ರಾಜ್ಯಪಾಲರು

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಿಹಾರ, ಕೇರಳ, ಮಿಜೋರಾಂ ಮಣಿಪುರ ರಾಜ್ಯಗಳಿಗೆ ಹೊಸ ರಾಜ್ಯಪಾಲರನ್ನು ನೇಮಿಸಿದ್ದಾರೆ. ರಾಷ್ಟ್ರಪತಿ ಭವನ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಮಿಜೋರಾಂ ರಾಜ್ಯಪಾಲ ಹರಿಬಾಬು ಕಂಬಂಪತಿ ಅವರನ್ನು ಒಡಿಶಾದ ನೂತನ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಅದೇ ಸಮಯದಲ್ಲಿ, ಒಡಿಶಾದ ಪ್ರಸ್ತುತ ರಾಜ್ಯಪಾಲ ರಘುಬರ್‌ದಾಸ್ ಅವರ ರಾಜೀನಾಮೆಯನ್ನು ಅಧ್ಯಕ್ಷ ದ್ರೌಪದಿ ಮುರ್ಮು ಅಂಗೀಕರಿಸಿದ್ದಾರೆ.

ಕೇರಳ ರಾಜ್ಯಪಾಲರಾಗಿದ್ದ ಮೊಹಮ್ಮದ್ ಅರೀಪ್ ಖಾನ್ ಅವರನ್ನು ಬಿಹಾರ ರಾಜ್ಯಕ್ಕೆ ನೇಮಿಸಲಾಗಿದೆ. ಮಾಜಿ ಸೇನಾ ಮುಖ್ಯಸ್ಥ ವಿಜಯ್‌ಕುಮಾರ್ ಸಿಂಗ್ ಅವರನ್ನು ಮಿಜೋರಾಂ ಮಾಜಿ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್‌ಕುಮಾರ್ ಭಲ್ಲಾ ಅವರನ್ನು ಮಣಿಪುರದ ನೂತನ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ.

**ಆಧಾರ:**ವಿಜಯವಾಣಿ, ದಿನಾಂಕ:25.12.2024

# ಭಾಗ–8
# ಅಂತರಾಷ್ಟ್ರೀಯ ಸುದ್ದಿಗಳು

## 1. ಪ್ರಧಾನಿ ನರೇಂದ್ರ ಮೋದಿಗೆ ಡೊಮಿನಿಕಾದ ಅತ್ಯುನ್ನತ ಗೌರವ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉತ್ತರ ಅಮೆರಿಕದ ಕೆರ್ರಿಬಿಯನ್ ದ್ವೀಪದ **'ಡೊಮಿನಿಕಾ'** ರಾಷ್ಟ್ರದ ಸರಕಾರವು ತನ್ನ ನೆಲದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ **'ಡೊಮಿನಿಕಾ ಆಫ್ ಆನರ್'** ನೀಡಿ ಗೌರವಿಸುವುದಾಗಿ ಘೋಷಿಸಿದೆ.

ಕೋವಿಡ್–19 ಸಾಂಕ್ರಾಮಿಕ ಹಾವಳಿಯ ಸಮಯದಲ್ಲಿ ವಿದೇಶಿ ರಾಷ್ಟ್ರಗಳಿಗೆ ಸಹಾಯ ಹಸ್ತ ಚಾಚಿದ ಮಾನವೀಯತೆಯ ನಡೆಯನ್ನು ಗೌರವಿಸಿ ಮತ್ತು ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಈ ಗೌರವ ಸಲ್ಲಿಸಲಾಗಿದೆ ಎಂದು ಡೊಮಿನಿಕಾ ಪ್ರಧಾನಿ ರೂಸ್‌ವೆಲ್ಟ್ ಸ್ಕಿರ್ರಿಟ್ ಅವರ ಕಚೇರಿ ತಿಳಿಸಿದೆ.

2021ರ ಫೆಬ್ರವರಿಯಲ್ಲಿ ಕೋವಿಡ್ ಸಾಂಕ್ರಾಮಿಕ ಉತ್ತುಂಗದಲ್ಲಿದ್ದ ಸಮಯದಲ್ಲಿ ಪ್ರಧಾನಿ ನರೇಂದ್ರ ನೋದಿ ನೇತೃತ್ವದ ಕೇಂದ್ರ ಸರ್ಕಾರವು ಡೊಮಿನಿಕಾಗೆ 70,000 ಡೋಸ್ ಕೊರೋನಾ ನಿರೋಧಕ ಲಸಿಕೆಗಳನ್ನು ಕಳುಹಿಸಿತ್ತು. ಭಾರತದ **'ಲಸಿಕೆ ಮೈತ್ರಿ'** ನೀತಿಯ ಅಡಿಯಲ್ಲಿ ಈ ಲಸಿಕೆಗಳನ್ನು ಪೂರೈಸಲಾಗಿತ್ತು.

ಡೊಮಿನಿಕಾದ ಪ್ರಶಸ್ತಿಯ ಬಗ್ಗೆ ಸ್ಪಂದಿಸಿರುವ ಪ್ರಧಾನಿ ಮೋದಿ. "ಹವಾಮಾನ ಬದಲಾವಣೆ ಮತ್ತು ಭೌಗೋಳಿಕ–ರಾಜಕೀಯ ಸಂಘರ್ಷಗಳಂತಹ ಜಾಗತಿಕ ಸವಾಲುಗಳನ್ನು ಎದುರಿಸಲು ಪರಸ್ಪರ ಸಹಕಾರ ಎಷ್ಟು ಮಹತ್ವಪೂರ್ಣ ಎನ್ನುವುದು ಎಲ್ಲರ ಅರಿವಿಗೆ ಬರುತ್ತಿರುವುದು ಸಂತಸ ಸಂಗತಿ," ಎಂದಿದ್ದಾರೆ.

ನವೆಂಬರ್ 19 ರಿಂದ 21ರ ನಡುವೆ ಗಯಾನಾದ ಜಾರ್ಜ್ ಟೌನ್‌ನಲ್ಲಿ ನಡೆಯುವ ಕೆರ್ರಿಬಿಯನ್ ಸಮುದಾಯದ ಇಂಡಿಯಾ–ಕ್ಯಾರಿಕೊಮ್ ಶೃಂಗದಲ್ಲಿ ಡೊಮಿನಿಕಾ ಅಧ್ಯಕ್ಷೆ ಸಿಲ್ವೇನಿ ಬರ್ಟನ್ ಅವರು ಪ್ರಧಾನಿ ಮೋದಿ ಅವರಿಗೆ ಗೌರವ ಸಮರ್ಪಿಸಲಿದ್ದಾರೆ.

**ಆಧಾರ:**ವಿಜಯಕರ್ನಾಟಕ, ದಿನಾಂಕ:15.11.2024

## 2. ಮೋದಿಗೆ ಅತ್ಯುನ್ನತ ನಾಗರಿಕ ಗೌರವ: ಗಯಾನ ಘೋಷಣೆ

ಜಿ20 ಶೃಂಗಸಭೆ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಬ್ರೆಜಿಲ್‌ನಿಂದ ಗಯಾನದ ಜಾರ್ಜ್ ಟೌನ್‌ಗೆ ಭೇಟಿ ನೀಡಿದ್ದು, ಸರ್ಕಾರದಿಂದ ದಿನಾಂಕ:20.11.2024ರಂದು ಭವ್ಯಸ್ವಾಗತ ದೊರೆತಿದೆ. ಅಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ ಹಾಗೂ ಇತರ ನಾಯಕರು ಮೋದಿ ಅವರನ್ನು ಜಾರ್ಜ್ ಟೌನ್ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು. ಭಾರತೀಯ ಸಮುದಾಯವು ಭವ್ಯ ಸ್ವಾಗತ ಕೋರಿದೆ.

ದಕ್ಷಿಣ ಅಮೆರಿಕ ರಾಷ್ಟ್ರ ಗಯಾನಗೆ 56 ವರ್ಷಗಳಲ್ಲಿ ಮೊದಲ ಬಾರಿಗೆ ಭೇಟಿ ನೀಡಿದ ಭಾರತದ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮೋದಿ ಅವರಿಗೆ ಗಯಾನ ಸರ್ಕಾರವು ಅತ್ಯುನ್ನತ ನಾಗರಿಕ ಪ್ರಶಸ್ತಿ **"ದಿ ಆರ್ಡರ್ ಆಫ್ ಎಕ್ಸಲೆನ್ಸ್"** ನೀಡಿ ಗೌರವಿಸಲಿದೆ. ಇದರೊಂದಿಗೆ ಮೋದಿ ಅವರಿಗೆ ದೊರೆತ ಅಂತಾರಾಷ್ಟ್ರೀಯ ಪ್ರಶಸ್ತಿಗಳ ಸಂಖ್ಯೆ 19ಕ್ಕೆ ಏರಿಕೆಯಾಗಿದೆ.

ಇತ್ತೀಚೆಗಷ್ಟೇ ನೈಜೀರಿಯಾ ಸರಕಾರವು **'ದಿ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ನೈಜರ್'** ಪ್ರಶಸ್ತಿ ನೀಡಿ ಗೌರವಿಸಿತ್ತು. ಗಯಾನ ಪ್ರವಾಸದ ವೇಳೆ ಮೋದಿ ಅವರು ಅಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ ಅವರೊಂದಿಗೆ ದ್ವಿಪಕ್ಷೀಯ ಮಾತಕತೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

**ಆಧಾರ:** ವಿಜಯಕರ್ನಾಟಕ, ದಿನಾಂಕ:21.11.2024

## 3. ವಿಶ್ವದ ಟಾಪ್ 10 ಹವಾಮಾನ ಸಾಧಕರಲ್ಲಿ ಭಾರತ

ಜಾಗತಿಕ ಹವಾಮಾನ ಬದಲಾವಣೆ ತಡೆಗೆ ಯತ್ನಿಸಿದ ಸಾಧಕ ದೇಶಗಳ ಪಟ್ಟಿಯೊಂದನ್ನು ಬಿಡುಗಡೆ ಮಾಡಲಾಗಿದ್ದು, ವಿಶ್ವದ 63 ದೇಶಗಳ ಪೈಕಿ ಭಾರತ ಟಾಪ್ 10ರೊಳಗೆ ಸ್ಥಾನ ಪಡೆಯುವಲ್ಲಿ

ಯಶಸ್ವಿಯಾಗಿದೆ. 2023ಕ್ಕೆ ಹೋಲಿಸಿದರೆ ಭಾರತ ಸ್ಥಾನ ಸೂಚ್ಯಂಕದಲ್ಲಿ 2 ಸ್ಥಾನ ಇಳಿದಿದ್ದರೂ 10ನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ.

ವಿಶೇಷವೆಂದರೆ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನವನ್ನು ಖಾಲಿ ಬಿಡಲಾಗಿದೆ. ಯಾವುದೇ ದೇಶಗಳು ಕೂಡಾ ವಿವಿಧ ವಿಭಾಗಗಳಲ್ಲಿ ಒಟ್ಟಾರೆಯಾಗಿ ಅತ್ಯುತ್ತಮ ಸಾಧನೆ ಮಾಡದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಉಳಿದಂತೆ ಡೆನ್ಮಾರ್ಕ್ (ನಂ.4), ನೆದರ್ಲೆಂಡ್ (ನಂ.5), ಬ್ರಿಟನ್ (ನಂ.6), ಫಿಲಿಪ್ಪೀನ್ಸ್ (ನಂ.7), ಮೊರಾಕ್ಕೋ (ನಂ.8), ನಾರ್ವೆ (ನಂ.9) ಮತ್ತು ಭಾರತ (ನಂ.10) ಸ್ಥಾನ ಪಡೆದಿವೆ.

ಜರ್ಮನ್ ವಾಚ್ ಎಂಬ ಚಿಂತಕರ ಚಾವಡಿ, ನ್ಯೂ ಕ್ಲೈಮೆಟ್ ಇನ್‌ಸ್ಟಿಟ್ಯೂಟ್ ಮತ್ತು ಕ್ಲೈಮೆಟ್ ಆ್ಯಕ್ಷನ್ ನೆಟ್‌ವರ್ಕ್ ಇಂಟರ್‌ನ್ಯಾಷನಲ್ ಸಂಸ್ಥೆಗಳು ಜಂಟಿಯಾಗಿ **'ದ ಕ್ಲೈಮೆಟ್ ಚೇಂಜ್ ಫರ್‌ಫಾರ್ಮೆನ್ಸ್ ಇಂಡೆಕ್ಸ್'** ಬಿಡುಗಡೆ ಮಾಡಿವೆ. ಅತಿ ಹೆಚ್ಚು ಮಾಲಿನ್ಯ ಹೊರಸೂಸುವಿಕೆ, ನವೀಕರಸಬಹುದಾದ ಇಂಧನಗಳ ಬಳಕೆ ಮತ್ತು ಹವಾಮಾನ ನೀತಿಗಳ ಜಾರಿಯಲ್ಲಿ ಕೈಗೊಂಡ ಸಾಧನೆ ಆಧರಿಸಿ ಈ ಪಟ್ಟಿ ತಯಾರಿಸಲಾಗಿದೆ.

ಯುರೋಪಿಯನ್ ಒಕ್ಕೂಟ ಸೇರಿದಂತೆ ಪಟ್ಟಿಯಲ್ಲಿ ಸ್ಥಾನ ಪಡೆದ 63 ದೇಶಗಳು, ಜಾಗತಿಕ ಹೊರಸೂಸುವಿಕೆಯಲ್ಲಿ ಶೇ. 90ರಷ್ಟು ಪಾಲು ಹೊಂದಿರುವ ಕಾರಣ, ಈ ಸೂಚ್ಯಂಕ ಸಾಕಷ್ಟು ಮಹತ್ವ ಪಡೆದುಕೊಂಡಿದೆ.

ಇತರೆ ದೇಶಗಳಿಗೆ ಹೋಲಿಸಿದರೆ ಹೆಚ್ಚಿನ ಜನಸಂಖ್ಯೆ ಹೊಂದಿರುವ ಭಾರತ, ತಲಾ ಹೊರಸೂಸುವಿಕೆಯಲ್ಲಿ ಕಡಿಮೆ ಪ್ರಮಾಣ ಹೊಂದಿರುವುದು, ನವೀಕರಿಸಬಹುದಾದ ಇಂಧನಗಳ ಬಳಕೆ ಹೆಚ್ಚಳ ಮಾಡಿದ್ದು ಭಾರತ ಟಾಪ್ 10ರೊಳಗೆ ಸ್ಥಾನ ಪಡೆಯಲು ಕಾರಣವಾಗಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:21.11.2024

## 4. ಮೋದಿ ಪ್ರಗತಿಗೆ ಆಕ್ಸ್‌ಫರ್ಡ್ ಪ್ರಶಂಸೆ

ಭಾರತದ ಮೂಲಸೌಕರ್ಯ ಯೋಜನೆಗಳ ತಡೆರಹಿತ ಅನುಷ್ಠಾನಕ್ಕಾಗಿ 9 ವರ್ಷ ಹಿಂದೆ ಪ್ರಧಾನಿ ನರೇಂದ್ರ ಮೋದಿ ಆರಂಭಿಸಿದ್ದ **'ಪ್ರಗತಿ'** ಆನ್‌ಲೈನ್ ವೇದಿಕೆಯ ದೇಶದ ಮೂಲಸೌಕರ್ಯ ಅಭಿವೃದ್ಧಿಯ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ. ಇದರ ಮೂಲಕ 205 ಶತಕೋಟಿ ಡಾಲರ್ (ರೂ. 17.05 ಲಕ್ಷ ಕೋಟಿ) 340 ಪ್ರಮುಖ ಮೂಲ ಸೌಕರ್ಯ ಯೋಜನೆಗಳು ಅನುಷ್ಠಾನಗೊಂಡಿದೆ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಹಾಗೂ ಗೇಟ್ಸ್ ಫೌಂಡೇಶನ್ ನಡೆಸಿದ ಅಧ್ಯಯನವು ಶ್ಲಾಘಿಸಿದೆ.

9 ವರ್ಷಗಳ ಹಿಂದೆ ಪ್ರಾರಂಭವಾದಾಗಿನಿಂದ, ಪ್ರಗತಿ ವೇದಿಕೆಯು ಭಾರತದ ಮೂಲ ಸೌಕರ್ಯ ಅಭಿವೃದ್ಧಿಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದೆ. ಜೂನ್ 2023ರ ವೇಳೆಗೆ, ರೂ. 17.05 ಲಕ್ಷ ಕೋಟಿ ಮೌಲ್ಯದ 340 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದು ದಿನಾಂಕ: 02.12.2024ರಂದು ಬಿಡುಗಡೆ ಮಾಡಿದ ಅಧ್ಯಯನವು ಹೇಳಿದೆ.

ವಿಶೇಷ ಎಂದರೆ ಈ 340 ಯೋಜನೆಗಳ ಪೈಕಿ 8 ಯೋಜನೆಗಳನ್ನು (ರೈಲು, ರಸ್ತೆ, ವಿದ್ಯುತ್, ವಾಯುಯಾನ) ಪ್ರಮುಖವಾಗಿ ವರದಿಯಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಬೆಂಗಳೂರು ಮೆಟ್ರೋ ಯೋಜನೆಯೂ ಒಂದು ಎಂಬುದು ವಿಶೇಷ. ಉಳಿದವು ಜಮ್ಮು ಉಧಂಪುರ–ಶ್ರೀನಗರ ಬಾರಾಮುಲ್ಲಾ ರೈಲು ಸಂಪರ್ಕ, ನವಿ ಮುಂಬೈ ವಿಮಾನ ನಿಲ್ದಾಣ, ಅಸ್ಸಾಂ ಸೇತುವೆ, ವಾರಾಣಸಿ ಔರಂಗಬಾದ್ ಸೇತುವೆ ಇತ್ಯಾದಿ.

ವರದಿಯಲ್ಲಿ ಪ್ರಗತಿಯ ಪರಿಣಾಮಗಳನ್ನು ವಿಶ್ಲೇಷಿಸಲಾಗಿದ್ದು, 12 ವರ್ಷಗಳಿಗೂ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ನಂತರ, ಮೋದಿಯವರು ಮೂಲಸೌಕರ್ಯ ಯೋಜನೆಗಳು ಹೇಗೆ ಜಾರಿಗೊಳ್ಳುತ್ತವೆ ಎಂಬ ಬಗ್ಗೆ ಸ್ಪಷ್ಟ ತಿಳುವಳಿಕೆ ಹೊಂದಿದ್ದರು.

**ಆಧಾರ:**ವಿಜಯಕರ್ನಾಟಕ, ದಿನಾಂಕ:03.12.2024

# ಭಾಗ–9

# ಪ್ರಮುಖ ಲೇಖನಗಳು

## 1. ಪ್ರಜಾಪ್ರಭುತ್ವ ಸರಿಹೋಗಬೇಕೆಂದರೆ ಜನ, ರಾಜಕಾರಣಿ ಬದಲಾಗಬೇಕು

ಇಂದಿನ ರಾಜಕೀಯ ಪರಿಸ್ಥಿತಿಗೆ ರಾಜಕಾರಣಿಗಳು ಮಾತ್ರವಲ್ಲದೇ, ಮತದಾರರು ಕಾರಣ, ಚುನಾವಣೆ ವೇಳೆ ಅಭಿವೃದ್ಧಿಗಿಂತ ಹೆಚ್ಚಾಗಿ ಟೀಕೆಗಳೆ ಸದ್ದು ಮಾಡುತ್ತವೆ. ಉಚಿತ ಯೋಜನೆಗಳನ್ನು ಸ್ಪರ್ಧೆಗೆ ಬಿದ್ದು ನೀಡುತ್ತಿರುವ ರಾಜಕೀಯ ಪಕ್ಷಗಳು ಮುಂದೊಂದು ದಿನ ಜನರು ಕೆಲಸಕ್ಕೆ ಹೋಗದಂತೆ ಮಾಡುವ ಆತಂಕವಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಆತಂಕ ವ್ಯಕ್ತಪಡಿಸಿದರು.

ಉಪಚುನಾವಣೆ, ಮೌಲ್ಯಾಧಾರಿತ ರಾಜಕಾರಣ, ಸೈದ್ಧಾಂತಿಕ ಪ್ರಜ್ಞೆ ವಿಧಾನಪರಿಷತ್‌ನಲ್ಲಿಯೂ ಕುಸಿಯುತ್ತಿರುವ ಮೌಲ್ಯ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ವಿಶ್ವವಾಣಿಯೊಂದಿಗೆ ಮಾತನಾಡಿದರು. ಸಂದರ್ಶನದಲ್ಲಿ ಪ್ರಜಾಪ್ರಭುತ್ವದ ಮೌಲ್ಯ ಆಧಃಪತನದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಸರಿ ಹೋಗಬೇಕೆಂದರೆ ಜನ ಹಾಗೂ ರಾಜಕಾರಣಿಗಳ ಇಚ್ಛಾ ಶಕ್ತಿ ಅಗತ್ಯವೆಂದರೆ, ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ನಾನು ಮೂರನೇ ಬಾರಿಗೆ ಸಭಾಪತಿಯಾಗಿದ್ದೇನೆ. ಈ ಹಿಂದಿನ ಅವಧಿಗೆ ಗಮನಿಸಿದರೆ, ಈಗ ಶಿಸ್ತುಬದ್ಧವಾಗಿ ಸದನಗಳ ಕಲಾಪ ನಡೆಯುತ್ತಿಲ್ಲ. ಸಣ್ಣ ವಿಷಯಕ್ಕೆ ಸಭಾಧ್ಯಕ್ಷರ ಪೀಠದೆದುರು ಪ್ರತಿಭಟನೆ ನಡೆಸುವುದು ಧಿಕ್ಕಾರ ಕೂಗುವುದು, ಇನ್ನೊಬ್ಬರು ಮಾತನಾಡುವಾಗ ಮಧ್ಯೆ ಬಾಯಿಹಾಕುವ ಘಟನೆಗಳೇ ಹೆಚ್ಚಾಗಿವೆ. ವಿಧಾನಪರಿಷತ್‌ಗೆ ಸೀಮಿತವಾಗಿ ಹೇಳುವುದಾದರೆ, ಈ ಪದ್ಧತಿ ಬದಲಾಯಿಸಲು ಹಲವು ಬಾರಿ ಪ್ರಯತ್ನಿಸಿದ್ದೇನೆ. ಆಡಳಿತ ಪಕ್ಷದ ಸದಸ್ಯರು ಸಚಿವರೂ ಸಭಾಪತಿಗಳ ಅನುಮತಿ ಇಲ್ಲದೇ ಮಾತನಾಡುತ್ತಾರೆ. ಇದರಿಂದಲೇ ಅನೇಕ ಗಲಾಟೆಯಾಗಿರುವುದನ್ನು ಗಮನಿಸಿದ್ದೇವೆ. ಇದನ್ನು ಸರಿಪಡಿಸಲು ಹಲವು ಬಾರಿ ಪ್ರಯತ್ನಿಸಿದರೂ ಕೆಲವೊಮ್ಮೆ ಯಶಸ್ವಿಯಾಗಿದೆ.

ಆದರೆ, ಇಡೀ ದಿನ ಸದನದಲ್ಲಿ ಯಾರೂ ಕೂರುವುದಿಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ಆಯಾ ಸದಸ್ಯನ ಪ್ರಶ್ನೆ ಮುಗಿಯುತ್ತಿದ್ದಂತೆ ಹೊರಡುವ ಪರಿಪಾಠ ಹೆಚ್ಚುತ್ತಿದೆ. ಈ ರೀತಿ ಎಲ್ಲರೂ ಮಾಡದಿದ್ದರೂ, ಬಹುತೇಕರು ಇದೇ ಹಾದಿ ಹಿಡಿದಿರುವುದು ದುರಂತ. ಈ ರೀತಿ ಎದ್ದು ಹೋಗುವುದು ಇಂದಿನ ಟ್ರೆಂಡ್ ಆಗಿದೆ. ನಾವು ಆರಂಭದಲ್ಲಿ ಸದನದಲ್ಲಿರುತ್ತಿದ್ದಾಗ, ಇಡೀ ಸದನ ಆಲಿಸುತ್ತಿದ್ದೆವು. ಇದರಿಂದ ಸದನಗಳು ಸರಿಯಾಗಿ ನಡೆಯುತ್ತಿಲ್ಲ. ಮಂತ್ರಿಗಳು ಸರಿಯಾಗಿ ಅಧ್ಯಯನ ಮಾಡಿಕೊಂಡು ಬರುವುದಿಲ್ಲ.

ವಿಧಾನಪರಿಷತ್ ಎನ್ನುವುದು ಚಿಂತಕರ ಛಾವಡಿ, ಹಿರಿಯರ ಮನೆ, ಸಾಹಿತಿಗಳು, ಸಿನಿಮಾ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರ ಸಾಧಕರು ಬರಬೇಕು. ಆದರೆ ಇತ್ತೀಚಿನ ದಿನದಲ್ಲಿ ಈ ಮೌಲ್ಯಾಧಾರಿತ ಆಯ್ಕೆ ಕಡಿಮೆಯಾಗುತ್ತಿದೆ. ಇಲ್ಲಿಯೇ ಈ ರೀತಿ ನಡೆಯುತ್ತಿದ್ದರೆ ಬೇರೆ ಕಡೆ ಏನು ಮಾಡಲು ಸಾಧ್ಯ? ಪ್ರಜಾಪ್ರಭುತ್ವದ ಈ ವ್ಯವಸ್ಥೆ ಯಾವ ಹಂತಕ್ಕೆ ಬಂದಿದೆ ಅಂದರೆ, ದುಡ್ಡು ಕೊಟ್ಟು ವೋಟು ಪಡೆಯುವವರು, ದುಡ್ಡು ತಗೊಂಡು ವೋಟು ಹಾಕುವವರು ಇರುವ ಬದಲಾವಣೆ ಸಾಧ್ಯವಿಲ್ಲ. ಉದಾಹರಣೆಗೆ, ನಮ್ಮ ವಿಧಾನಪರಿಷತ್‌ನಲ್ಲಿ ಶಿಕ್ಷಕರ ಕ್ಷೇತ್ರದಿಂದ ಆರಿಸಿ ಬಂದವರು ಪ್ರತಿ ಶಿಕ್ಷಕರಿಗೆ 10 ಸಾವಿರ, ಮುಖ್ಯ ಶಿಕ್ಷಕರಿಗೆ ರೂ.25 ಸಾವಿರ ಕೊಟ್ಟು ಮತ ಹಾಕಿಸಿ ಕೊಂಡಿದ್ದಾರೆ. ಶಿಕ್ಷಕರೇ ಈ ರೀತಿ ಹಣ ಪಡೆದು ಮತಹಾಕಿ ನಿಂತಾಗ ಬೇರೆಯವರಿಂದ ಏನು ನಿರೀಕ್ಷೆ ಸಾಧ್ಯ? ಈ ಹಣ ಪಡೆದ ಜನಪ್ರತಿನಿಧಿಯಿಂದ ಏನಾಗುತ್ತದೆ ಎನ್ನುವುದಕ್ಕೆ ಒಂದು ನಿದರ್ಶನ ಇಲ್ಲಿ ಹೇಳಲೇಬೇಕು ಕೆಲ ತಿಂಗಳ ಹಿಂದೆ ದುಡ್ಡುಕೊಟ್ಟು ಮತ ಹಾಕಿಸಿಕೊಂಡ ಪರಿಷತ್ ಸದಸ್ಯರ ಕ್ಷೇತ್ರ ಶಿಕ್ಷಕರೊಬ್ಬರು ನನ್ನ ಬಳಿ ಸಮಸ್ಯೆ ಹೇಳಿಕೊಂಡು ಬಂದಿದ್ದರೆ, ಅದೇ ಸಮಯಕ್ಕೆ ಈ ಶಾಸಕರೂ ಬಂದರು. ಆಗ ಸಮಸ್ಯೆ ಬಗೆಹರಿಸುವಂತೆ ಸದಸ್ಯರಿಗೆ ಹೇಳಿದಾಗ, **'ಏ ಮಿಸ್ಟರ್ 10 ಸಾವಿರ ಕೊಟ್ಟಿಲ್ಲವೇ, ಮತ್ತೇನು ಮಾಡಬೇಕು'** ಎಂದರು ಕೇವಲ

ಅದೊಂದೇ ಅಲ್ಲ, ಇತರ ಪರಿಷತ್ ಚುನಾವಣೆ ವೇಳೆಯೂ ರೂಪಾಯಿ 6 ರಿಂದ 10 ಸಾವಿರ ಕೊಟ್ಟೇ ಮತ ಪಡೆಯುವ ಸ್ಥಿತಿ ಬಂದಿದೆ ಇದು ಇಂದಿನ ಪ್ರಜಾಪ್ರಭುತ್ವದ ದುರಂತ.

**ಆಧಾರ**:ವಿಶ್ವವಾಣಿ, ದಿನಾಂಕ:19.11.2024
**ಲೇಖಕರು**:ರಂಜಿತ್. ಎಚ್. ಅಶ್ವತ್ಥ

## 2. ಭಾರತೀಯ ಮಹಿಳೆಯ ಆತ್ಮಬಂಧ ಭಾರತದ ಸಂವಿಧಾನ

ಭಾರತವು ಮಹಿಳೆಯರನ್ನು ಪೂಜ್ಯನೀಯ ಸ್ಥಾನದಲ್ಲಿರಿಸಿ ಗೌರವಿಸುತ್ತ ಬಂದಿರುವ ದೇಶ ಎಂದೇ ಜನಜನಿತ. "ಯಂತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ" ಎನ್ನುತ್ತ ಸ್ತ್ರೀಯರನ್ನು ಸ್ತುತಿಸಿ ಸಮಸ್ತ ಪ್ರಕೃತಿಗೆ ಹೋಲಿಸಿದ್ದರೂ ಈ ದೇಶದಲ್ಲಿ ಅತಿ ಹೆಚ್ಚು ಶೋಷಣೆಗೆ, ನಿರ್ಲಕ್ಷ್ಯಕ್ಕೆ ಅಪಮಾನಗಳಿಗೆ, ಅವಕಾಶ ವಂಚನೆಗೆ ಗುರಿಯಾದವರು ಸ್ತ್ರೀಯರೇ. ಈ ನೆಲದ ಎಲ್ಲ ಜಾತಿ, ಜನಾಂಗ, ಧರ್ಮ, ಲಿಂಗ, ವರ್ಣ, ವರ್ಗಗಳಲ್ಲಿ ಇದನ್ನು ಕಾಣಬಹುದು.

ಪುರುಷ ಪ್ರಾಧಾನ್ಯವಿರುವ ಭಾರತದ ಸಮಾಜದಲ್ಲಿ ಈ ಹಿಂದೆ ಜಾರಿಯಾಗಿದ್ದ ವಿವಿಧ ಕಾನೂನುಗಳು ಪುರುಷರ ಪರವಾಗಿಯೇ ನಿಲುವುಗಳನ್ನು ತಳೆಯುತ್ತಿದ್ದದ್ದು ಈಗ ಮುಚ್ಚಿಟ್ಟ ಸತ್ಯವಾಗಿ ಉಳಿದಿಲ್ಲ. ಇಂಥ ತಾರತಮ್ಯಗಳು ಮಹಿಳೆಯರ ಬದುಕಿನ ಘನತೆಯನ್ನು ನಿರಾಕರಿಸಿದ್ದು, ಹುಟ್ಟಿನ ಹಕ್ಕುಗಳನ್ನು ಕಸಿದುಕೊಂಡಿದ್ದು ಮತ್ತು ಹೀಗೆಯೆ ಬದುಕುವುದು ಮಹಿಳೆಯರಿಗೆ ಸೂಕ್ತ ಎಂದು ನಂಬಿಸಿಕೊಂಡು ಬಂದದ್ದು ಸುಳ್ಳಾಗಿಯೂ ಉಳಿದಿಲ್ಲ.

ಪ್ರಾಚೀನ ಭಾರತದಲ್ಲಿ ಮಹಿಳೆಯರು ಉನ್ನತ ಸ್ಥಾನಮಾನಗಳನ್ನು ಪಡೆದಿದ್ದರು, ಸಾಮ್ರಾಜ್ಯಗಳನ್ನು ಕಟ್ಟಿ ಆಳಿದ್ದರು, ಮಹತ್ತಿನ ಕೃತಿಗಳನ್ನು ರಚಿಸಿದ್ದರು ಎನ್ನುವುದೆಲ್ಲ ಬೆರಳೆಣಿಕೆಯ ಮಾಹಿತಿಗಳು. ಬೃಹತ್ ಸಂಖ್ಯೆಯಲ್ಲಿ ಭಾರತದ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ, ರಾಜಕಾರಣದಲ್ಲಿ, ಆಡಳಿತ ಕ್ಷೇತ್ರಗಳಲ್ಲಿ ಗಣನೀಯ ಕಾರ್ಯ ಕೈಗೊಂಡಿರುವುದನ್ನು ಇತಿಹಾಸವು ಮುಖ್ಯ ಪ್ರಮಾಣದಲ್ಲಿ ದಾಖಲಿಸಿಲ್ಲ. ಹಾಗೆ ದಾಖಲಿಸಲು ಅಗತ್ಯ ಪ್ರಮಾಣದ ದಾಖಲಾತಿಗಳು ದೊರಕುವುದಿಲ್ಲ.

ಭಾರತವು ಯುರೋಪಿನ ಸಾಮ್ರಾಜ್ಯಶಾಹಿಯ ಆಳ್ವಿಕೆಗೆ ಒಳಪಟ್ಟ ಸಂದರ್ಭದಲ್ಲಿ ದೊರೆತ ಇತರ ದೇಶಗಳ ಆಧುನಿಕತೆ, ಶಿಕ್ಷಣ, ಸಂಪರ್ಕ, ರಾಜನೀತಿ, ಆಡಳಿತ, ವೈಜ್ಞಾನಿಕ ನೈಪುಣ್ಯಗಳು ಭಾರತವನ್ನು ಇತರ ದೇಶಗಳ ಪ್ರಗತಿಯೊಡನೆ ತುಲನಾತ್ಮಕವಾಗಿ ನೋಡಿ ಚಿಂತಿಸಲು ಉದ್ದೀಪನಗೊಳಿಸಿದವು. ಈ ಸಂದರ್ಭದಲ್ಲಿ ಭಾರತವು ತನ್ನ ಮೇಲರಿಮೆಯನ್ನು ಪಕ್ಕಕ್ಕಿಟ್ಟು ಶೋಷಿತರ, ದಮನಿತರ ಅಸಹಾಯಕ ದನಿಹೀನರ ಪರವಾಗಿ ಚಿಂತಿಸುವಂತೆ ಮಾಡಿತು. ಅದುವರೆಗೂ ಯಾವುದನ್ನು ಸರಿ ಎಂದು ಭಾವಿಸಲಾಗಿತ್ತೋ ಅದು ಶೋಷಣೆಯಲ್ಲದೆ ಮತ್ತೇನೂ ಅಲ್ಲ ಎಂಬುದು ಅರಿವಾಯಿತು. ಇಂತಹ ಅರಿವನ್ನು ಪಡೆದ ಸುಶಿಕ್ಷಿತ ಮಾನವೀಯ ಚಿಂತಕರು ಈ ದೇಶವನ್ನು ಮತ್ತೊಂದು ಬಗೆಯಲ್ಲಿ ನಿರ್ಮಿಸಲು ತೊಡಗಿದರು. ಭಾರತವನ್ನು ಹೊಸ ದಿಕ್ಕಿನಲ್ಲಿ ನಡೆಯುವಂತೆ ಮಾಡಲು ಶಿಕ್ಷಣದ ಅವಶ್ಯಕತೆ, ಕಾನೂನಿನ ಅರಿವು, ಸಾಮಾಜಿಕ ಹಾಗೂ ಆಡಳಿತಾತ್ಮಕ ಸುಧಾರಣೆಗಳು ಎಷ್ಟು ಮುಖ್ಯ ಎಂಬುದನ್ನು ಮನಗಂಡ ಸಮಾಜ ಸುಧಾರಕರು ಭಾರತದ ಅಮೂಲಾಗ್ರ ಬದಲಾವಣೆಗೆ ಶ್ರಮಿಸಿದರು. ಸ್ವತ: ಆಧುನಿಕ ವಿದ್ಯಾಭ್ಯಾಸದಿಂದ ತಿಳಿವು ಪಡೆದವರು ಕಾನೂನಿನ ಬದಲಾವಣೆಗೆ ಮುಂದಡಿ ಇಟ್ಟರು.

ಹೀಗೆ ನವಭಾರತದ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದವರಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಮೊದಲ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಭಾರತದ ಜಡ್ಡುಗಟ್ಟಿದ ಸಮಾಜವನ್ನು ಪುನರ್‌ನಿರ್ಮಾಣ ಮಾಡುವಲ್ಲಿ ಅರ್ಥಶಾಸ್ತ್ರಜ್ಞರಾಗಿ, ನ್ಯಾಯಶಾಸ್ತ್ರಜ್ಞರಾಗಿ, ಮುತ್ಸದ್ದಿ ರಾಜಕಾರಣಿಯಾಗಿ, ಸಮಾಜ ಸುಧಾರಕರಾಗಿ ಡಾ.ಅಂಬೇಡ್ಕರ್ ತೊಡಗಿಸಿಕೊಂಡ ಪರಿ ಅತ್ಯಂತ ಶ್ಲಾಘನೀಯ. ಅವರು ಭಾರತದ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ, ಸಂವಿಧಾನ ಶಿಲ್ಪಿಯಾಗಿ ದೇಶದ ಅಸ್ಪೃಶ್ಯತೆಯ ನಿರ್ಮೂಲನೆಯಲ್ಲಿ ಎಲ್ಲಾ ಜಾತಿ, ಜನಾಂಗ, ಧರ್ಮ ಲಿಂಗ, ವರ್ಣ, ವರ್ಗಗಳಲ್ಲಿರುವ ತಾರತಮ್ಯಗಳನ್ನು ಕಾನೂನು ಬಾಹಿರಗೊಳಿಸಲು ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಸಂವಿಧಾನವನ್ನು ರಚಿಸಿ ಅದರ ಭಾಗವಾಗಿ ಅಮರರಾದರು.

ಭಾರತ ಸಂವಿಧಾನ ರಚನಾ ಸಭೆಯಲ್ಲಿ 389 ಸದಸ್ಯರಿದ್ದು ಅದರಲ್ಲಿ 15 ಮಹಿಳಾ ಸದಸ್ಯರಿದ್ದು ಅಸಮಾನ ಪ್ರಾತಿನಿಧಿತ್ವ ಎನಿಸಿದರೂ, ದೇಶದ ಸಂವಿಧಾನವನ್ನು ರೂಪಿಸಲು ಅವರ ಕೊಡುಗೆಯನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. ಏಕೆಂದರೆ 15 ಮಹಿಳಾ ಸದಸ್ಯರಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು, ಸಮಾಜ ಸುಧಾರಕರು, ವಕೀಲರೇ ಮೊದಲಾದವರಿದ್ದು, ಸಮಗ್ರವಾದ ಸಂವಿಧಾನವನ್ನು ರಚಿಸುವಲ್ಲಿ ಗಮನಾರ್ಹ ಕೊಡುಗೆ ನೀಡಿದ್ದಾರೆ. ಸಂವಿಧಾನ ರಚನಾ ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸಿ ಮಹಿಳೆಯರಿಗೆ ಈ ಸಮಾಜದಲ್ಲಿ ಆಗುತ್ತಿರುವ ಅನ್ಯಾಯಗಳ ಕಡೆಗೆ ಕಣ್ತೆರೆಯುವಂತೆ ಮಾಡಿ ಸಾಮಾಜಿಕ ತಾರತಮ್ಯದ ಕಟುವಾಸ್ತವಗಳನ್ನು ಮನವರಿಕೆ ಮಾಡಿಕೊಟ್ಟರು. ಕೆಲವು ಶೋಷಿತ ಸಮುದಾಯಗಳು ಜಾತಿ ಹಾಗೂ ವರ್ಗಗಳ ಕಾರಣಕ್ಕೆ ಅಸ್ಪೃಶ್ಯತೆಯನ್ನು ಅನುಭವಿಸಿದರೆ ಮಹಿಳೆಯರು ಹುಟ್ಟಿನ ಕಾರಣಕ್ಕಾಗಿ 2ನೇ ದರ್ಜೆಯ ಪ್ರಜೆಗಳಾಗಿ ಅಸ್ಪೃಶ್ಯತೆಯ ಜೊತೆಗೆ ಶೋಷಣೆಗೆ ಒಳಗಾಗುವುದನ್ನು ಪರಿಗಣಿಸಿ ಇಂತಹ ತಾರತಮ್ಯಗಳನ್ನು ನಿವಾರಿಸುವ ಸಲುವಾಗಿ ರಚನಾ ದೃಷ್ಟಿಯಿಂದ ಅತ್ಯಂತ ಸಮರ್ಥ ವಾದ ಹಾಗೂ ಕಾನೂನು ಜಾರಿಗೊಳಿಸುವ ನಿಟ್ಟಿನಲ್ಲಿ ಸುಭದ್ರವಾದ ಸಮಗ್ರ ಸಂವಿಧಾನವನ್ನು ರಚಿಸಲು ಕಾರಣೀಭೂತರಾದರು.

ಹೀಗೆ ಹಲವಾರು ಧೀಮಂತರ ಒಕ್ಕೊರಲಿನ ಹಕ್ಕೋತ್ತಾಯಗಳಿಂದ ಭಾರತದ ಸಂವಿಧಾನವು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ ಸಮಭಾವದ, ಜಾತ್ಯತೀತ, ವರ್ಗ, ವರ್ಣ, ಲಿಂಗ ತಾರತಮ್ಯಗಳನ್ನು ತೊಡೆದುಹಾಕಲು ಕಾನೂನುಗಳನ್ನು ರೂಪಿಸಿದ ಸಂವಿಧಾನವಾಗಿ ಪ್ರಪಂಚಕ್ಕೆ ಮಾದರಿಯಾಗಿ ನಿಂತಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ಸಮಗ್ರ ಸಂವಿಧಾನವನ್ನು ಭಾರತದ ಸಮಸ್ತ ನಾಗರಿಕರಿಗೆ ರೂಪಿಸಿ ಅಧಿನಿಯಮಿಸಿ ಅರ್ಪಿಸಿಕೊಳ್ಳಲಾಗಿದೆ. ಇಲ್ಲಿ ಹೆಣ್ಣು–ಗಂಡು, ಮೇಲು–ಕೀಳು, ಶ್ರೇಷ್ಠ– ಕನಿಷ್ಠ ಇತ್ಯಾದಿ ಭೇದಭಾವಗಳಿಗೆ ಅವಕಾಶವಿಲ್ಲ. ಎಲ್ಲರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ ವಿಶ್ವಾಸ, ಧರ್ಮ ಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ; ಸ್ಥಾನಮಾನ ಹಾಗೂ ಅವಕಾಶ ಸಮಾನತೆಗಳನ್ನು ದೊರೆಯುವಂತೆ ಮಾಡುವ ಮೂಲಕ ವ್ಯಕ್ತಿ ಗೌರವವನ್ನು ಕಾಪಾಡುವ ಸಲುವಾಗಿ ಸಂವಿಧಾನವು ಅಖಂಡವಾಗಿ ನಿಲ್ಲುತ್ತದೆ.

ಅವಕಾಶ ವಂಚಿತರಾದ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿ ದೌರ್ಜನ್ಯಗಳ ವಿರುದ್ಧ ಕಾನೂನಾತ್ಮಕವಾಗಿ ಹೋರಾಡಲು ಹಾಗೂ ಬಾಲ್ಯವಿವಾಹ, ವೈಧವ್ಯದ ಕಠೋರತೆಗಳನ್ನು ಪ್ರತಿಭಟಿಸಲು ಮತ್ತು ಶಿಕ್ಷಣ, ದುಡಿಮೆ, ಸಮಾನ ವೇತನ, ಸಮಾನ ಅವಕಾಶಗಳಿಗಾಗಿ ಹಕ್ಕೊತ್ತಾಯ ಮಾಡಲು, ಮತ ಚಲಾವಣೆಯ ಅಧಿಕಾರ ಪಡೆಯಲು, ಆಸ್ತಿಹಕ್ಕುಗಳ ಕುರಿತು ದನಿಯೆತ್ತಲು ಸಂವಿಧಾನವು ದಾರಿದೀಪವಾಗಿದೆ. ಮಹಿಳೆಯರಿಗೆ ಮೂಲಭೂತ ಹಕ್ಕುಗಳನ್ನು ಅಧಿಕಾರಯುತವಾಗಿ ಪಡೆಯಲು ಭಾರತದ ಸಂವಿಧಾನವು ಸಮರ್ಥನೀಯವಾಗಿದೆ. ಮಹಿಳಾ ಸಬಲೀಕರಣವನ್ನು ಎತ್ತಿಹಿಡಿಯುವ ಸಂವಿಧಾನವು ಮಹಿಳೆಯರಿಗಾಗಿ ಹಲವಾರು ಅಧಿನಿಯಮಗಳನ್ನು, ಆಯೋಗವು ಕಾನೂನುಗಳನ್ನು ರೂಪಿಸಿದೆ. ಭಾರತ ಸಂವಿಧಾನದ ಹಲವಾರು ವಿಧಿಗಳು ಮಹಿಳೆಯರು ಪುರುಷರ ಸರಿಸಮಾನರು, ಹಕ್ಕುಳ್ಳವರು ಎನ್ನುವುದನ್ನು ಪ್ರತಿಪಾದಿಸುತ್ತವೆ. ಇದರೊಡನೆ ಅನಾದಿಕಾಲದಿಂದಲೂ ಸಂಪ್ರದಾಯ ರೂಢಿ, ನಿಯಮಗಳ ಹೆಸರಿನಲ್ಲಿ ಇನ್ನಿಲ್ಲದಂತೆ ಶೋಷಣೆಗೆ ಒಳಗಾದ ಹಾಗೂ ಶೋಷಿತರಾಗುತ್ತಿದ್ದೇವೆ ಎಂಬುದರ ಅರಿವೇ ಇಲ್ಲದಂತೆ. ಬದುಕುತ್ತಾ ಬಂದ ಮಹಿಳೆಯರ ಘನತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಂವಿಧಾನವು ಕಠಿಣ ಕಾನೂನುಗಳನ್ನು ರೂಪಿಸುವ ಮೂಲಕ ಕ್ರಾಂತಿಕಾರಿ ಎನಿಸಿತು. ಆದ್ದರಿಂದಲೇ ಭಾರತದ ಸಂವಿಧಾನವನ್ನು ಭಾರತೀಯ ಮಹಿಳೆಯ ಆತ್ಮಬಂಧು ಎಂದು ಕರೆದುದು.

2024ರ ನವೆಂಬರ್ 26 ರ ಈ ದಿನ ಭಾರತ ಸಂವಿಧಾನ ರಚನೆ ಹಾಗೂ ಜಾರಿಯ ಕುರಿತು ಅವಲೋಕಿಸಿದಾಗ, 1949ರ ನವೆಂಬರ್ 26ರಂದು ನಡೆದ ಭಾರತದ ಸಂವಿಧಾನ ಸಭೆಯಲ್ಲಿ ಸಂವಿಧಾನವನ್ನು ಅಂಗೀಕರಿಸಿದ್ದನ್ನು ಸ್ಮರಿಸಿದಾಗ 75 ವರ್ಷಗಳ ಹಿಂದೆ ಎಂಥಾ ಮಹೋನ್ನತ ಘಟನೆಗೆ ಆ ಸಭೆಯು ಕಾರಣೀಭೂತವಾಯಿತೆಂದು ಅರ್ಥವಾಗುತ್ತದೆ. ಎಷ್ಟೆಲ್ಲಾ ಬಗೆಯ ದಮನಿತರ, ಶೋಷಿತರ, ದನಿಹೀನರ, ಅವಕಾಶ ವಂಚಿತರ ಬದುಕಿಗಾಗಿ ಸಂವಿಧಾನವು ದೃಢವಾಗಿ ನಿಂತಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಇಂದಿನ ಶೈಕ್ಷಣಿಕ ಕ್ರಾಂತಿ, ಔದ್ಯೋಗಿಕ ಪ್ರಗತಿ, ಅವಕಾಶಗಳ ಸುರಿಮಳೆ, ದಬ್ಬಾಳಿಕೆ

ಹಾಗೂ ಶೋಷಣೆಗಳಲ್ಲಿನ ಗಣನೀಯ ಇಳಿಕೆಗೆ ಸಂವಿಧಾನದ ನೀತಿ ನಿರೂಪಣೆಗಳೇ ಮೂಲ ಕಾರಣ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ.

ಸಂವಿಧಾನವು ಕೇವಲ ಮಹಿಳೆಯರಿಗಲ್ಲದೇ ದೇಶದ ಸಮಸ್ತ ನಾಗರಿಕರಿಗೆ ಘನತೆಯ ಬದುಕನ್ನು ನೀಡಿದೆ. ಸಂವಿಧಾನ ಎನ್ನುವುದು ಅರಿವು. ಸಂವಿಧಾನ ಎನ್ನುವುದು ಹಕ್ಕು ಸಂವಿಧಾನ ಎನ್ನುವುದು ಜಾಗೃತಿ. ಸಂವಿಧಾನವೇ ಭಾರತದ ನಾಗರಿಕರ ಮೂಲಭೂತ ಅಸ್ತಿತ್ವ ಎನ್ನುವುದನ್ನು ಇಂದಿನ ಸಂವಿಧಾನ ದಿನಾಚರಣೆಯಂದು ಪುನರ್ ಮನನ ಮಾಡಿಕೊಳ್ಳಬೇಕಾದದ್ದು ಪ್ರತಿಯೊಬ್ಬ ಭಾರತೀಯ ಆದ್ಯ ಧ್ಯೇಯವಾಗಿರುತ್ತದೆ. ಸಂವಿಧಾನವನ್ನು ಗೌರವಿಸುವ ಮೂಲಕ ಈ ದೇಶದ ಕಾನೂನಿಗೆ ಬದ್ಧರಾಗಿ ನಡೆದುಕೊಂಡು ಭಾರತದ ಸಮಗ್ರತೆ ಹಾಗೂ ವ್ಯಕ್ತಿಗೌರವಗಳನ್ನು ಕಾಪಾಡುವುದಕ್ಕೆ ಶ್ರಮಿಸೋಣ. ಮೂಲಭೂತ ಹಕ್ಕುಗಳೊಂದಿಗೆ ಸಂವಿಧಾನವು ನಮಗೆ ನಿರೂಪಿಸಿರುವ ಕರ್ತವ್ಯಗಳನ್ನು ಮರೆಯದೆ ನಿರ್ವಹಿಸೋಣ.

**ಆಧಾರ:**ವಿಜಯವಾಣಿ, ದಿನಾಂಕ:26.11.2024

**ಲೇಖಕರು:ಡಾ.ಕೆ.ಎಂ.ವಸುಂಧರಾ**

## 3. ಭಾರತ ಸಂವಿಧಾನ: ಜಗತ್ತಿಗೇ ದಾರಿದೀಪ

ಭಾರತ ಸಂವಿಧಾನಕ್ಕೀಗ 75 ವಸಂತಗಳ ಸಂಭ್ರಮ. ಸಂವಿಧಾನ ಕರಡು ರಚನಾ ಸಮಿತಿಯು ರಚಿಸಿದ್ದ ಭಾರತದ ಸಂವಿಧಾನವನ್ನು 1949ರ ನವೆಂಬರ್, 26ರಂದು ಅಂಗೀಕರಿಸಲಾಗಿತ್ತು. ಜಗತ್ತಿನಲ್ಲಿಯೇ ಅತ್ಯಂತ ಶಕ್ತಿಶಾಲಿ ಪ್ರಜಾಪ್ರಭುತ್ವವಿರುವ, ಬಹುತ್ವವನ್ನು ಒಪ್ಪಿಕೊಂಡಿರುವ, ಹೆಚ್ಚು ಜನಸಂಖ್ಯೆ ಇರುವ ಭಾರತಕ್ಕೆ ನವೆಂಬರ್ 26ರ ದಿನ ಅತೀವ ಸಂಭ್ರಮದ್ದು ಎಂದರೆ ತಪ್ಪಾಗುವುದಿಲ್ಲ.

ಈ 75 ವಸಂತಗಳ ಪ್ರಯಾಣದ ಹಾದಿಯು ಸುಗಮವಾಗಿಯೇನೂ ಇರಲಿಲ್ಲ. ಹಲವು ಏರಿಳಿತಗಳನ್ನು ಈ ಪ್ರಯಾಣ ಕಂಡಿದೆ. ಆದರೆ, ಭಾರತವು ಸಾಧಿಸಿದ ಪ್ರಗತಿಯನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ. ಶಕ್ತಿಯುತ ಆರ್ಥಿಕತೆ ಹೊಂದಿರುವ ಜಗತ್ತಿನ ಮೊದಲ ಐದು ದೇಶಗಳ ಪಟ್ಟಿಯಲ್ಲಿ ಭಾರತವೂ ಸ್ಥಾನ ಪಡೆದಿದೆ. ಇಂಥ ಸಾಧನೆಯ ಜೊತೆಯಲ್ಲಿಯೇ ಭಾರತವು ತನ್ನ ಸಂವಿಧಾನ, ಏಕತೆ, ಸಮಗ್ರತೆಯನ್ನು ಕಾಪಾಡಿಕೊಂಡಿದೆ.

ಭಾರತ ಸಂವಿಧಾನವು ಅತ್ಯಂತ ಬಾಳಿಕೆಯ ಗುಣ ಹೊಂದಿದೆ ಎಂದು ಅಧ್ಯಯನಗಳು ತೋರಿಸಿವೆ. ತಿದ್ದುಪಡಿಗಳಿಗೆ ಅವಕಾಶವಿರುವ, ಕಾಲಕ್ಕ ತಕ್ಕಂತೆ ಹೊಂದಿಕೊಳ್ಳುವ ಗುಣ ಇರುವ ಕಾರಣದಿಂದಲೇ ನಮ್ಮ ಸಂವಿಧಾನಕ್ಕೆ ಹೆಚ್ಚಿನ ಆಯಸ್ಸು ಪ್ರಾಪ್ತಿಯಾಗಿದೆ. ಕೆಲವು ದೇಶಗಳ ಸಂವಿಧಾನಕ್ಕೆ ಈ ಎರಡೂ ಗುಣಗಳು ಇರುವುದಿಲ್ಲ. ನಮ್ಮ ಸಂವಿಧಾನಕ್ಕೆ 106 ತಿದ್ದುಪಡಿಗಳನ್ನು ಮಾಡಲಾಗಿದೆ. ಇದೇ ವಿಚಾರವನ್ನು ಮುಂದಿಟ್ಟುಕೊಂಡು ಕೆಲವು ಪಾಶ್ಚಿಮಾತ್ಯ ವಿದ್ವಾಂಸರು ನಮ್ಮ ಸಂವಿಧಾನದ ಕುರಿತು ಅಪಹಾಸ್ಯವನ್ನೂ ಮಾಡಿದ್ದಾರೆ. ಆದರೆ, ತಿದ್ದುಪಡಿಗೆ ಅವಕಾಶ ಇರುವ ಕಾರಣದಿಂದಲೇ ನಮ್ಮ ಸಂವಿಧನಕ್ಕೆ ಹೆಚ್ಚು ಬಾಳಿಕೆಯ ಗುಣ ಪ್ರಾಪ್ತವಾಗಿದೆ ಹಾಗೂ ಇದರಿಂದಲೇ ಭಾರತದ ಏಕತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿದೆ. ತಮ್ಮ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎಂದು ಭಾರತೀಯರಿಗೆ ತಿಳಿದಿದೆ. ಆದರೆ, ಪಾಶ್ಚಿಮಾತ್ಯರಿಗೆ ಇದು ತಿಳಿದಿಲ್ಲ.

ಹೆಚ್ಚಿನ ಸಂವಿಧಾನಗಳು 15 ರಿಂದ 19 ವರ್ಷಗಳಲ್ಲೇ ಅಪ್ರಸ್ತುತವಾಗುತ್ತವೆ. 'ಲಿಖಿತ ಸಂವಿಧಾನದ ಜೀವಿತಾವಧಿ' ಎನ್ನುವ ವಿಷಯಕ್ಕೆ ಸಂಬಂಧಿಸಿ ಷಿಕಾಗೊ ವಿಶ್ವವಿದ್ಯಾಲಯದ ಕಾನೂನು ಶಾಲೆಯು ಅಧ್ಯಯನ ನಡೆಸಿ, ವಿಷಯ ಮಂಡಿಸಿದೆ. ಹೆಚ್ಚಿನ ಸಂವಿಧಾನಗಳ ಸರಾಸರಿ ಜೀವಿತಾವಧಿಯು 17 ವರ್ಷಗಳು ಮಾತ್ರ ಆಗಿದೆ' ಎನ್ನುತ್ತದೆ ಈ ಅಧ್ಯಯನ. 'ಅಂಗೀಕಾರಗೊಂಡ 18ನೇ ವರ್ಷಕ್ಕೆ ಜಗತ್ತಿನ ಅರ್ಧದಷ್ಟು ಸಂವಿಧಾನಗಳು ತಮ್ಮ ಪ್ರಸ್ತುತತೆ ಕಳೆದುಕೊಳ್ಳುತ್ತವೆ. 50 ವರ್ಷಗಳವರೆಗೆ ತಮ್ಮ ಪ್ರಸ್ತುತತೆಯನ್ನು ಶೇ 19 ರಷ್ಟು ಸಂವಿಧಾನಗಳು ಮಾತ್ರ ಉಳಿಸಿಕೊಳ್ಳುತ್ತವೆ. ಅಂಗೀಕಾರಗೊಂಡ ಒಂದೇ ವರ್ಷದಲ್ಲಿ ಶೇ 7 ರಷ್ಟು ಸಂವಿಧಾನಗಳು ಸಾಯುತ್ತವೆ' ಎಂದು ಅಧ್ಯಯನದಲ್ಲಿ ಹೇಳಲಾಗಿದೆ. ಈ

ಕಾರಣಕ್ಕಾಗಿಯೇ, ನಮ್ಮ ಸಂವಿಧಾನಕ್ಕೆ 75 ವಸಂತ ತುಂಬಿರುವುದು ಅತ್ಯಂತ ಸಂತಸದ ವಿಚಾರ. ಜಗತ್ತಿನ 80ಕ್ಕೂ ಹೆಚ್ಚು ಸಂವಿಧಾನಗಳ ಪರಾಮರ್ಶೆಯನ್ನು ನಡೆಸಿದಾಗ ಹಲವಾರು ಮಹತ್ವದ ಅಂಶಗಳು ನನ್ನ ಗಮನಕ್ಕೆ ಬಂದವು. ಪ್ರಜಾಪ್ರಭುತ್ವದ ಮೂಲಭೂತ ಅಂಶಗಳು ಹಾಗೂ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ನೀಡಿರುವ ಮೂಲಭೂತ ಹಕ್ಕುಗಳ ಕಾರಣಕ್ಕಾಗಿ ಭಾರತದ ಸಂವಿಧಾನವು ಬೇರೆಲ್ಲಾ ಸಂವಿಧಾನಗಳಿಗಿಂತ ಮಿಗಿಲಾಗಿ ನಿಲ್ಲುತ್ತದೆ. ಇಂಥ ಹಕ್ಕುಗಳು ಜಗತ್ತಿನ ಬೇರೆ ಯಾವ ಸಂವಿಧಾನದಲ್ಲಿಯೂ ಇಲ್ಲ ಎಂಬುದು ನನಗೆ ಮನವರಿಕೆಯಾಯಿತು.

ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳ ಕುರಿತೇ ನೋಡಿ, ಕಾನೂನಿನ ಮುಂದೆ ಎಲ್ಲರೂ ಸಮಾನರು ಮತ್ತು ಕಾನೂನಿನ ಮೂಲಕ ರಕ್ಷಣೆ ಪಡೆದುಕೊಳ್ಳುವ ಎಲ್ಲರಿಗೂ ಸಮಾನ ಹಕ್ಕಿದೆ (ವಿಧಿ 14); ಧರ್ಮ, ಜಾತಿ, ಲಿಂಗ, ಜನ್ಮಸ್ಥಳದ ಆಧಾರದಲ್ಲಿ ತಾರತಮ್ಯ ಮಾಡುವಂತಿಲ್ಲ (ವಿಧಿ 15); ಸರ್ಕಾರಿ ಉದ್ಯೋಗದಲ್ಲಿ ತಾರತಮ್ಯ ಮಾಡುವಂತಿಲ್ಲ (ವಿಧಿ 16); ಎಲ್ಲ ರೀತಿಯ ಸ್ವಾತಂತ್ರ್ಯ (ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘ–ಸಂಸ್ಥೆ ಸ್ಥಾಪಿಸುವ ಸ್ವಾತಂತ್ರ್ಯ, ದೇಶದಲ್ಲಿ ಎಲ್ಲಿ ಬೇಕಾದರೂ ಓಡಾಡುವ ಸ್ವಾತಂತ್ರ್ಯ, ಯಾವುದೇ ವೃತ್ತಿಯನ್ನು ಮಾಡುವ ಸ್ವಾತಂತ್ರ್ಯ ದೇಶದಲ್ಲಿ ಎಲ್ಲಿ ಬೇಕಾದರೂ ವಾಸಿಸುವ ಸ್ವಾತಂತ್ರ್ಯ; ವಿಧಿ 19); ಯಾವುದೇ ನಂಬಿಕೆಯನ್ನು ಅನುಸರಿಸುವ ಹಾಗೂ ಯಾವುದೇ ಧರ್ಮವನ್ನು ಆಚರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯ (ವಿಧಿ 25); ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ (ವಿಧಿ 26); ಎಲ್ಲ ರೀತಿಯ ಅಲ್ಪಸಂಖ್ಯಾತರು (ಭಾಷೆ ಅಥವಾ ಧರ್ಮ) ತಮ್ಮದೇ ಶೈಕ್ಷಣಿಕ ಸಂಸ್ಥೆ ಸ್ಥಾಪಿಸುವ ಹಾಗೂ ಅದರ ಆಡಳಿತ ನಡೆಸುವ ಸ್ವಾತಂತ್ರ್ಯ (ವಿಧಿ 30). ಹೀಗೆ ಹಲವು ಸ್ವಾತಂತ್ರ್ಯಗಳನ್ನು ಅಲ್ಪಸಂಖ್ಯಾತರಿಗೆ ನೀಡಲಾಗಿದೆ.

ಈ ಎಲ್ಲದಕ್ಕೂ ಮಿಗಿಲಾಗಿ, ಸರ್ಕಾರದಿಂದ ಸಂಪೂರ್ಣವಾಗಿ ಧನಸಹಾಯ ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಪಾಠ ಮಾಡುವುದನ್ನು ಸಂವಿಧಾನದ 28ನೇ ವಿಧಿ ನಿರ್ಬಂಧಿಸುತ್ತದೆ. ನಮ್ಮ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗಾಗಿ ಹಾಗೂ ವೈಯಕ್ತಿಕ ನೆಲಗಟ್ಟಿನಲ್ಲಿ ಇಷ್ಟೊಂದು ಹಕ್ಕುಗಳನ್ನು ಯಾಕಾಗಿ ನೀಡಲಾಗಿದೆ ಎಂದು ಯಾರಿಗಾದರೂ ಆಶ್ಚರ್ಯವಾಗಬಹುದು. ಹಾಗಾದರೆ, ಜನಾಂಗೀಯ, ಧಾರ್ಮಿಕ, ಭಾಷಿಕ, ಸಾಮಾಜಿಕ ಹಾಗೂ ರಾಜಕೀಯ ವೈವಿಧ್ಯವನ್ನು ಗೌರವಿಸಲು ಮತ್ತು ದೇಶದ ಎಲ್ಲ ವರ್ಗದ ಜನರು ಉದಾರವಾದಿ ಹಾಗೂ ಪ್ರಜಾಪ್ರಭುತ್ವವಾದಿ ವಾತಾವರಣದಲ್ಲಿ ಜೀವಿಸಲು ಅನುವು ಮಾಡಿಕೊಡಲು ಇಷ್ಟೆಲ್ಲ ಹಕ್ಕುಗಳನ್ನು ನೀಡಲಾಗಿದೆಯೇ? ಅಲ್ಪಸಂಖ್ಯಾತರಿಗೆ ಯಾಕಾಗಿ ಇಷ್ಟೊಂದು ಹಕ್ಕುಗಳನ್ನು ನೀಡಲಾಗಿದೆ ಎಂಬುದಕ್ಕೆ ಸರಳ ಉತ್ತರವಿದೆ. ಭಾರತವು ಬಹಳ ಹಿಂದಿನಿಂದಿಲೂ ಜಾತ್ಯತೀತವಾದ ಹಾಗೂ ಪ್ರಜಾಪ್ರಭುತ್ವವಾದಿ ರಾಷ್ಟ್ರ, ಇದಕ್ಕೆ ಋಗ್ವೇದ ಕಾಲದಲ್ಲಿ ಸಾಕ್ಷ್ಯಗಳು ದೊರಕುತ್ತವೆ. ಸಾವಿರಾರೂ ವರ್ಷಗಳ ಹಿಂದಿನ ಮಹಾ ಉಪನಿಷತ್‌ನಲ್ಲಿ ಹಾಗೂ ಇತರ ಗ್ರಂಥಗಳಲ್ಲಿಯೂ ಇದಕ್ಕೆ ಸಾಕ್ಷ್ಯಗಳಿವೆ.

ಜಾತ್ಯತೀತ ಹಾಗೂ ಪ್ರಜಾಪ್ರಭುತ್ವ ಸಿದ್ಧಾಂತವನ್ನು ನಾವು ಬ್ರಿಟಿಷರಿಂದ ಹಾಗೂ ಅಮೇರಿಕದವರಿಂದ ಎರವಲು ಪಡೆದುಕೊಂಡಿದ್ದೇವೆ ಎಂಬುದನ್ನು ವಸಾಹತುಶಾಹಿ ಕಾಲಘಟ್ಟದಲ್ಲಿ ಹಾಗೂ ನೆಹರೂ ಆಡಳಿತದ ಅವಧಿಯಲ್ಲಿ ಹೇಳಲಾಯಿತು. ಆದರೆ, ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವಾದಿ ಪರಂಪರೆ ಇತ್ತು.

ಭಾರತದಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಪ್ರಜಾಪ್ರಭುತ್ವ ಇತ್ತು ಎನ್ನುವ ಕುರಿತು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಡಾ:ಬಿ.ಆರ್.ಅಂಬೇಡ್ಕರ್ ಕೂಡ ಸಾಕ್ಷ್ಯಗಳ ಆಧಾರದಲ್ಲಿಯೇ ಮಾತನಾಡಿದ್ದಾರೆ. ಭಾರತಕ್ಕೆ ಪ್ರಜಾಪ್ರಭುತ್ವವು ಹೊಸತಲ್ಲ ಎಂದಿದ್ದಾರೆ. ಭಾರತಕ್ಕೆ ರಾಜಕೀಯ ಪ್ರಜಾಪ್ರಭುತ್ವ ಮಾತ್ರ ಸಾಕಾಗುವುದಿಲ್ಲ. ಭಾರತದ ಜನರಿಗೆ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವವೂ ಬೇಕು ಎಂದು ಅಂಬೇಡ್ಕರ್ ಹೇಳಿದ್ದರು. ಕರ್ನಾಟಕದಲ್ಲಿ ದೇವರಾಜ ಅರಸು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ (1970) ಸಾಮಾಜಿಕ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚು ಒತ್ತು ನೀಡಿದ್ದರು. ಅಂಬೇಡ್ಕರ್ ಅವರ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವದ ಮಾದರಿಯನ್ನು ನಮ್ಮ ಸರ್ಕಾರಗಳು ಅನುಸರಿಸಿದವು ಎನ್ನುವುದನ್ನು ಅರಸು ಅವರ ಆಡಳಿತ ಅವಧಿಯು ತೋರಿಸುತ್ತದೆ.

ವಿವಿಧ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿದ ಬಳಿಕ ನಾನು ಎಂಟು ಅಂಶಗಳನ್ನು ಒಳಗೊಂಡ ಪ್ರಜಾಪ್ರಭುತ್ವ ಸೂಚ್ಯಂಕವನ್ನು ರೂಪಿಸಿದ್ದೇನೆ. ಈ ಎಲ್ಲ ಅಂಶಗಳನ್ನು ಪೂರೈಸಿದ ದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಜಾಪ್ರಭುತ್ವವಿದೆ ಎಂದರ್ಥ. ಅವು ಇಂತಿವೆ:

1. ಅಭಿವ್ಯಕ್ತಿ ಹಾಗೂ ಇತರ ಮೂಲಭೂತ ಸ್ವಾತಂತ್ರ್ಯಗಳು ಮತ್ತು ಮೂಲಭೂತ ಹಕ್ಕುಗಳನ್ನು ರಕ್ಷಿಸುವಲ್ಲಿ ಬದ್ಧತೆ.
2. ಜಾತ್ಯತೀತ ತತ್ವಕ್ಕೆ ಬದ್ಧತೆ.
3. ಸರ್ಕಾರ ಮತ್ತು ಧರ್ಮ ಪ್ರತ್ಯೇಕವಾಗಿರಬೇಕು.
4. ಗಣರಾಜ್ಯ.
5. ಕಾನೂನಿನ ಮುಂದೆ ಎಲ್ಲರೂ ಸಮಾನರು ಹಾಗೂ ಕಾನೂನಿನಡಿ ಎಲ್ಲರಿಗೂ ರಕ್ಷಣೆ ಪಡೆದುಕೊಳ್ಳುವ ಸಮಾನ ಹಕ್ಕು.
6. ಜೀವಿಸುವ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು.
7. ಲಿಂಗ ಸಮಾನತರ.
8. ಅರ್ಹ ಎಲ್ಲರಿಗೂ ಮತದಾನದ ಹಕ್ಕು.

ಭಾರತದ ಸಂವಿಧಾನವು ಈ ಎಲ್ಲ ಅಂಶಗಳನ್ನು ಒಳಗೊಂಡಿದೆ. ಆದ್ದರಿಂದಲೇ ನಮ್ಮ ಸಂವಿಧಾನವು ಬೇರೆಲ್ಲಾ ಸಂವಿಧಾನಗಳಿಗಿಂತ ಮಿಗಿಲಾಗಿದೆ. ದೇಶದಲ್ಲಿ ಏನಾದರೂ ಸಮಸ್ಯೆಯಾದರೆ, ಅನಾಹುತವಾದರೆ ಅದಕ್ಕೆ ನಾವು ಕೆಟ್ಟ ಸಂವಿಧಾನವನ್ನು ಹೊಂದಿದ್ದೇವೆ ಎಂಬುದು ಕಾರಣವಲ್ಲ. ಇದಕ್ಕೆ ಕಾರಣ ವ್ಯಕ್ತಿಗಳಲ್ಲಿನ ಲೋಪ ಎಂದು ನಾವು ಹೇಳಬೇಕಾಗುತ್ತದೆ. ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಯಶಸ್ಸುಗಳಿಸಬೇಕು ಎಂದಾದರೆ, ಅಂಬೇಡ್ಕರ್ ಅವರು ಹೇಳಿದ ಮಾತನ್ನು ಮರೆಯಬಾರದು.

**ಆಧಾರ:**ಪ್ರಜಾವಾಣಿ, ದಿನಾಂಕ:27.11.2024
**ಲೇಖಕರು:ಎ. ಸೂರ್ಯಪ್ರಕಾಶ್**

## 4. ಓದಲೇಬೇಕಾದ ಪುಸ್ತಕ– ಸಂವಿಧಾನ ಬದಲಾಯಿಸಿದ್ದು ಯಾರು

ಈ ಪುಸ್ತಕವನ್ನು ಸುಮ್ಮನೆ ಕೈಗೆತ್ತಿಕೊಂಡರೂ ಸಾಕು, ಮುಗಿಯುವವರೆಗೆ ಕೆಳಗಿಡಲು ಮನಸಾಗದು! ಪ್ರತಿಭಾವಂತರನ್ನು ತುಳಿಯುವುದರಿಂದ ದೇಶಕ್ಕೆ ಅದೆಷ್ಟು ನಷ್ಟವಾಗುತ್ತದೆ ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುವ ಕಲೆ ಕೃತಿಕಾರ ವಿಕಾಸ್‌ಕುಮಾರ್‌ರಿಗೆ ಸಿದ್ದಿಸಿದೆ.

ಚುನಾವಣೆ ಬರುತ್ತಿದ್ದಂತೆ ವಿಪಕ್ಷಗಳನ್ನು ಹಣಿಯಲು ಕಾಂಗ್ರೆಸ್ ಏನು ಬೇಕಾದರೂ ಮಾಡುತ್ತದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಈ ಬಗ್ಗೆ ಪ್ರಧಾನಿ ಮೋದಿ ಹಲವು ಬಾರಿ ಹೇಳಿದ್ದಾರೆ. ಜೋಗೇಂದ್ರನಾಥ ಮಂಡಲ್ ಬಗ್ಗೆ ಉಲ್ಲೇಖಿಸಿದ್ದಾರೆ. 1934ರಲ್ಲಿಯೇ ಕಾನೂನು ಪಂಡಿತರಾಗಿ ಹೆಸರಾಗಿದ್ದ ಇವರು ಸ್ವಾತಂತ್ರ್ಯಾ ನಂತರದ ಘಟನೆಗಳಲ್ಲಿ ವಹಿಸಿದ ಪಾತ್ರ ಮಹತ್ತರವಾದುದು.

ಪಾಕಿಸ್ತಾನಕ್ಕೆ ಆಡಳಿತಾತ್ಮಕ ರೂಪುರೇಷೆ ಬರಲು ಕಾರಣವಾಗಿದ್ದ ಜೋಗೇಂದ್ರನಾತ್, ಸುಭಾಸ್‌ಚಂದ್ರ ಬೋಸರ ನಾಯಕತ್ವಕ್ಕೆ ಮಾರುಹೋಗಿದ್ದರು. ಬಂಗಾಳದ ವಿಭಜನೆಯನ್ನು ವಿರೋಧಿಸಿದ್ದ ಇವರು, ಕಾಂಗ್ರೆಸ್‌ನಿಂದ ಬೋಸರ ಉಚ್ಚಾಟನೆಯಾದಾಗ ಮನನೊಂದು ಮುಸ್ಲಿಂ ಲೀಗ್‌ನೊಂದಿಗೆ ತಮ್ಮ ರಾಜಕೀಯ ಜೀವನವನ್ನು ಬೆಸೆದುಕೊಂಡರು. ಇಲ್ಲಿಂದ ಇವರ ನಿರ್ಧಾರಗಳೆಲ್ಲ ಅಸಮಂಜಸವಾಗುತ್ತಾ ಹೋದವು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಹಂಗಾಮಿ ಸರಕಾರ ರಚನೆಯಾದಾಗ ಕಿಂಗ್ ಜಾರ್ಜ್ ಮೂಲಕ ಅಧಿಕಾರ ಸ್ವೀಕರಿಸಿ ಕಾನೂನು ಸಲಹಾ ಸಮಿತಿಯ ಮುಖ್ಯಸ್ಥವರಾದ್ದ ಜೋಗೇಂದ್ರರು ಬಾಂಬೆ ಚುನಾವಣೆಯಲ್ಲಿ ಅಂಬೇಡ್ಕರ್‌ರವರು ಕಾಂಗ್ರೆಸ್‌ನಿಂದ ಕಠಿಣ ಪರಿಸ್ಥಿತಿ ಎದುರಿಸಿದಾಗ ಅವರಿಗೆ ನೆರವಾದರು. ಸಂವಿಧಾನದ ರಚನೆಯ ವೇಳೆ ಅಂಬೇಡ್ಕರರು ಇವರೊಂದಿಗೆ ಪ್ರಮುಖ ವಿಚಾರಗಳನ್ನು

ಚರ್ಚಿಸಿ ನಿರ್ಧರಿಸಿದ್ದರ ಬಗ್ಗೆ ಉಲ್ಲೇಖವಿದೆ. ದೇಶ ವಿಭಜನೆಯಾಗಿ ಪಾಕಿಸ್ತಾನವು ಅಸ್ತಿತ್ವಕ್ಕೆ ಬರುವಾಗ ನಡೆದ ಉದ್ಘಾಟನೆ ಸಭೆಯ ಅಧ್ಯಕ್ಷತೆಯನ್ನು ಜೋಗೇಂದ್ರರೇ ವಹಿಸಲೆಂದು ಜಿನ್ನಾ ಹಠ ಹಿಡಿದಿದ್ದರಂತೆ! ಸ್ವತಂತ್ರಗೊಂಡ ಪಾಕ್‌ನ ಜಿನ್ನಾ ಸರ್ಕಾರದಲ್ಲಿ ಮೊಟ್ಟಮೊದಲ ಕಾನೂನು ಮತ್ತು ಕಾರ್ಮಿಕ ಸಚಿವರಾಗಿ ಮಹತ್ವದ ಪಾತ್ರ ವಹಿಸಿದ ಜೋಗೇಂದ್ರರು, ಕಾಲಾನಂತರದಲ್ಲಿ ದಲಿತರ ಮೇಲಿನ ಅತ್ಯಾಚಾರ, ಹಲ್ಲೆ, ಹಿಂದೂಗಳ ಕಗ್ಗೊಲೆಗಳನ್ನು ಬಹಿರಂಗವಾಗಿ ವಿರೋಧಿಸಿದ್ದರಿಂದ, ಲಿಯಾಖತ್ ಖಾನ್‌ನಿಂದ ದೇಶ ತೊರೆಯುವಂತೆ ಬೆದರಿಕೆ ಬಂತು, ಹತ್ಯೆಯ ಯತ್ನವೂ ಆಯಿತು. ಹೀಗಾಗಿ ಪಾಕಿಸ್ತಾನವನ್ನು ತೊರೆದು ಕೋಲ್ಕತಾ ಸಮೀಪದ ಬೋಂಗಾವ್ ಗ್ರಾಮದಲ್ಲಿ ಅಪರಿಚಿತರಂತೆ ಬದುಕುತ್ತ, 1968ರಲ್ಲಿ ತೀರಿಕೊಂಡರು.

ಈ ದೇಶವು ದಲಿತರನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎನ್ನುತ್ತ ಧರ್ಮ ಜಾತಿಯಾಧಾರಿತ ರಾಜಕಾರಣ ಮಾಡುತ್ತ ಮತಬೇಟೆಗಿಳಿಯುವ ಕಾಂಗ್ರೆಸ್‌ಗೆ ಮಾರುತ್ತರವಾಗಿ ಮೋದಿಯವರು, "ಕಾಂಗ್ರೆಸ್‌ನವರು ಮತ್ತು ಪಾಕಿಸ್ತಾನದವರು ಹಿಂದೂಗಳನ್ನು, ದಲಿತರನ್ನು ಹೇಗೆ ನಡೆಸಿಕೊಂಡಿದ್ದಾರೆ ಹಾಗೂ ನಾವು ಅಂಬೇಡ್ಕರ್‌ರನ್ನು ಹೇಗೆ ನಡೆಸಿಕೊಂಡಿದ್ದೇವೆ, ಅವರಿಗೆ ಸಲ್ಲಬೇಕಾದ ಸ್ಥಾನಮಾನವನ್ನು ಹೇಗೆ ಸಮರ್ಪಿಸಿದ್ದೇವೆ ಎಂಬುದನ್ನು ಪ್ರತಿ ಭಾರತೀಯರೂ ಇತಿಹಾಸದ ಸತ್ಯಪುಟಗಳನ್ನು ಓದುವ ಮೂಲಕ ತಿಳಿಯುತ್ತಾರೆ" ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅಂಬೇಡ್ಕರರ ವಿಷಯದಲ್ಲಿ ನೆಹರು ಬಗೆದ ದ್ರೋಹವನ್ನು ದೇಶದ ಹಿಂದುಳಿತ ದಲಿತ ನಾಯಕರಾರೂ ಮರೆಯಲಾಗದು. ಅಂಬೇಡ್ಕರ್ 2 ಅವಧಿಗೆ ಬಾಂಬೆ ಸ್ಟೇಟ್ ಪ್ರತಿನಿಧಿಯಾಗಿ ರಾಜ್ಯಸಭಾ ಸದಸ್ಯರಾಗಿದದರು, 2ನೇ ಅವಧಿ ಪೂರ್ಣಗೊಳ್ಳುವ ಮುನ್ನವೇ ನಿಧನರಾದರು. ಶ್ರೇಷ್ಠ ಸಂಸದೀಯ ಪಟುವಾಗಿದ್ದ ಅಂಬೇಡ್ಕರ್, ಸ್ವಾತಂತ್ರ್ಯ ನಂತರದ ಕಾಂಗ್ರೆಸ್ ಸರ್ಕಾರದಲ್ಲಿ ಕಾನೂನು ಮಂತ್ರಿಯಾಗಿದ್ದರು. ಸಂವಿಧಾನ ರಚನೆಯಲ್ಲಿ ಅಪಾರ ಶ್ರಮವಹಿಸಿ, ದಲಿತರು ದಮನಿತರ ಹಕ್ಕುಗಳಿಗಾಗಿ ದುಡಿದ ಅವರು 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲುಣ್ಣಬೇಕಾಯಿತು. ಈ ಚುನಾವಣೆಯಲ್ಲಿ ಅಂಬೇಡ್ಕರ್ ಮುಂಬೈ ನಾರ್ಥ್ ಸೆಂಟ್ರಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಇವರ ವಿರುದ್ಧ ದಲಿತನಾಯಕ ಎಂದು ಗುರುತಿಸಿಕೊಂಡಿದ್ದ ನಾರಾಯಣ ಸದೋಬ ಕಜ್ರೋಲ್ಕರ್ ಕಾಂಗ್ರೆಸ್‌ನಿಂದ ಕಣಕ್ಕಿಳಿದು ಅಂಬೇಡ್ಕರರನ್ನು ಸೋಲಿಸಿದರು. ಅಚ್ಚರಿಯೆಂದರೆ, ಇವರು ಹಲವು ವರ್ಷಗಳವರೆಗೆ ಅಂಬೇಡ್ಕರರ ಆಪ್ತಸಹಾಯರಾಗಿದ್ದವರು, ಚುನಾವಣೆಯಲ್ಲಿ ಸೋತರೂ ಅಂಬೇಡ್ಕರರನ್ನು ರಾಜ್ಯಸಭಾ ಸದಸ್ಯರಾಗಿ ಆಯ್ಕೆಮಾಡಲಾಯಿತು. ಅವರು 1956ರಲ್ಲಿ ದಿವಂಗತರಾದ ಮರುವರ್ಷವೇ ಸಾರ್ವತ್ರಿಕ ಚುನಾವಣೆ ನಡೆಯಿತು. ಅಂಬೇಡ್ಕರರನ್ನು ರಾಜಕೀಯವಾಗಿ ಮೂಲೆಗುಂಪಾಗಿಸಿದ್ದಕ್ಕೆ ಋಣ ಸಂದಾಯವೆಂಬಂತೆ, ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರ ಕಜ್ರೋಲ್ಕರ್‌ರವರಿಗೆ 1970ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿತು. ಚುನಾವಣಾ ಸೋಲು ಅಂಬೇಡ್ಕರರಿಗೆ ನೋವು ತಂದಿತ್ತು. ಏಕೆಂದರೆ ಮಹಾರಾಷ್ಟ್ರ ಅವರ ಕರ್ಮಭೂಮಿಯಾಗಿತ್ತು. ಹೀಗಾಗಿ ಅಂಬೇಡ್ಕರ್ ಸುದ್ದಿ ಸಂಸ್ಥೆಯೊಂದರ ಜೊತೆ ಮಾತನಾಡುತ್ತಾ, ಬಾಂಬೆಯ ಜನರ ಅಗಾಧ ಬೆಂಬಲವನ್ನು ಇಷ್ಟು ಕೆಟ್ಟದಾಗಿ ಹೇಗೆ ನಿರಾಕರಿಸಲಾಯಿತು? ಇದು ಚುನಾವಣಾ ಆಯುಕ್ತರು ತನಿಖೆ ನಡೆಸಬೇಕಾದ ವಿಷಯವಾಗಿದೆ" ಎನ್ನುವ ಮೂಲಕ ಮತ ಎಣಿಕೆಯ ವಿಷಯದಲ್ಲಿ ಆಗಿರಬಹುದಾದ ಅಕ್ರಮದ ಬಗ್ಗೆ ಸಂಶಯದ ದನಿಯೆತ್ತಿದ್ದರು. ಚುನಾವಣಾ ಫಲಿತಾಂಶವನ್ನು ಅಸಿಂಧು ಎಂದು ಘೋಷಿಸುವಂತೆ ಕೋರಿ ಅಂಬೇಡ್ಕರರು ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ಸಲ್ಲಿಸಿದ್ದರು. "74,333 ಮತಪತ್ರಗಳನ್ನು ತಿರಸ್ಕರಿಸಲಾಗಿದೆ ಮತ್ತು ಎಣಿಕೆ ಮಾಡಲಾಗಿಲ್ಲ" ಎಂದು ಅವರು ಅದರಲ್ಲಿ ಉಲ್ಲೇಖಿಸಿದ್ದರು. ಆದರೆ ಈ ದೂರಿನ ಬಗ್ಗೆ ಚುನಾವಣಾ ಆಯೋಗ ಕೈಗೊಂಡ ಕ್ರಮವೇನು ಎಂಬುದು ಬಹಿರಂಗವಾಗಲಿಲ್ಲ.

ಈ ಹಿನ್ನಡೆಯ ನಂತರ ಅಂಬೇಡ್ಕರರು 1954ರಲ್ಲಿ ಮಹಾರಾಷ್ಟ್ರದ ಭಂಡಾರಾ ಕ್ಷೇತ್ರದಿಂದ ಉಪಚುನಾವಣೆಯಲ್ಲಿ ಸ್ಪರ್ಧಿಸಿದರೂ, ಕಾಂಗ್ರೆಸ್‌ನವರಿಂದ ಸೋತರು. ಈ ಘಟ್ಟದಲ್ಲಿ ಅಂಬೇಡ್ಕರರು ನೆಹರುರ ವಿದೇಶಾಂಗ ನೀತಿಯನ್ನು ಟೀಕಿಸಿದರು. ಅಂಬೇಡ್ಕರರನ್ನು ಮುಖ್ಯವಾಹಿನಿ ರಾಜಕೀಯದಿಂದ ದೂರವಿಟ್ಟು ಅವರ ಪ್ರಭಾವವನ್ನು ಕುಗ್ಗಿಸಲು ನೆಹರು ಯತ್ನಿಸಿದ್ದ ಹೌದು ಅಂಬೇಡ್ಕರ್ ನೆಹರುರವರ ನಡುವಿನ ಮುಖಾಮುಖಿಯು, ಸಿದ್ಧಾಂತಗಳ ಮತ್ತು ಆಕಾಂಕ್ಷೆಗಳ ವೈರುಧ್ಯವನ್ನು ತೋರಿಸಿತು. ಸ್ವಾತಂತ್ರ್ಯ ನಂತರದ ನೆಹರು ನೇತೃತ್ವದ ಮಧ್ಯಂತರ ಸರ್ಕಾರದಲ್ಲಿ ಅಂಬೇಡ್ಕರ್ ಕಾನೂನು ಸಚಿವರಾಗಿದ್ದು ಹೌದಾದರೂ ಅವರ ಅಧಿಕಾರಾವಧಿ ಅಲ್ಪಕಾಲಿಕವಾಗಿತ್ತು. ಹಿಂದೂಗಳಿಗೆ

ತಾರತಮ್ಯವೆಸಗುವಂತಿದ್ದ **'ಹಿಂದೂ ಕೋಡ್ ಬಿಲ್'** ವಿಷಯದಲ್ಲಿನ ನೆಹರು ನೀತಿಯನ್ನು ಕಟುವಾಗಿ ವಿರೋಧಿಸಿದ ಅಂಬೇಡ್ಕರ್ 1951ರ ಸೆಪ್ಟೆಂಬರ್ 27ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತರು. ಅವರ ಮತ್ತು ನೆಹರು ನಡುವಿನ ಭಿನ್ನಾಭಿಪ್ರಾಯಕ್ಕೆ ಇದು ಸಾಕ್ಷಿ. ನೆಹರು ಸಂಪುಟದಿಂದ ಶ್ಯಾಮಪ್ರಸಾದ್ ಮುಖರ್ಜಿಯವರ ನಿರ್ಗಮನ ಮತ್ತು ಭಾರತೀಯ ಜನಸಂಘದ ಸ್ಥಾಪನೆ ದೇಶದ ರಾಜಕೀಯದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾದವು. ಚುನಾವಣೆಯಲ್ಲಿ ಅಂಬೇಡ್ಕರರ ಸ್ಪರ್ಧೆಯನ್ನು ಬೆಂಬಲಿಸಿದವರಲ್ಲಿ ಶ್ಯಾಮಪ್ರಸಾದ್ ಮುಖರ್ಜಿ ಅವರಿದ್ದುದು ನೆಹರು ಕೋಪಕ್ಕೆ ಕಾರಣವಾಗಿತ್ತಂತೆ! ಸ್ವತಂತ್ರ ಭಾರತದ ಮೊದಲ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಯಾಗಿದ್ದ ಮುಖರ್ಜಿಯವರು, ನಹರು ಮತ್ತು ಲಿಯಾಖತ್ ಖಾನ್ ನಡುವೆ ನಡೆದ ಒಪ್ಪಂದವನ್ನು ಕಟುವಾಗಿ ವಿರೋಧಿಸಿ, ರಾಜೀನಾಮೆಯಿತ್ತು ನೆಹರು ಸಂಪುಟದಿಂದ ಹೊರಬಂದಿದ್ದರು. 'ಒಂದು ದೇಶ, ಎರಡು ಸಂವಿಧಾನ'ದಂಥ ಮಾರಕ ಕಾನೂನನ್ನು (ಕಲಂ 370) ವಿರೋಧಿಸಿ ಮುಖರ್ಜಿಯವರು ನೆಹರು ವಿರೋಧದ ನಡುವೆಯೂ ಕಾಶ್ಮೀರವನ್ನು ಪ್ರವೇಶಿಸಿದಾಗ, ಶ್ರೀನಗರದ ಪೊಲೀಸರು ಅವರನ್ನು ಬಂಧಿಸಿ ಪ್ರಶಸ್ತವಲ್ಲದ ಗುಡಿಸಲಿನಲ್ಲಿ ಇರಿಸಿದರು. ಜ್ವರದ ಕಾರಣ ನೀಡಿ, ಮುಖರ್ಜಿಯವರ ದೇಹಪ್ರಕೃತಿಗೆ ವಿರುದ್ಧವಾಗಿದ್ದ ಸಪ್ರೋಮೈಸಿನ್ ಎಂಬ ಔಷಧವನ್ನು ಚುಚ್ಚುಮದ್ದಿನ ರೂಪದಲ್ಲಿ ನೀಡಲಾಯಿತು. ಇದಾಗಿ 3 ದಿನಗಳ ನಂತರ ಮುಖರ್ಜಿಯವರ ಶವ ದೊರಕಿತು ಎಂದು ದಾಖಲಿಸಲಾಗಿದೆ.

ಹೀಗೆ ಅಂದಿನ ನೆಹರು ಅವರಿಂದ ಮೊದಲ್ಗೊಂಡು ಇಂದಿನವರೆಗೆ ಕಾಂಗ್ರೆಸ್ಸಿಗರು ಅನೇಕರು ತಮ್ಮ ವಿರೋಧಿಗಳನ್ನು ಯಾವ ವಿಧಾನದಲ್ಲಾದರೂ ಸೋಲಿಸುವ ದಾರಿ ಹುಡುಕುತ್ತ, ಈ ದೇಶದ ಜನರಲ್ಲಿ ಜಾತಿ–ಧರ್ಮದ ಒಡಕಿನ ಬೀಜ ಬಿತ್ತುತ್ತ ರಾಜಕೀಯ ಮಾಡುತ್ತಲೇ ಬಂದಿದ್ದಾರೆ. ಇದೂ ಸೇರಿದಂತೆ, ಪ್ರತ್ಯೇಕ ಕಾಶ್ಮೀರವನ್ನು ಅಂಬೇಡ್ಕರರು ವಿರೋಧಿಸಿದ್ದು, ಸಂವಿಧಾನದ ಮೂಲ ಪ್ರಸ್ತಾವನೆಯನ್ನೇ ಕಾಂಗ್ರೆಸ್ ಬದಲಿಸಿದ್ದು, ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದು ಇತ್ಯಾದಿಗಳನ್ನು ಕೃತಿಕಾರರು ಈ ಪುಸ್ತಕದಲ್ಲಿ ಮನಮುಟ್ಟುವಂತೆ ತೆರೆದಿಟ್ಟಿದ್ದಾರೆ.

ಸ್ವತಂತ್ರ ಭಾರತದ ಇಂದಿನ ನವತರುಣರು ವಾಸ್ತವಿಕತೆಯನ್ನು, ಜಾಗತಿಕ ವಿದ್ಯಮಾನಗಳನ್ನು ಸರಿಯಾಗಿ ಅರಿತು ದೇಶದ ಭವಿಷ್ಯತ್ತನ್ನು ನಿರ್ಧರಿಸಬಲ್ಲದಷ್ಟು ಜಾಣ್ಮೆ ಹೊಂದಿದ್ದಾರೆ. ಇಂದಿನ ಜಾಗೃತ ಸಮಾಜವು ಕೂಡ, ರಾಜಕಾರಣಿಗಳ ಬಲವಂತದ ಮಾಘಸ್ನಾನವನ್ನು ತುಂಬಾ ವರ್ಷಗಳ ಕಾಲ ಸಹಿಸಿಕೊಳ್ಳುವುದಿಲ್ಲ. ಇದಕ್ಕೆ ಕಾಲಘಟ್ಟವೇ ಉತ್ತರಿಸಬಲ್ಲದು!

ಸಂವಿಧಾನದ ಬದಲಾವಣೆ ಎಂಬ ಮಾತು ಭಾರತದಲ್ಲಿ ಆಗಿಂದಾಗ್ಗೆ ಸದ್ದು ಮಾಡುತ್ತಲೇ ಇರುತ್ತದೆ. ಕಳೆದ ಲೋಕಸಭಾ ಚುನಾವಣೆಯಲ್ಲಂತೂ ಈ ವಿಚಾರ ಸಾಕಷ್ಟು ಚರ್ಚೆಗೆ ಬಂದಿತ್ತು ಮತ್ತು ಅದನ್ನೂ ಕಾಂಗ್ರೆಸ್ ಪ್ರಧಾನ ಅಜೆಂಡಾ ಆಗಿ ಚುನಾವಣಾ ಪ್ರಚಾರದಲ್ಲಿ ಬಳಸಿಕೊಂಡಿತ್ತು. ಸಂವಿಧಾನ ಬದಲಾವಣೆ ವಿಷಯದಲ್ಲಿ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಬಿಜೆಪಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಬಿಟ್ಟಿವೆ. ಆದರೆ ಕಾಂಗ್ರೆಸ್‌ನ ಅಧಿಕಾರಾವಧಿಯಲ್ಲಿ 75 ಬಾರಿ ಸಂವಿಧಾನದ ತಿದ್ದುಪಡಿಯಾಗಿದೆ. ಅಟಲ್ ಬಿಹಾರಿ ವಾಜಪೇಯಿ ಅವರ ಅವಧಿಯಲ್ಲಿ 14 ಬಾರಿ, ಈಗಿನ ಪ್ರಧಾನಿ ಮೋದಿಯವರ ಅವಧಿಯಲ್ಲಿ 8 ಬಾರಿ ತಿದ್ದುಪಡಿ ಮಾಡಲಾಗಿದೆ. ಆದರೆ ಎಲ್ಲಿಯೂ ಸಂವಿಧಾನದ ಆಶಯಕ್ಕೆ ಧಕ್ಕೆ ತರುವಂಥ ತಿದ್ದುಪಡಿಯಾಗಿಲ್ಲ. ಹಾಗಾದರೆ ಸಂವಿಧಾನವನ್ನು ನಿಜವಾಗಿಯೂ ತಿದ್ದುಪಡಿ ಮಾಡಿದ್ದು ಯಾರು? ಅಂಬೇಡ್ಕರರ ಮೂಲ ಆಶಯ ಏನಾಗಿತ್ತು? ಕಾಂಗ್ರೆಸ್ ಹಾಗೂ ಎಡಪಕ್ಷಗಳು ಈ ವಿಚಾರದಲ್ಲಿ ಹೆಣೆದ ರಾಜಕೀಯ ಸಂಕಥನಗಳೇನು? ಎಂಬೆಲ್ಲದರ ಕುರಿತಾದ ಸಮಗ್ರ ಚಿತ್ರಣವನ್ನು ಸಂವಿಧಾನ ಬದಲಾಯಿಸಿದ್ದು ಯಾರು? ಎಂಬ ಈ ಕೃತಿಯಲ್ಲಿ ವಿಕಾಸ್‌ಕುಮಾರ್ ಅರ್ಥವತ್ತಾಗಿ ನೀಡಿದ್ದಾರೆ. ವಾಸ್ತವವನ್ನು ಅರಿಯಬಯಸುವವರು ಇದನ್ನೊಮ್ಮೆ ಓದಲೇಬೇಕು. ಈ ಪುಸ್ತಕವನ್ನು ಓದಿದಾಗ ನನಗೆ ಅನಿಸಿದ್ದಿಷ್ಟು, ನಿಮಗೂ ಇನ್ನಷ್ಟು ಹೊಳಹುಗಳು ಸಿಗಬಹುದು, ವಾಸ್ತವತೆಯ ಅರಿವು ಮೂಡಬಹುದು.

**ಆಧಾರ:**ವಿಶ್ವವಾಣಿ, ದಿನಾಂಕ:28.11.2024
**ಲೇಖಕರು:**ಗುರುರಾಜ್ ಗಂಟಿಹೊಳೆ

# ಭಾಗ–10

# ಶ್ರದ್ಧಾಂಜಲಿ

## 1. ಮನೋಹರ ಹನುಮಂತಪ್ಪ ತಹಶೀಲ್ದಾರ್, ಮಾಜಿ ಸಚಿವರು



ಮಾಜಿ ಸಚಿವರು ಹಾಗೂ ಹಿರಿಯ ರಾಜಕಾರಣಿಯಾಗಿದ್ದ ಮನೋಹರ ತಹಶೀಲ್ದಾರ್ (79) ದಿನಾಂಕ:21.11.2024ರಂದು ನಿಧನರಾದರು.

ರಾಜ್ಯದ ಮಾಜಿ ಸಚಿವರಾಗಿದ್ದ ಮನೋಹರ ಹನುಮಂತಪ್ಪ ತಹಶೀಲ್ದಾರ್‌ರವರು ದಿನಾಂಕ: 21.07.1946ರಂದು ಹರಿಹರದಲ್ಲಿ ಜನಿಸಿದ್ದು, ಬಿ.ಇ. (ಮೆಕ್ಯಾನಿಕಲ್) ಪದವಿಯನ್ನು ಪಡೆದಿದ್ದರು. 1978ರಲ್ಲಿ ಮೊದಲ ಬಾರಿಗೆ ಹಾನಗಲ್ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದ ಅವರು ನಂತರ 1989, 1999, 2013ರಲ್ಲಿ ವಿಧಾನಸಭೆಗೆ ಪುನರ್ ಆಯ್ಕೆಗೊಂಡಿದ್ದರು. 1999 ರಿಂದ 2004ರವರೆಗೆ ವಿಧಾನಸಭಾ ಉಪ ಸಭಾಧ್ಯಕ್ಷರಾಗಿ ಹಾಗೂ 2015ರಲ್ಲಿ ಅಬಕಾರಿ ಸಚಿವರಾಗಿಯೂ ಸಹ ಕಾರ್ಯನಿರ್ವಹಿಸಿದ್ದರು.

## 2. ಎಸ್.ಎಂ.ಕೃಷ್ಣ, ಮಾಜಿ ಮುಖ್ಯಮಂತ್ರಿಗಳು



ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಹಾಗೂ ಹಿರಿಯ ಸಜ್ಜನ ರಾಜಕಾರಣಿಯಾಗಿದ್ದ ಅಪ್ರತಿಮ ವಾಗ್ಮಿ ಎಸ್.ಎಂ.ಕೃಷ್ಣ (92) ಅವರು ದಿನಾಂಕ:10.12.2024ರಂದು ನಿಧನರಾದರು.

ಎಸ್.ಎಂ.ಕೃಷ್ಣ ಅವರು ದಿನಾಂಕ:01.05.1932ರಂದು ಮದ್ದೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ಜನಿಸಿದ್ದರು. ಬಿ.ಎ.,ಬಿ.ಎಲ್., ಪದವಿ ಪಡೆದಿದ್ದ ಅವರು ನಂತರ ಟೆಕ್ಸಾಸ್‌ನಲ್ಲಿ ಎಂ.ಸಿ.ಎಲ್., ಪದವಿ ವಾಷಿಂಗ್ಟನ್ ವಿಶ್ವವಿದ್ಯಾಲಯದ ಲಾ ಸ್ಕೂಲಿನಿಂದಲೂ ಪದವಿ ಪಡೆದಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಕಾನೂನು ಕಾಲೇಜಿನಲ್ಲಿ ಪ್ರೊಫಸರ್ ಆಗಿಯೂ ಕಾರ್ಯನಿರ್ವಸಿದ್ದರು. 1962ರಲ್ಲಿ ಪ್ರಥಮ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು ನಂತರ 1989ರಲ್ಲಿ 9ನೇ ವಿಧಾನಸಭೆಗೆ, 1999ರಲ್ಲಿ 11ನೇ ವಿಧಾನಸಭೆಗೆ ಹಾಗೂ 2004ರಲ್ಲಿ 12ನೇ ವಿಧಾನಸಭೆಗೆ ಪುನರಾಯ್ಕೆಗೊಂಡಿದ್ದರು. 1968ರಲ್ಲಿ 4ನೇ ಲೋಕಸಭೆಗೆ ಚುನಾಯಿತರಾಗಿದ್ದ ಅವರು 1971 ರಲ್ಲಿ 5ನೇ ಲೋಕಸಭೆಗೆ, 1980 ರಲ್ಲಿ 7ನೇ ಲೋಕಸಭೆಗೆ ಪುನರಾಯ್ಕೆಗೊಂಡಿದ್ದರು. ನಂತರ ಅವರು 1972ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡಿದ್ದು, 1996 ರಿಂದ 1999 ಮತ್ತು 2008 ರಿಂದ 2014ರ ಅವಧಿಯಲ್ಲಿ ರಾಜ್ಯಸಭಾ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಎಸ್.ಎಂ.ಕೃಷ್ಣ ಅವರು ವಿಧಾನ ಸಭೆಯ ಸಭಾಧ್ಯಕ್ಷರಾಗಿ, ಕೈಗಾರಿಕೆ, ವಾಣಿಜ್ಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ ಹಾಗೂ ನಂತರ ರಾಜ್ಯದ 10ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಕೇಂದ್ರ ಕೈಗಾರಿಕೆ ರಾಜ್ಯ ಸಚಿವರಾಗಿ, ಹಣಕಾಸು ಖಾತೆಯ ರಾಜ್ಯ ಸಚಿವರಾಗಿ ಹಾಗೂ ವಿದೇಶಾಂಗ ವ್ಯವಹಾರಗಳ ಖಾತೆ ಸಚಿವಾರಾಗಿಯೂ ಸಹ ಕಾರ್ಯನಿರ್ವಹಿಸಿದ್ದರು. 2008ರಲ್ಲಿ ಮಹಾರಾಷ್ಟ್ರ ರಾಜ್ಯದ 18ನೇ ರಾಜ್ಯಪಾಲರಾಗಿ ನೇಮಕಗೊಂಡಿದ್ದರು.

ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಕನಸು ಕಂಡಿದ್ದ ಶ್ರೀಯುತರು ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಯೋಜನೆ, ಸರ್ಕಾರಿ ಮಕ್ಕಳಿಗೆ ಬಿಸಿಯೂಟ ಯೋಜನೆ, ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆ ಸೇರಿದಂತೆ ಹತ್ತು ಹಲವಾರು ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದ್ದರು. ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತುಕೊಟ್ಟಿದ್ದ ಅವರು ರಾಜ್ಯದಲ್ಲಿ ಐಟಿ–ಬಿಟಿ ಕ್ರಾಂತಿಯನ್ನೇ ಮಾಡಿದ್ದರು. ಬೆಂಗಳೂರನ್ನು ಸಿಲಿಕಾನ್ ಸಿಟಿಯನ್ನಾಗಿಸಿ, ಸಿಂಗಾಪುರ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರು.

ಎಸ್.ಎಂ.ಕೃಷ್ಣರವರು ಅತ್ಯುತ್ತಮ ಆಡಳಿತಗಾರರಾಗಿದ್ದರು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದದ ಶ್ರೀಯುತರು ಡಾ:ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ ಸಂದರ್ಭದಲ್ಲಿ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ ಅಪ್ರತಿಮವಾದದ್ದು, ತೀವ್ರತರವಾದ ಬರಗಾಲದ ಸಂದರ್ಭದಲ್ಲಿ ರಾಜ್ಯದ ಜನರ ಹಿತಾಸಕ್ತಿಗಾಗಿ ಮೋಡ ಬಿತ್ತನೆ ಮಾಡಿ ಮಳೆ ಬರಿಸಲು ಮುಂದಾಗಿದ್ದರು. ಸದಾಕಾಲ ಅಭಿವೃದ್ಧಿಯ ಚಿಂತಕರಾಗಿದ್ದ ಶ್ರೀಯುತರು ರಾಜ್ಯಕ್ಕೆ ನೀಡಿರುವ ಕೊಡುಗೆ ಅಪಾರವಾದುದು. ಬಹುಮುಖ ಪ್ರತಿಭೆಯಾಗಿದ್ದ ಅವರಿಗೆ 2023ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಗಿತ್ತು.

## 3. ಎಸ್.ಜಯಣ್ಣ, ವಿಧಾನ ಸಭೆ ಮಾಜಿ ಸದಸ್ಯರು



ವಿಧಾನಸಭೆ ಮಾಜಿ ಸದಸ್ಯರು ಹಾಗೂ ಹಿರಿಯ ರಾಜಕಾರಣಿ ಜಯಣ್ಣ. ಎಸ್ (73) ಅವರು ದಿನಾಂಕ:10.12.2024ರಂದು ನಿಧನರಾದರು.

ಜಯಣ್ಣ. ಎಸ್ ಅವರು ದಿನಾಂಕ:09.09.1951ರಂದು ಕೊಳ್ಳೇಗಾಲದಲ್ಲಿ ಜನಿಸಿದ್ದರು. ಎಂ.ಎ. ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದು, ರೇಷ್ಮೆ ಉದ್ಯಮಿಯೂ ಆಗಿದ್ದರು. ಪ್ರಸ್ತುತ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಅವರು ಕೊಳ್ಳೇಗಾಲ ಕ್ಷೇತ್ರದಿಂದ 1994ರಲ್ಲಿ 9ನೇ ವಿಧಾನಸಭೆಗೆ ಪ್ರಥಮ ಬಾರಿಗೆ ಆಯ್ಕೆಗೊಂಡು ನಂತರ 2013ರಲ್ಲಿ 14ನೇ ವಿಧಾನಸಭೆಗೆ ಪುನರಾಯ್ಕೆಗೊಂಡಿದ್ದರು.

## 4. ಆರ್. ನಾರಾಯಣ, ವಿಧಾನಸಭೆ ಮಾಜಿ ಸದಸ್ಯರು



ವಿಧಾನಸಭೆ ಮಾಜಿ ಸದಸ್ಯರು ಹಾಗೂ ಹಿರಿಯ ರಾಜಕಾರಣಿ ಆರ್. ನಾರಾಯಣ್(81) ಅವರು ದಿನಾಂಕ:12.12.2024 ರಂದು ನಿಧನರಾದರು.

ಆರ್. ನಾರಾಯಣ್ ಅವರು ದಿನಾಂಕ:07.07.1943ರಂದು ತುಮಕೂರಿನಲ್ಲಿ ಜನಿಸಿದ್ದರು. ಬಿ.ಎಸ್.ಸಿ. ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಕ್ರೀಡೆ ಹಾಗೂ ವಿದ್ಯಾಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದ ಅವರು ಬೆಳಗಾವಿ ವಿಧಾನಸಭಾ ಕ್ಷೇತ್ರದಿಂದ ಪ್ರಥಮ ಬಾರಿಗೆ 9ನೇ ವಿಧಾನಸಭೆಯನ್ನು ಪ್ರವೇಶಿಸಿದ್ದರು. ನಂತರ 10ನೇ ಹಾಗೂ 11ನೇ ವಿಧಾನಸಭೆಗೆ ಪುನರಾಯ್ಕೆಗೊಂಡಿದ್ದರು.

## 5. ಜೆ.ನರಸಿಂಹಸ್ವಾಮಿ, ವಿಧಾನ ಸಭೆಯ ಮಾಜಿ ಸದಸ್ಯರು



ವಿಧಾನಸಭೆ ಮಾಜಿ ಸದಸ್ಯರು ಹಾಗೂ ಹಿರಿಯ ರಾಜಕಾರಣಿ ಜೆ. ನರಸಿಂಹಸ್ವಾಮಿ(77) ಅವರು ದಿನಾಂಕ:15.12.2024ರಂದು ನಿಧನರಾದರು.

ಜೆ. ನರಸಿಂಹಸ್ವಾಮಿ ಅವರು ದಿನಾಂಕ:25.05.1947ರಂದು ತೂಬಗೆರೆಯಲ್ಲಿ ಜನಿಸಿದ್ದರು. ಪಿ.ಯು.ಸಿ ವಿದ್ಯಾರ್ಹತೆ ಹೊಂದಿದ್ದ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಬೆಂಗಳೂರು ಜಿಲ್ಲಾ ಪಂಚಾಯತ್ ಸದಸ್ಯರಾಗಿ ಹಾಗೂ ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಶ್ರೀಯುತರು ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರದಿಂದ 2004ರಲ್ಲಿ ಪ್ರಥಮ ಬಾರಿಗೆ 12ನೇ ವಿಧಾನಸಭೆಗೆ ಆಯ್ಕೆಗೊಂಡು, ನಂತರ 2008ರಲ್ಲಿ 13ನೇ ವಿಧಾನಸಭೆಗೆ ಪುನರಾಯ್ಕೆಗೊಂಡಿದ್ದರು.

## 6. ಶ್ರೀಮತಿ ಸಾವಿತ್ರಮ್ಮ ಎಂ. ಗುಂಡಿ, ವಿಧಾನ ಪರಿಷತ್ ಮಾಜಿ ಸದಸ್ಯರು



ವಿಧಾನಪರಿಷತ್ ಮಾಜಿ ಸದಸ್ಯರು ಹಾಗೂ ಸಮಾಜ ಸೇವಕಿ ಶ್ರೀಮತಿ ಸಾವಿತ್ರಮ್ಮ ಎಂ. ಗುಂಡಿ (82) ಅವರು ದಿನಾಂಕ:15.11.2024ರಂದು ನಿಧನರಾದರು.

ಸಾವಿತ್ರಮ್ಮ ಎಂ. ಗುಂಡಿ ಅವರು ದಿನಾಂಕ:09.08.1942ರಂದು ದಾವಣಗೆರೆಯಲ್ಲಿ ಜನಿಸಿದ್ದರು. ಬಿ.ಎಸ್.ಸಿ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಮಹಿಳಾ ಸಂಘಟಕರಾಗಿ ಸಮಾಜ ಸೇವೆಯ ಜೊತೆಗೆ ಹುಬ್ಬಳ್ಳಿ ಕೊಳಗೇರಿ ನಿವಾಸಿಗಳ ಪುನರ್ವಸತಿಗಾಗಿ ಅವಿರತವಾಗಿ ಶ್ರಮಿಸಿದ್ದರು. 1985–1986 ಮತ್ತು 1986–99ರ ಅವಧಿಗೆ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಎರಡು ಬಾರಿ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

## 7. ಕೇಶವರಾವ್ ತಾತ್ಯ ನಿಟ್ಟೂರ್‌ಕರ್, ವಿಧಾನ ಪರಿಷತ್ತಿನ ಮಾಜಿ ಶಾಸಕರು



ವಿಧಾನಪರಿಷತ್‌ನ ಮಾಜಿ ಶಾಸಕರು ಹಾಗೂ ಉಪ ಸಭಾಪತಿಗಳಾಗಿದ್ದ ಕೇಶವರಾವ್ ತಾತ್ಯ ನಿಟ್ಟೂರ್‌ಕರ್(102) ಅವರು ದಿನಾಂಕ:12.12.2024ರಂದು ನಿಧನರಾದರು.

ಹಿರಿಯ ರಾಜಕಾರಣಿಯಾಗಿದ್ದ ಶತಾಯುಷಿ ಕೇಶವರಾವ್ ತಾತ್ಯ ನಿಟ್ಟೂರ್‌ಕರ್ ಅವರು 1922ರಂದು ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಜನಿಸಿದ್ದರು. ಅವರು ಹೈದರಾಬಾದ್‌ನ ಕಾನೂನು ವಿಶ್ವವಿದ್ಯಾಲಯದಲ್ಲಿ ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿನ ವಿವಿಧ ಮಂಡಳಿಗಳಲ್ಲಿ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಲ್ಲದೇ, ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿಯೂ ಸಹ ಕಾರ್ಯನಿರ್ವಹಿಸಿದ್ದರು. 1958 ರಿಂದ 1960, 1960–1966 ಹಾಗೂ 1966–1972ರವರೆಗೆ ಮೂರು ಬಾರಿ ಮೈಸೂರು ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ, 1958ರಿಂದ 1960ರವರೆಗೆ ಉಪ ಸಭಾಪತಿಗಳಾಗಿ ಕಾರ್ಯನಿರ್ವಹಿಸಿದ್ದರು.

# 8. ಡಾ.ಮನಮೋಹನ್ ಸಿಂಗ್, ಮಾಜಿ ಪ್ರಧಾನಿಗಳು



ಡಾ.ಮನಮೋಹನ್ ಸಿಂಗ್, ಮಾಜಿ ಪ್ರಧಾನಿಗಳು, ಆರ್ಥಿಕ ಸುಧಾರಣೆಯ ಹರಿಕಾರ, ಹಾಗೂ ಅರ್ಥಕ್ರಾಂತಿಯ ರಾಜನೀತಿತಜ್ಞರು ದಿನಾಂಕ:26.12.2024ರಂದು ನಿಧನರಾದರು.

ಡಾ:ಮನಮೋಹನ್ ಸಿಂಗ್ ಅವರು ದಿನಾಂಕ:26.09.1932 ರಂದು ಅವಿಭಜಿತ ಭಾರತದ ಪಂಜಾಬ್ ಪ್ರಾಂತ್ಯದಲ್ಲಿ ಜನಿಸಿದ್ದರು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಆನರ್ಸ್ ಪದವಿ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಿ.ಫಿಲ್., ಪದವಿಯನ್ನು ಪಡೆದಿದ್ದರು. ಶ್ರೀಯುತರು ದೆಹಲಿಯ ಪ್ರತಿಷ್ಠಿತ ಆರ್ಥಿಕ ಶಾಲೆಯಲ್ಲಿ ಬೋಧಕರಾಗಿದ್ದ ಅವರು ನಂತರ ಜನೀವಾದಲ್ಲಿನ ದಕ್ಷಿಣ ಆಯೋಗಕ್ಕೆ ಮಹಾ ಪ್ರಧಾನ ಕಾರ್ಯದರ್ಶಿ ಹಾಗೂ ಕಮೀಷನರಾಗಿ ನೇಮಕಗೊಂಡಿದ್ದರು. ವಾಣಿಜ್ಯ ಸಚಿವಾಲಯದಲ್ಲಿ ಆರ್ಥಿಕ ಸಲಹೆಗಾರ, ಹಣಕಾಸು ಸಚಿವಾಲಯದ ಮುಖ್ಯ ಆರ್ಥಿಕ ಸಲಹೆಗಾರ ಹಾಗೂ ಕಾರ್ಯದರ್ಶಿಯಾಗಿ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿ, ಪ್ರಧಾನಮಂತ್ರಿಯವರ ಸಲಹೆಗಾರರಾಗಿ, ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷರಾಗಿ ಸರ್ಕಾರದ ಹಲವಾರು ಹುದ್ದೆಗಳನ್ನು ಶ್ರೀಯುತರು ಅಲಂಕರಿಸಿದ್ದರು.

1991 ರಿಂದ 2019ರವರೆಗೆ ಅಸ್ಸಾಂ ರಾಜ್ಯದಿಂದ ಮತ್ತು 2019ರಿಂದ 2024ರವರೆಗೆ ರಾಜಸ್ಥಾನ ರಾಜ್ಯದಿಂದ ಒಟ್ಟು 6 ಬಾರಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಗೊಂಡಿದ್ದ ಶ್ರೀಯುತರು 1991–1996ರವರೆಗೆ ಕೇಂದ್ರ ಹಣಕಾಸು ಸಚಿವರಾಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಮಾಡಿದ ಆರ್ಥಿಕ ಸುಧಾರಣೆಗಳು ಇಂದಿಗೂ ವಿಶ್ವದ ಮನ್ನಣೆ ಪಡೆದಿದೆ. 1998 ರಿಂದ 2004ರವರೆಗೆ ಪ್ರತಿಪಕ್ಷದ ನಾಯಕನ ಸ್ಥಾನವನ್ನು ಹೊಂದಿದ್ದ ಅವರು 2004ರಲ್ಲಿ ಆಡಳಿತಕ್ಕೆ ಬಂದ United Progressive Alliance ಅಲಂಕರಿಸಿದ್ದರು. ಆ ಅವಧಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್, ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಮಾಹಿತಿ ಹಕ್ಕು ಅಧಿನಿಯಮ ಜಾರಿ ಸೇರಿದಂತೆ ಹತ್ತು ಹಲವಾರು ಜನಪ್ರಿಯ ಶಾಸನಗಳು ಹಾಗೂ ಯೋಜನೆಗಳನ್ನು ಜಾರಿಗೆ ತಂದರು. ಪುನಃ 2009ರಲ್ಲಿ ಪ್ರಧಾನಮಂತ್ರಿಯಾಗಿ ಆಯ್ಕೆಗೊಂಡಿದ್ದರು. ಎರಡನೇ ಬಾರಿಗೆ ತೀವ್ರ ಬಿಕ್ಕಟ್ಟಿನ ಸಮಯದಲ್ಲಿ ದೇಶದ ಹಣಕಾಸು ಸಚಿವರಾಗಿ ನೇಮಕಗೊಂಡು ವಿದೇಶಾಂಗ ನೀತಿ, ಗ್ರಾಮೀಣ ಪ್ರಗತಿ ಎರಡರಲ್ಲೂ ಪಾರಮ್ಯ ಹೊಂದಿದ್ದ ಶ್ರೀಯುತರು ಜಾಗತಿಕ ಮಾರುಕಟ್ಟೆಗೆ ದೇಶವನ್ನು ಮುಕ್ತಗೊಳಿಸಿ, ಆರ್ಥಿಕ ಸುಧಾರಣೆಗಳನ್ನು ತರುವ ಮೂಲಕ ಭಾರತವು ಬಲಾಢ್ಯ ರಾಷ್ಟ್ರವಾಗಿ ಹೊರಹೊಮ್ಮಲು ಕಾರಣೀಭೂತರಾಗಿದ್ದಾರೆ. ಭಾರತದ ರಫ್ತು India's Export Trends and Prospects for Self Sustained Growth-1964 ಭಾರತದ ಆಂತರಿಕ ಆಧಾರಿತ ವ್ಯಾಪಾರ ನೀತಿಯ ಆರಂಭಿಕ ವಿಮರ್ಶೆಯಾಗಿತ್ತು. ಇವರು ಪದ್ಮವಿಭೂಷಣ, ನೆಹರೂ ಜನ್ಮ ಶತಮಾನೋತ್ಸವ ಪ್ರಶಸ್ತಿ, ಏಷ್ಯಾ ವಿತ್ತ ಪ್ರಶಸ್ತಿ, ಯುರೋಹಣ ಪ್ರಶಸ್ತಿ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಅಡಮ್‌ಸ್ಮಿತ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

* * * * *